

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 24 ಗುರುವಾರ 2023

ಸಂಪುಟ: 44 | ಸಂಚಿಕೆ: 129 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಚಂದ್ರಯಾನ–3 ಯಶಸ್ವಿ

● ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಸುರಕ್ಷಿತ ಲ್ಯಾಂಡಿಂಗ್ ಮೂಲಕ ವಿಶ್ವ ದಾಖಲೆ
● ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದ ಇಸ್ರೋ ವಿಜ್ಞಾನಿಗಳು, ಕೋಟ್ಯಾನುಕೋಟಿ ಜನತೆ



ಬೆಂಗಳೂರು, ಆ.23–ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಹತ್ವಾಕಾಂಕ್ಷಿ ಚಂದ್ರಯಾನ–3 ಯಶಸ್ವಿಯಾಗಿದೆ. ಬುಧವಾರ ಸಂಜೆ 6.04ಕ್ಕೆ ಸರಿಯಾಗಿ ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲ್ಮೈಯಲ್ಲಿ ಯಶಸ್ವಿಯಾಗಿ ಲ್ಯಾಂಡಿಂಗ್ ಆಗಿದೆ.

ಇದರೊಂದಿಗೆ ಚಂದ್ರಯಾನ ಯಶಸ್ವಿಯಾಗಿ ಪೂರೈಸಿದ ವಿಶ್ವದ 4ನೇ ದೇಶ ಹಾಗೂ ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡಿಂಗ್ ಮಾಡಿದ ಪ್ರಪ್ರಥಮ ದೇಶವಾಗಿ ಭಾರತ ವಿಶ್ವ ದಾಖಲೆ ಮಾಡಿದೆ.

ಜುಲೈ 14ರಂದು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಚಂದ್ರಯಾನ–3 ಉಡಾವಣೆಗೊಂಡಿತ್ತು. ಚಂದ್ರಯಾನ–2 ವೈಫಲ್ಯದ ನಂತರ ಅತ್ಯಂತ ಜಾಗರೂಕತೆಯಿಂದ ನಿರ್ವಹಣೆ ಮಾಡುತ್ತಿದ್ದ ಇಸ್ರೋ ವಿಜ್ಞಾನಿಗಳು, ಚಂದ್ರಯಾನ–3 ಯಶಸ್ವಿಗೊಳಿಸಲು ಪಣ ತೊಟ್ಟಿದ್ದರು. ಇದಕ್ಕಾಗಿ ಹಗಲು–ರಾತ್ರಿ ಪರಿಶ್ರಮಪಟ್ಟು ಚಂದ್ರನತ್ತ ಉಡಾವಣೆಗೊಂಡ ನೌಕೆ ಮೇಲೆ ದೃಷ್ಟಿ ನೆಟ್ಟಿದ್ದರು. ಅವರ ಪರಿಶ್ರಮಕ್ಕೆ ಇಂದು ಫಲ ಸಿಕ್ಕಿದೆ. ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಹ ಸಾಧನೆಗೆ ಇಸ್ರೋ ಸಾಕ್ಷಿಯಾಗಿದೆ. ಚಂದ್ರಯಾನ–3 ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯುವ ಸ್ಥಳ ನಿಗದಿಪಡಿಸಲಾಗಿತ್ತು. ಇದು ಶಾಶ್ವತ ನೆರಳಿನ ಪ್ರದೇಶವಾಗಿದ್ದು, ವಿಜ್ಞಾನಿಗಳು ಇಲ್ಲಿ ಸಂಪನ್ಮೂಲಗಳು ಸಮೃದ್ಧವಾಗಿವೆ. ಭವಿಷ್ಯದಲ್ಲಿ ಮಾನವ ಸಹಿತ ಕಾರ್ಯಾಚರಣೆಗಳಿಗೆ ಸೂಕ್ತವಾದ ಲ್ಯಾಂಡಿಂಗ್ ಸ್ಥಳ ಇದಾಗಬಹುದು ಎಂದು ನಂಬಿದ್ದಾರೆ. ● 10ನೇ ಪುಟಕ್ಕೆ

ಚಂದಿರನಲ್ಲಿ ನಡೆದಾಡುವ ಸಮಯ ಬಂದಿದೆ



ನವದೆಹಲಿ: ಭಾರತ ಈಗ ಚಂದಿರನ ಮೇಲಿದೆ. ಚಂದಮಾಮನ ಪಥದಲ್ಲಿ ಮಾನವ ಸಹಿತ ನಡೆದಾಡುವ ಸಮಯವೂ ಕೂಡಿ ಬಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ಅವರು, ಲ್ಯಾಂಡರ್ ವಿಕ್ರಮ್ ಚಂದ್ರನನ್ನು ಸ್ಪರ್ಶಿಸಿದ ತಕ್ಷಣವೇ ಭಾರತದ ಬಾವುಟವನ್ನು ಎತ್ತಿಹಿಡಿದು ಯಶಸ್ಸನ್ನು ಸೂಚಿಸಿದರು. ಇಸ್ರೋ ಕುಟುಂಬದ ಸಾಧನೆಗೆ ಚಪ್ಪಾಳೆಯ ● 10ನೇ ಪುಟಕ್ಕೆ

ಆ.26ಕ್ಕೆ ಬೆಂಗಳೂರಿನ ಇಸ್ರೋ ಕಚೇರಿಗೆ ಪ್ರಧಾನಿ ಮೋದಿ

ಬೆಂಗಳೂರು, ಆ.23–ಚಂದ್ರಯಾನ–3ರ ಯಶಸ್ಸಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಆ.26ರಂದು ಬೆಂಗಳೂರಿನ ಇಸ್ರೋಗೆ ಭೇಟಿ ನೀಡಲಿದ್ದಾರೆ. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಮೋದಿಯವರು, ಆ.26ರಂದು ಜೋಹಾನ್ಸ್‌ಬರ್ಗ್‌ನಿಂದ ನೇರವಾಗಿ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದ ಮೂಲಕ ಸಂಜೆ 5.55ಕ್ಕೆ ಆಗಮಿಸಲಿದ್ದು, 6.30ರವರೆಗೆ ವಿಮಾನ ನಿಲ್ದಾಣದಲ್ಲೇ ವಿಶ್ರಾಂತಿ ಪಡೆಯುವ ಅವರು, 7 ಗಂಟೆಗೆ ಇಸ್ರೋ ಕೇಂದ್ರ ಕಚೇರಿಗೆ ಭೇಟಿ ನೀಡಿ, ರಾತ್ರಿ 8 ಗಂಟೆಗೆ ಇಸ್ರೋ ವಿಜ್ಞಾನಿಗಳೊಂದಿಗೆ ಸಭೆ ನಡೆಸಿ, 8.35ಕ್ಕೆ ಬೆಂಗಳೂರಿನಿಂದ ನಿರ್ಗಮಿಸಲಿದ್ದಾರೆ.





ವರಮಹಾಲಕ್ಷ್ಮಿ ಹಬ್ಬಕ್ಕೆ 3 ದಿನ ಮುನ್ನವೇ ಖರೀದಿ ಜೋರು

●ಬೆಲೆ ಏರಿಕೆ ನಡುವೆಯೂ ಪೂಜಾ ಸಾಮಗ್ರಿ ಖರೀದಿ ಭರಾಟೆ ●ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಗ್ರಾಹಕರ ದಂಡು



ಮೈಸೂರಿನ ಚಿಕ್ಕಗಡಿಯಾರ ವೃತ್ತದಲ್ಲಿ ವರಮಹಾಲಕ್ಷ್ಮಿ ಹಬ್ಬಕ್ಕೆ ನಾನಾ ಪೂಜಾ ಸಾಮಗ್ರಿ ಖರೀದಿಯಲ್ಲಿ ಮಗ್ನರಾಗಿರುವ ಜನ.

ಮೈಸೂರು, ಆ.23(ಎಂಟಿವೈ)– ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಪೂಜಾ ಸಾಮಗ್ರಿ ಖರೀದಿ ಮೂರು ದಿನಗಳ ಮುನ್ನವೇ ಬಿರುಸಾಗಿದ್ದು, ಬೆಲೆ ಏರಿಕೆ ನಡುವೆಯೂ ಗ್ರಾಹಕರು ಹಬ್ಬಕ್ಕೆ ಅವಶ್ಯವಿರುವ ಪೂಜಾ ಸಾಮಗ್ರಿ ಖರೀದಿಯಲ್ಲಿ ಮಗ್ನರಾಗಿದ್ದಾರೆ.

ಹಿಂದೂ ಸಂಪ್ರದಾಯದಲ್ಲಿ ಸಂಪತ್ತು, ಐಶ್ವರ್ಯ ವೃದ್ಧಿಗೆ ಮಹಾಲಕ್ಷ್ಮಿಯನ್ನು ಆರಾಧಿಸುವ ವರಮಹಾಲಕ್ಷ್ಮಿ ವ್ರತಕ್ಕೆ ವಿಶೇಷ ಮಹತ್ವವಿದ್ದು, ಆ.25ರ ಶುಕ್ರವಾರ ನಾಡಿನಾದ್ಯಂತ ಶ್ರದ್ಧಾಭಕ್ತಿಯಿಂದ ವರಮಹಾಲಕ್ಷ್ಮಿ ಹಬ್ಬ ಆಚರಿಸಲಾಗುತ್ತದೆ. ಹಬ್ಬದ ದಿನದಂದು ಪೂಜಾ ಸಾಮಗ್ರಿಗಳ ಬೆಲೆ ಗಗನಕ್ಕೇರುವ ಸಾಧ್ಯತೆ ಇರುವುದರಿಂದ ಮೂರು ದಿನ ಮುನ್ನವೇ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಹಬ್ಬದ ತಯಾರಿ ಬಿರುಸಾಗಿದೆ. ದೇವರಾಜ ಮಾರುಕಟ್ಟೆ, ಧನ್ವಂತರಿ ರಸ್ತೆ, ಚಿಕ್ಕಗಡಿಯಾರ ವೃತ್ತ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ, ಎಂಜಿ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಪೂಜಾ ಸಾಮಗ್ರಿಗಳ ಮಾರಾಟ ಜೋರಾಗಿದೆ.

ಹಬ್ಬ ಆಚರಣೆಗೆ ಬೇಕಾಗುವ ಹೂವು, ಹಣ್ಣು, ಬಳೆ, ಪಿಚ್ಚಾಲೆ, ಅಲಂಕಾರಿಕ ವಸ್ತು, ತೆಂಗಿನಕಾಯಿ, ಬಾಳೆಹಣ್ಣು, ಸೀರೆ, ಕುಪ್ಪಸ, ಆಭರಣ, ಮುಖವಾಡ ಸೇರಿದಂತೆ ವಿವಿಧ ಸಾಮಗ್ರಿಗಳ ಮಾರಾಟ ಭರ್ಜರಿಯಾಗಿದೆ. ಅದರಲ್ಲೂ ರಸ್ತೆ ಬದಿ ಮಾರಾಟ ಮಾಡುತ್ತಿರುವ ಹೂವು, ಹಣ್ಣುಗಳ ವ್ಯಾಪಾರ ಖರೀದಿಗೆ ಜನ ಮುಗಿ ಬೀಳುತ್ತಿದ್ದಾರೆ.

ಹಬ್ಬದ ಹಿನ್ನೆಲೆಯಲ್ಲಿ ಸೇವಂತಿಗೆ ಹೂವು ಮಾರೊಂದಕ್ಕೆ 60 ರಿಂದ 100 ರೂ., ಬಾಳೆಹಣ್ಣು ಕೆಜಿಗೆ 80 –100, ಸೀಬೆಹಣ್ಣು ಕೆಜಿಗೆ 60 ರೂ., ಹೈಬ್ರೀಡ್ ಸೀಬೆಹಣ್ಣು ಕೆಜಿಗೆ 100 ರೂ. ದರದಲ್ಲಿ ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದಾರು. ಬೆಲೆ ಗಗನಕ್ಕೇರಿದ್ದರೂ ಜನರು ಮಾತ್ರ ಖರೀದಿಯಲ್ಲಿ ಮಗ್ನರಾಗಿದ್ದು, ವರಮಹಾಲಕ್ಷ್ಮಿ ಹಬ್ಬಕ್ಕೆ ಬಳಸುವ ಸೇವಂತಿಗೆ ಹೂವಿಗೆ ಭಾರಿ ಬೇಡಿಕೆ ವ್ಯಕ್ತವಾಗಿದೆ. ಹುಣಸೂರು, ಜಟಕೆರೆ, ಪಿರಿಯಾಪಟ್ಟಣ ಸೇರಿದಂತೆ ವಿವಿಧೆಡೆಯಿಂದ ರೈತರು ಸೇವಂತಿಗೆ ಹೂವನ್ನು ತಂದು ಮಾರಾಟ ಮಾಡಲಾರಂಭಿಸಿದ್ದಾರೆ. ನಾಳೆ(ಆ.24) ಬೆಳಿಗ್ಗಿನಿಂದಲೇ ಭಾರಿ ಪ್ರಮಾಣದ ಹೂವು ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಇನ್ನೆರಡು ದಿನವೂ ಹಬ್ಬದ ಸಾಮಗ್ರಿಗಳ ಬೆಲೆ ಕೈ ಸುಡಲಿದೆ. ಈ ಹಿನ್ನೆಲೆಯಲ್ಲಿ ಮೂರು ದಿನ ಮುನ್ನವೇ ಹಬ್ಬಕ್ಕೆ ಜನ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸೀರೆ ಅಂಗಡಿಯಲ್ಲಿ ವ್ಯಾಪಾರ ಜೋರು: ಲಕ್ಷ್ಮಿ ಮೂರ್ತಿ ಹಾಗೂ ಕಳಸಕ್ಕೆ ಉಡಿಸಲು ಸೀರೆ ಖರೀದಿಗೂ ಮಹಿಳೆಯರು ಮುಗಿ ಬಿದ್ದಿದ್ದರು. ಕಳಸಕ್ಕೆ ಉಡಿಸಲು ವಿವಿಧ ವಿನ್ಯಾಸದ ಸೀರೆಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಮಹಿಳೆಯರು ತಮಗಿಷ್ಟವಾದ ದೇವರ ವಸ್ತ್ರವನ್ನು ಖರೀದಿಸಿ ಪೂಜೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸ್ಟುಡೆಂಟ್ಸ್ ಬಯೋಮೆಟ್ರಿಕ್ ಅಥೆಂಟಿಕೇಷನ್ ಮಾಡಿಸಲು ಸೂಚನೆ

ಮೈಸೂರು, ಆ.23– ಮೈಸೂರು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿನ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಕಂ ಮೀನ್ಸ್ ವಿದ್ಯಾರ್ಥಿ ವೇತನಕ್ಕೆ NSPಯಲ್ಲಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಲ್ಲಿ ಕೆಲವು ಸೂಚಿತ ವಿದ್ಯಾರ್ಥಿಗಳ ಪಟ್ಟಿಯನ್ನು ಶಿಕ್ಷಣ ಸಂಸ್ಥೆಗೆ ಕಳುಹಿಸಲಾಗಿದೆ.

ವಿದ್ಯಾರ್ಥಿಗಳ ಸಂಖ್ಯೆ 30ಕ್ಕಿಂತ ಹೆಚ್ಚಿದ್ದಲ್ಲಿ, ಶಿಕ್ಷಣ ಸಂಸ್ಥೆಗಳಿಗೆ CSC ತಂಡವು ನೇರವಾಗಿ ಭೇಟಿ ನೀಡುತ್ತದೆ. ಆದರೆ ವಿದ್ಯಾರ್ಥಿಗಳ ಸಂಖ್ಯೆ 30ಕ್ಕಿಂತ ಕಡಿಮೆ ಇರುವ ಶಿಕ್ಷಣ ಸಂಸ್ಥೆಗಳು NSP ಸ್ಟುಡೆಂಟ್ಸ್ ಬಯೋಮೆಟ್ರಿಕ್ ಅಥೆಂಟಿಕೇಷನ್ ಮಾಡಿಸಲು, ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಯ HOI/ INO'Sಗಳ ಜೊತೆಯಲ್ಲಿ ಜಿಲ್ಲಾ ಕಚೇರಿಗೆ ಬಂದು ಆ.25ರೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೌಲಾನ ಆಜಾದ್ ಭವನ ಸಿ.ಎಸ್.ನಂ–1 ಶೋಭಾ ಗಾರ್ಡನ್ ಪಕ್ಕ ಬೆಂಗಳೂರು–ಮೈಸೂರು ರಸ್ತೆ, ಮೈಸೂರು–570007 ಅಥವಾ ದೂ.ಸಂಖ್ಯೆ: 0821–2422088, 8951087207 ಹಾಗೂ 9739944171 ಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುಹುದು ಎಂದು ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮೈಸೂರಿನಲ್ಲಿ ಗ್ರ್ಯಾಂಡ್ ಮುಫ್ತಿ ಅಸ್ಜದ್ ರಝಾ ಖಾನ್ ಧಾರ್ಮಿಕ ಪ್ರವಚನ

ಮೈಸೂರು, ಆ. 23– ದೇಶದ ಪ್ರಖ್ಯಾತ ಮುಸ್ಲಿಂ ಧರ್ಮಗುರು ಮುಫ್ತಿ ಅಸ್ಜದ್ ರಝಾ ಖಾನ್ ಆ.25ರಂದು ಮೈಸೂರಿಗೆ ಆಗಮಿಸಲಿದ್ದು, ಅಂದು ಸಂಜೆ 6 ಗಂಟೆಗೆ ನಗರದ ಕ್ಲಾಸಿಕ್ ಕನ್ವೆನ್ಷನ್ ಹಾಲ್‌ನಲ್ಲಿ ಧಾರ್ಮಿಕ ಪ್ರವಚನ ನೀಡಲಿದ್ದಾರೆ.

ಮುಫ್ತಿ ಅಸ್ಜದ್ ರಝಾ ಖಾನ್ ಅವರು ಭಾರತವಲ್ಲದೇ ದೇಶ ವಿದೇಶಗಳಲ್ಲೂ ಕೋಟ್ಯಾಂತರ ಅನುಯಾಯಿಗಳನ್ನು ಹೊಂದಿದ್ದಾರೆ. ದೇಶದ 67 ಇಸ್ಲಾಮಿಕ್ ಧಾರ್ಮಿಕ ಪಂಡಿತರ ತಂಡ ಅವರನ್ನು ಭಾರತದ ಇಸ್ಲಾಮಿಕ್ ಮುಖ್ಯ ನ್ಯಾಯಾಧೀಶರು ಎಂದು ಘೋಷಿಸಿದ್ದು, ಮುಸಲ್ಮಾನರಿಗೆ ಧಾರ್ಮಿಕ ಸಂದೇಶ ನೀಡುವುದರ ಜತೆಗೆ ಯಾವುದೇ ಇಸ್ಲಾಮಿಕ್ ಫತ್ವಾಗಳನ್ನು ಹೊರಡಿಸುವ ಅಧಿಕಾರವನ್ನು ಮುಫ್ತಿ ಅಸ್ಜದ್ ರಝಾ ಖಾನ್ ಅವರು ಹೊಂದಿದ್ದಾರೆ. ಆ.25 ರಂದು ಸಂಜೆ ಕೆ.ಆರ್. ನಗರದ ಮೂಲಕ ಮೈಸೂರು ಪ್ರವೇಶಿಸುವ ಮುಫ್ತಿ ಅವರನ್ನು ಹಿನ್ಕಲ್ ಬಳಿ ನೂರಾರು ಅಭಿಮಾನಿಗಳು ಸ್ವಾಗತಿಸಿ ರ್ಯಾಲಿ ಮೂಲಕ ಮೈಸೂರು ನಗರಕ್ಕೆ ಕರೆತರಲಿದ್ದಾರೆ.

ನಿಗದಿತ ಸಮಯಕ್ಕೆ ಆಗಮಿಸುವ ಮುಫ್ತಿ ಅವರು ಉದಯಗಿರಿ ಬಡಾವಣೆಯಲ್ಲಿರುವ ತಮ್ಮ ಅಭಿಮಾನಿಯೊಬ್ಬರ ನಿವಾಸದಲ್ಲಿ ಕೆಲಕಾಲ ತಂಗಲಿದ್ದು, ಬಳಿಕ ಕ್ಲಾಸಿಕ್ ಕನ್ವೆನ್ಷನ್ ಹಾಲ್‌ಗೆ ಬರಲಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

ದಿ ಮೈಸೂರು ಕ್ಲಬ್ ಆಡಳಿತ ಮಂಡಳಿ ಪದಾಧಿಕಾರಿಗಳ ನೇಮಕ



ಮೈಸೂರು, ಆ.23(ಎಸ್‌ಪಿಎನ್)– ದಿ ಮೈಸೂರು ಕ್ಲಬ್‌ನ 2023–25ನೇ ಸಾಲಿಗೆ ದ್ವೈವಾರ್ಷಿಕ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಮಾಜಿ ಮೇಯರ್ ಆರ್. ಲಿಂಗಪ್ಪ, ಕಾರ್ಯದರ್ಶಿಯಾಗಿ ಡಾ.ರಂಗಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎಂ.ಅಂಬರೀಷ್, ಜಂಟಿ ಕಾರ್ಯದರ್ಶಿಯಾಗಿ ಪಿ.ನಾಗೇಂದ್ರ, ಖಜಾಂಚಿಯಾಗಿ ಎ.ಆರ್.ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಲ್. ಕೃಷ್ಣ, ಎಸ್.ಆರ್.ಅನಿಲ್, ದೇಸೀಗೌಡ, ಎಲ್.ಭಾಸ್ಕರ್, ಶಿವಪ್ರಸಾದ್, ಎನ್.ಎಸ್. ರಮೇಶ್‌ಬಾಬು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾ.ತಿ.ಕೃಷ್ಣೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಡುವಾರಹಳ್ಳಿಯಲ್ಲಿ 'ಅರಸು' ಜಯಂತಿ



ಮೈಸೂರು,ಆ.23–ನಗರದ ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ಸಾಮಾಜಿಕ ಕ್ರಾಂತಿಯ ಹರಿಕಾರರು, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸರ ಜಯಂತಿಯನ್ನು ಶ್ರೀ ವಾಲ್ಮೀಕಿ ಪಥದಲ್ಲಿ ಹಮ್ಮಿಕೊಳ್ಳಲಾಗಿತ್ತು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಎನ್.ಬೆಟ್ಟೇಗೌಡ, ಎಂ.ಚಿಕ್ಕವೆಂಕಟು, ಸಿ.ಸಂತೋಷ್, ಕುಮಾರ್, ಬಿ.ಕುಮಾರ್, ರಾಘವ್ ಎಂ.ಗೌಡ, ಕೇಬಲ್ ಕಿಟ್ಟಿ, ಸುರೇಂದ್ರ, ನಿತಿನ್ ಪುಟ್ಟಸ್ವಾಮಿ, ಪ್ರಶಾಂತ್ ಪಚ್ಚಿ ಇನ್ನಿತರರಿದ್ದರು.

ಸೆ.10ರಂದು ಕಥೆ ರಚನೆ ಕುರಿತು ಶಿಬಿರ

ಮೈಸೂರು,ಆ.23(ಪಿಎಂ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸಾಹಿತ್ಯ ದಾಸೋಹ, ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ಸಂಯುಕ್ತಾಶ್ರಯದಲ್ಲಿ ಸೆ.10ರಂದು ಕಥೆ ರಚನೆ ಕುರಿತಂತೆ ರಾಜ್ಯಮಟ್ಟದ 'ಕಥಾ ಕಮ್ಮಟ; ಕಥಾಯಾನ–11' ಶಿಬಿರ ಆಯೋಜಿಸಲಾಗಿದ್ದು, ಶಿಬಿರಾರ್ಥಿಗಳಾಗಿ ಭಾಗವಹಿಸಲಿಚ್ಛಿಸುವವರು ನೋಂದಾಯಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ. ಖ್ಯಾತ ಕಾದಂಬರಿಕಾರ, ಕತೆಗಾರ, ಅಂಕಣಕಾರ ಸಂತೋಷ್‌ಕುಮಾರ್ ಮೆಹಂದಳೆ ಶಿಬಿರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಒಂದು ದಿನದ ಈ ಶಿಬಿರದಲ್ಲಿ ಕಥೆ ರಚನೆಯ ವಿವಿಧ ಮಜಲುಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಡಲಾಗುವುದು. ಮೈಸೂರಿನ ಸಾಹಿತ್ಯ ಪರಿಷತ್ ಭವನದಲ್ಲಿ ಶಿಬಿರ ನಡೆಯಲಿದೆ. 35 ಮಂದಿಗೆ ಮಾತ್ರ ಅವಕಾಶವಿದೆ. ಮಾಹಿತಿಗೆ ಶಿಬಿರದ ಸಂಚಾಲಕಿ ಪದ್ಮಾ ಆನಂದ್ (9845915228 ಅಥವಾ kathayaana@ gmail.com) ಸಂಪರ್ಕಿಸಲು ಕೋರಲಾಗಿದೆ.

ಹೆಚ್.ವಿ.ಕಾವ್ಯಗೆ ಪಿಎಚ್.ಡಿ ಪದವಿ



ಮೈಸೂರು,ಆ.23–ಡಾ.ಎನ್.ಎ.ಚಾಮರಾಜ, ಡಾ.ಕೆ.ಎಸ್. ನಿತಿನ್ ಅವರ ಮಾರ್ಗದರ್ಶನದಲ್ಲಿ ಹೆಚ್.ವಿ.ಕಾವ್ಯ ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಮಾದೇಟೀರಾ ಬೋಜಮ್ಮ

ಮೈಸೂರು,ಆ.23–ಮೈಸೂರಿನ ಹೆಬ್ಬಾಳು ಬಡಾವಣೆ 1ನೇ ಹಂತದ ನಿವಾಸಿ ದಿವಂಗತ ಎಂ.ಕೆ.ಪಳಂಗಪ್ಪ ಅವರ ಪತ್ನಿ, ಮಾದೇಟೀರಾ ಬೋಜಮ್ಮ (ಬೋಜಿ–ಅಜ್ಜಿಕುಟ್ಟೀರಾ) ಮಂಗಳವಾರ ರಾತ್ರಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ಕಡಗದಾಳ್ ಗ್ರಾಮದ ನಿವಾಸಿಯಾದ ಇವರು ಮಕ್ಕಳಾದ ರವಿಕಿರಣ್ ಮತ್ತು ಸೋನಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎಲ್.ಕೃಷ್ಣಪ್ರಕಾಶ್

ಮೈಸೂರಿನ ಕೆ.ಆರ್.ವನಂ ನಿವಾಸಿ ಹಾಗೂ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನಿಸ್ಟ್ ಎಲ್.ಕೃಷ್ಣಪ್ರಕಾಶ್ (47) ಹೃದಯಾಘಾತದಿಂದ ಬುಧವಾರ ಬೆಳಗ್ಗೆ ನಿಧನರಾದರು. ಮೃತರು ತಂದೆ–ತಾಯಿ, ಪತ್ನಿ, ಓರ್ವ ಪುತ್ರಿ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂಬೇಡ್ಕರ್ ಭವನ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಆಗ್ರಹ



ಮೈಸೂರು, ಆ.23(ಜಿಎ)–ಮೈಸೂರು ಹೃದಯ ಭಾಗದಲ್ಲಿ ನಿರ್ಮಾಣವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರು ಕ್ರಮ ಕೈಗೊಳ್ಳಬೇಕೆಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಹೆಚ್.ಎಂ. ಅಂಕಯ್ಯ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಮತ್ತೊಂದೆಡೆ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸುವ ಮೂಲಕ ಮತ್ತೊಮ್ಮೆ ನುಡಿದಂತೆ ನಡೆದಿದೆ. ಆದರೆ, ನಗರದ ದೇವರಾಜ ಪೊಲೀಸ್ ಠಾಣೆ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಕಾಮಗಾರಿ ಬಾಕಿ ಉಳಿದಿದ್ದು, ಇದನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶೀಘ್ರವೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ವೇಳೆ ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಕಲ್ಪಿಸುವುದರೊಂದಿಗೆ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯತ್ವ ಸ್ಥಾನಕ್ಕೆ ಪರಿಶಿಷ್ಟ ಜಾತಿ ವಿಭಾಗದ ಕಾರ್ಯಕರ್ತರನ್ನು ನೇಮಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ರವಿ, ಎಚ್.ಆರ್. ಸಿದ್ದರಾಜು, ಮಹದೇವು, ಚಂದ್ರ ಮತ್ತು ಎಂ.ಸಿದ್ದರಾಜು ಉಪಸ್ಥಿತರಿದ್ದರು.

ಸೆ.9ರಂದು ಬೆಂಗಳೂರು ಅರಮನೆ ಆವರಣದಲ್ಲಿ ಅತೀ ಹಿಂದುಳಿದ ವರ್ಗಗಳ ಸಮಾನಮನಸ್ಕರ ಸಭೆ

ಮೈಸೂರು, ಆ.23(ಜಿಎ)–ರಾಷ್ಟ್ರೀಯ ಈಡಿಗ ಮಹಾಮಂಡಳಿಯಿಂದ ಸೆಪ್ಟೆಂಬರ್ 9ರಂದು ಬೆಂಗಳೂರಿನ ಅರಮನೆ ಮೈದಾನದ ವೈಟ್ ಪೆಟಲ್ಸ್ ಸಭಾಂಗಣದಲ್ಲಿ ಈಡಿಗ, ಬಿಲ್ಲವ, ನಾಮಧಾರಿ, ದೀವರು ಮತ್ತು ಅತೀ ಹಿಂದುಳಿದ ವರ್ಗಗಳ ಸಮಾನಮನಸ್ಕರ ವಿಶೇಷ ಸಭೆ ಆಯೋಜಿಸಲಾಗಿದೆ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಎ.ವೈ. ವಸಂತ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಕೋಟಿಗೂ ಅಧಿಕ ಮಂದಿ ರಾಜ್ಯದಲ್ಲಿ ಅತಿ ಹಿಂದುಳಿದ ಜಾತಿಗಳಲ್ಲಿದ್ದಾರೆ. ಆದರೂ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳಿಂದ ವಂಚಿತರಾಗಿದ್ದೇವೆ. ಈ ಹಿನ್ನೆಲೆಯಲ್ಲಿ ಅಂದಿನ ಸಭೆಯಲ್ಲಿ ನಾವೆಲ್ಲರೂ ಸಂಘಟಿತರಾಗಿ ಸಮುದಾಯಗಳ ಅಭಿವೃದ್ಧಿ ಬಗ್ಗೆ ಚರ್ಚಿಸಲಿದ್ದು, ಮುಂದಿನ ಹೋರಾಟವನ್ನೂ ರೂಪಿಸಲಿದ್ದೇವೆ. ವಿವಿಧ ಬೇಡಿಕೆಗಳಿಗಾಗಿ, ಲೋಕಸಭಾ ಚುನಾವಣೆಗೂ ಮುನ್ನಾ ಶಕ್ತಿ ಪ್ರದರ್ಶನವಾಗಿ ಬರುವ ಜನವರಿಯಲ್ಲಿ ರಾಜ್ಯಮಟ್ಟದ ಬೃಹತ್ ಸಮಾವೇಶ ಆಯೋಜಿಸಲಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಾಮಂಡಳಿಯ ರಾಜ್ಯ ಉಪಾಧ್ಯಕ್ಷ ಮಹದೇವು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಸು, ಖಜಾಂಚಿ ಕೃಷ್ಣ, ಸಂಘಟನಾ ಕಾರ್ಯದರ್ಶಿ ಸುರೇಶ್, ಮಡಿವಾಳ ಸಮಾಜದ ಜಿಲ್ಲಾ ಉಪಾಧ್ಯಕ್ಷ ಸಿಎಸ್ ಮಹೇಶ್ ಉಪಸ್ಥಿತರಿದ್ದರು.

ಆ.27ರಂದು ಮೈಸೂರಲ್ಲಿ ಚೈತನ್ಯ ಕಳೆಗಿಡಗಳ ಪ್ರದರ್ಶನ, ಸಂವಾದ



ಮೈಸೂರು, ಆ.23(ಜಿಎ)–ಚೈತನ್ಯ ಕಳೆಗಿಡಗಳ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮವನ್ನು ಉಳುಮೆ ಪ್ರತಿಷ್ಠಾನದ ವತಿಯಿಂದ ಆ.27ರಂದು ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ಟಿ.ಜಿ.ಎಸ್.ಅವಿನಾಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೂ ಬೋಗಾದಿಯಲ್ಲಿರುವ ಧ್ವನ್ಯಾಲೋಕದಲ್ಲಿ ಚೈತನ್ಯ ಕಳೆಗಿಡಗಳ ಪ್ರದರ್ಶನ ಮತ್ತು ಸಂವಾದ ಏರ್ಪಡಿಸಿದ್ದು, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಕೃಷಿಕರು ಮತ್ತು ಲೇಖಕರೂ ಆದ ಎ.ಪಿ.ಚಂದ್ರಶೇಖರ್ ವಹಿಸಲಿದ್ದಾರೆ ಎಂದರು.

ಕನ್ನಡದಲ್ಲಿ ಕಳೆ ಎಂಬ ಪದಕ್ಕೆ ಅನುಪಯುಕ್ತ ಬೆಳೆ ಮತ್ತು ಚೈತನ್ಯ ಎಂಬ ಎರಡು ಅರ್ಥಗಳಿವೆ. ಮಣ್ಣಿನ ಆರೋಗ್ಯ ಕಾಪಾಡುವಲ್ಲಿ, ಇತರ ಜೀವಿಗಳ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸುವ ಕಳೆಗಿಡಗಳು ಔಷಧೀಯ ಗುಣಗಳನ್ನೂ ಹೊಂದಿವೆ. ಹಾಗಾಗಿ ಇದನ್ನು ಚೈತನ್ಯ ಕಳೆ ಎಂದು ಹೆಸರಿಸಿದ್ದೇವೆ. ಅವುಗಳ ಪ್ರಾಮುಖ್ಯತೆ ತಿಳಿಸುವುದೇ ಕಾರ್ಯಕ್ರಮದ ಉದ್ದೇಶ ಎಂದರು.

ರಾಷ್ಟ್ರೀಯ ಸಲಹಾ ಮಂಡಳಿ ಉಪಾಧ್ಯಕ್ಷ ಮಲ್ಲಿನಾಥ ಹೆಮಾಡಿ, ಪರಿಸರ ಅಧ್ಯಯನ ಕೇಂದ್ರದ ಸಂಶೋಧಕ ಮುರಳೀಧರ ಗುಂಗುರುಮಳೆ ಸಂವಾದದಲ್ಲೂ ಭಾಗವಹಿಸಿ, 'ಕಳೆಗಳಿಂದ ಆಹಾರ; ಆರೋಗ್ಯಕ್ಕೆ ಪರಿಹಾರ' ವಿಷಯ ಮಂಡನೆ ಮಾಡಲಿದ್ದಾರೆ. ಪರಿಸರ ವಿಜ್ಞಾನ ಉಪನ್ಯಾಸಕ ಜಿ.ಮನು ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಕೃಷಿಯಲ್ಲಿ ಕಳೆ ಗಿಡಗಳ ಮಹತ್ವ ಕುರಿತು, ಯುಗಚಿಹಳ್ಳಿಯ ಸಾವಯವ ಕೃಷಿಕ ರಾಮಕೃಷ್ಣಪ್ಪ 'ಕಳೆ ಎಂಬುದು ಜೀವದ್ರವ್ಯ ಬೆಳೆಗದು ಅಮೂಲ್ಯ' ವಿಷಯಗಳ ಬಗ್ಗೆ ಮಾತನಾಡಲಿದ್ದಾರೆ. 'ಬೆಳೆಯ ಸಮಗ್ರತೆ ಇರುವುದು ಕಳೆಯಲ್ಲಿ' ಎಂಬ ವಿಷಯವನ್ನು ಸಾಮಾಜಿಕ ಕಾರ್ಯಕರ್ತೆ ಎನ್. ಇಂದಿರಮ್ಮ ಮಂಡಿಸಿದರೆ, ಬಿಳಿಗಿರಿರಂಗನಬೆಟ್ಟದ ರಮ್ಯಾ ಮತ್ತು ರಾಮೇಗೌಡರು ಔಷಧಿ ಸಸ್ಯಗಳ ಪ್ರಾತ್ಯಕ್ಷಿಕೆ ನೀಡಿ, ಅದರ ಮಹತ್ವ ತಿಳಿಸಲಿದ್ದಾರೆ. 'ಚೈತನ್ಯ ಕಳೆಗಿಡಗಳಿಂದ ಕಷಾಯ ತಯಾರಿಕೆ' ಕುರಿತು ನಾನು ಸಂವಾದ ನಡೆಸಲಿದ್ದೇನೆ. ಪ್ರದರ್ಶನದಲ್ಲಿ ರಾಜ್ಯದ 13 ಜಿಲ್ಲೆಗಳಿಂದ ತರಲಾದ 300 ಕಳೆಗಿಡಗಳನ್ನು ನೋಡಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತ ಶಿವಲಿಂಗು ಉಪಸ್ಥಿತರಿದ್ದರು.

ಕುರಿಮಂಡಿ ಸ್ಥಳಾಂತರಕ್ಕೆ ಆಗ್ರಹ: ನಿವಾಸಿಗಳಿಂದ ಪ್ರತಿಭಟನೆ ಎಚ್ಚರಿಕೆ



ಮೈಸೂರು, ಆ.23(ಜಿಎ)–ಮೈಸೂರಿನ ಅಂಬೇಡ್ಕರ್ ನಗರದಲ್ಲಿರುವ ಕುರಿಮಂಡಿ (ಸ್ಲಾಟರ್ ಹೌಸ್)ಯಿಂದ ಸಾಕಷ್ಟು ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿದ್ದು, ಪಾಲಿಕೆ ಇದನ್ನು ಸ್ಥಳಾಂತರಿಸಬೇಕು ಎಂದು ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಸರೆ 2ನೇ ಹಂತದ ಅಂಬೇಡ್ಕರ್ ನಗರ, ಕುರಿಮಂಡಿ ಎಂದೇ ಪರಿಚಿತವಾಗಿದೆ. ಸುಮಾರು 40 ವರ್ಷಗಳಿಂದ ಕುರಿಮಂಡಿ (ಸ್ಲಾಟರ್ ಹೌಸ್)ಯಿಂದ ಸಾರ್ವಜನಿಕರು ನಾನಾ ಸಮಸ್ಯೆ ಎದುರಿಸುತ್ತಿದ್ದಾರೆ ಎಂದರು.

ಕುರಿಮಂಡಿಯಲ್ಲಿ ಕಡಿಯುವ ಪ್ರಾಣಿಗಳ ರಕ್ತ, ಅದರ ತ್ಯಾಜ್ಯ ಅಲ್ಲಿರುವಂತಹ ಮಕ್ಕಳ ಮೇಲೆ ಪರಿಣಾಮ ಬೀರುತ್ತಿದ್ದು, ಅದನ್ನು ತೆಗೆದುಕೊಂಡು ಹೋಗಲು ಬರುವ ವಾಹನಗಳ ದುರ್ನಾತವೂ ನಾನಾ ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ ನೀಡುತ್ತಿದೆ. ಪಕ್ಕದಲ್ಲೆ ಇರುವಂತಹ ಪೌರಕಾರ್ಮಿಕರ ಕಾಲೋನಿ ನಿವಾಸಿಗಳು ಜೀವನ ನಡೆಸುವುದೇ ಕಷ್ಟಕರವಾಗಿದೆ. ಈ ಸಂಬಂಧ ಈ ಹಿಂದೆ ಇಲ್ಲಿನ ಹಿರಿಯರು ಪಾಲಿಕೆ ಸದಸ್ಯರಿಗೆ, ಶಾಸಕರಿಗೆ ಅದನ್ನು ಸ್ಥಳಾಂತರಿಸುವಂತೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕುರಿಮಂಡಿ ಸ್ಥಳಾಂತರಕ್ಕೆ ಈಗಾಗಲೇ ಪಾಲಿಕೆ ಹಳೆ ಕೆಸರೆಯಲ್ಲಿ ಸ್ಥಳ ನಿಗದಿ ಮಾಡಿದ್ದು, ಅಲ್ಲಿಗೆ ಸ್ಥಳಾಂತರವಾಗದಿರಲು ಕಾರಣ ಏನು ಎಂಬುದೇ ತಿಳಿಯುತ್ತಿಲ್ಲ. ನಮ್ಮ ಟ್ರಸ್ಟ್ ಮತ್ತು ಸ್ಥಳೀಯ ನಿವಾಸಿಗಳು ಡಿಸಿಗೆ ಮನವಿ ಸಲ್ಲಿಸಿ, ಒಂದು ವಾರ ಕಾಯುತ್ತೇವೆ. ಅದಕ್ಕೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲವಾದರೆ, ಕುರಿಮಂಡಿ ಮುಂಭಾಗವೇ 'ಕುರಿಮಂಡಿ ಹಠಾವೋ ಡಾ.ಬಿ.ಆರ್. ಅಂಬೇಡ್ಕರ್ ನಗರ ಬಚಾವೋ' ಘೋಷವಾಕ್ಯದೊಂದಿಗೆ ಧರಣಿ ಮಾಡಲಿದ್ದೇವೆ ಎಂದರು. ಗೋಷ್ಠಿಯಲ್ಲಿ ನಿವಾಸಿಗಳಾದ ಸಂಜಯ್, ಚಂದ್ರು, ರಮೇಶ್, ಮಣಿ, ಕೇಶವ ಮೂರ್ತಿ, ತೊರೆಯಣ್ಣ ಉಪಸ್ಥಿತರಿದ್ದರು.

ಋಗ್ ಉಪಾಕರ್ಮ, ಯಜುರ್ ಉಪಾಕರ್ಮ

ಮೈಸೂರು,ಆ.23–ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ಕೃಷ್ಣಸ್ವಾಮಿ ಶಾಸ್ತ್ರಿ ಹಾಗೂ ಶ್ರೀನಾಥಶಾಸ್ತ್ರಿಗಳ ನೇತೃತ್ವದಲ್ಲಿ ಆ.29 ಮಂಗಳವಾರ ಋಗ್ ಉಪಾಕರ್ಮ ಹಾಗೂ ಆ.30ರಂದು ಬುಧವಾರ ಯಜುರ್ ಉಪಾಕರ್ಮವನ್ನು ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ.

ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಒಂದು ದಿನ ಮುಂಚಿತವಾಗಿ ತಮ್ಮ ಹೆಸರನ್ನು ಸಭೆಯ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ. 0821–2446498 ಮೂಲಕ ಬೆಳಗ್ಗೆ 9.30ರಿಂದ ಮಧ್ಯಾಹ್ನ 1, ಸಂಜೆ 5ರಿಂದ ರಾತ್ರಿ 8ರವರೆಗೆ ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.8.2023 ಗುರುವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ, ಲಯನ್ಸ್ ಕ್ಲಬ್ ಆಫ್ ಮಯೂರಿ, ಲಿಯೋ ಕ್ಲಬ್ ಆಫ್ ಮೈಸೂರು ಯರೀಶ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಉಚಿತ ಅಕ್ಯೂಪ್ರೆಶರ್, ಸುಜೋಕ್ ಮ್ಯಾಗ್ನಟ್ ಮತ್ತು ವೈಬ್ರೇಷನ್ ತೆರಪಿ ಚಿಕಿತ್ಸೆ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 8ರಿಂದ ಮಧ್ಯಾಹ್ನ 12 ಗಂಟೆವರೆಗೆ, ಸಂಜೆ 4ರಿಂದ 8 ರವರೆಗೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೈಸೂರು :** ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : **ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಯೂಕೋ ಬ್ಯಾಂಕ್ ನಿವೃತ್ತ** ಸೀನಿಯರ್ ಮ್ಯಾನೇಜರ್ ಸಿ. ವೆಂಕಟೇಶ ಪ್ರಸಾದ್, ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವರ ಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಾಚನ: ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ.ರಾಮಚಂದ್ರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಕೆ. ಎಲ್. ಪ್ರಸನ್ನಾಕ್ಷಿ, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ.ಶಾಂತಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಈ.ಗಾಯತ್ರಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಶಿವಮೊಗ್ಗ ವೇಣುಗೋಪಾಲ್, ರಾಘವೇಂದ್ರ ಸ್ವಾಮಿಗಳು, 1.20 ಭಾವಗೀತೆ– ಬಿ. ರಮಾಕಾಂತ್, ಕೆ.ಆರ್.ರಾಘವೇಂದ್ರ ಆಚಾರ್ಯ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ಲಕ್ಷ್ಮೀಸಾಗರದ ಕೆಂಚಮ್ಮ ಮತ್ತು ಸಂಗಡಿಗರು, 4.30 ಕನ್ನಡ ಭಾರತಿ, ಕಥಾ ವಿಹಾರ–ಡಾ. ಶುಭಶ್ರೀ ಪ್ರಸಾದ್ ಅವರಿಂದ ಸಣ್ಣಕಥೆ, ಕಾವ್ಯಧಾರೆ– ಚಂದ್ರಕಲಾ ಕುಮಾರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಬ್ಬಿನ ಬೇಸಾಯ ಕುರಿತು ನೇರ ಫೋನ್ ಇನ್ ಕಾಯಕ್ರಮದಲ್ಲಿ ಭಾಗವಹಿಸುವವರು ಡಾ.ಕೆ.ಎನ್.ಹರ್ಷ, ಪ್ರಸ್ತುತಿ– ಎನ್.ಕೇಶವ ಮೂರ್ತಿ, 8.00 ಯುವವಾಣಿ–ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಸಂಬಂಧವಾಗಿ, ಯುವಪ್ರತಿಭೆ, ಅಂತಾರಾಷ್ಟ್ರೀಯ ಬಾಡಿ ಬಿಲ್ಡಿಂಗ್ ಕ್ರೀಡಾಪಟು ಹರಿ ಅವರೊಂದಿಗೆ ಮಾತುಕತೆ, 10.00 ನಾಟಕ 'ಒಂದು ಬಹುಮಾನದ ಕಥೆ', ರಚನೆ– ಕೆ.ಪವನಕುಮಾರ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

■ **ಸನಾತನ ಸಭಾ, ಮೈಸೂರು :** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ 8ರವರೆಗೆ.

■ **ಚಿನ್ಮಯ ಮಿಷನ್:** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ

■ **ನಿರಂತರ ಫೌಂಡೇಷನ್ :** ನಿರಂತರ ರಂಗ ತಂಡದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಊರಿನ ರಸಿಕರು ಮತ್ತು ಇತರ ಕೃತಿಗಳ ಆಧಾರಿತ ನಾಟಕ 'ಗೊರೂರು' ನಾಟಕ ಪ್ರದರ್ಶನ, ರಂಗ ನಿರ್ವಹಣೆ : ಆಕರ್ಷ್‌ಕುಮಾರ್, ಸಂಗೀತ : ದಿಗ್ವಿಜಯ ಹೆಗ್ಗೋಡು, ನಿರ್ದೇಶನ : ಮಂಜುನಾಥ ಎಲ್. ಬಡಿಗೇರ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

ಚಂದ್ರಯಾನ-3 ಯಶಸ್ವಿ: ಇಸ್ರೋ ವಿಜ್ಞಾನಿಗಳ ಸಾಧನೆ







ಬೆಂಗಳೂರು: ಬುಧವಾರ ಸಂಜೆ 6 ಗಂಟೆ 4 ನಿಮಿಷಕ್ಕೆ ಸರಿಯಾಗಿ ಚಂದ್ರಯಾನ-3ರ ವಿಕ್ರಂ ಲ್ಯಾಂಡರ್ ಚಂದ್ರನ ಮೇಲೆ ಸಾಫ್ಟ್ ಲ್ಯಾಂಡಿಂಗ್ ಮಾಡಿದೊಡನೆ ಶ್ರೀ ಹರಿಕೋಟಾದ ಇಸ್ರೋ ಕೇಂದ್ರದಲ್ಲಿ ಸಂತಸ ಮುಗಿಲು ಮುಟ್ಟಿತ್ತು. ಆವರೆಗೂ ತಮ್ಮ ತಮ್ಮ ಡೆಸ್ಕ್‌ಗಳಲ್ಲಿ ಕುಳಿತು ಉಸಿರು ಬಿಗಿ ಹಿಡಿದು ಪ್ರತಿ ಕ್ಷಣವನ್ನೂ ವೀಕ್ಷಿಸುತ್ತಿದ್ದ ವಿಜ್ಞಾನಿಗಳು ಒಮ್ಮಿಂದೊಮ್ಮೆಲೇ ಎದ್ದು ನಿಂತು ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು.

ತಕ್ಷಣವೇ ವೇದಿಕೆಗೆ ಬಂದ ಇಸ್ರೋ ಮುಖ್ಯಸ್ಥ ಸೋಮನಾಥನ್, ಯಶಸ್ವಿ ಸಾಫ್ಟ್ ಲ್ಯಾಂಡಿಂಗ್ ಅನ್ನು ಘೋಷಿಸಿದರು. ಜೊತೆಗೆ ದಕ್ಷಿಣ ಆಫ್ರಿಕಾದಿಂದ ವರ್ಚುವಲ್ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದ ಪ್ರಧಾನಿ ಮೋದಿ ಅವರಿಗೆ ಈಗ ಭಾರತ ಚಂದ್ರನ ಮೇಲೆ ಕಾಲಿರಿಸಿದೆ ಎಂದು ತಿಳಿಸಿ ಮಾತನಾಡುವಂತೆ ವಿನಂತಿಸಿದರು.

ಪ್ರಧಾನಿ ಮೋದಿ ಭಾಷಣದ ಬಳಿಕ ಮತ್ತೆ ಮೈಕ್ ಎತ್ತಿಕೊಂಡ ಸೋಮನಾಥನ್, ಈ ಸಂದರ್ಭದಲ್ಲಿ ಈ ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳಾದ ಮುತ್ತುವೇಲ್, ಕಲ್ಪನಾ, ಶ್ರೀಕಾಂತ್, ಸಂಕರನ್, ಕಿರಣ್ ಕುಮಾರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ದಕ್ಷಿಣ ಧ್ರುವಕ್ಕೆ ಸಾಗಿದ ಮೊದಲ ದೇಶ: ಚಂದ್ರಯಾನ-3 ಯೋಜನಾ ನಿರ್ದೇಶಕ ವೀರ ಮುತ್ತುವೇಲ್ ಮಾತನಾಡಿ, ಈ ಯೋಜನೆ ಉಡಾವಣೆಯಿಂದ ಹಿಡಿದು ಸಾಫ್ಟ್ ಲ್ಯಾಂಡಿಂಗ್‌ನವರೆಗೂ ಎಲ್ಲವೂ ಕ್ರಮಬದ್ಧವಾಗಿ, ಯೋಜನಾಬದ್ಧವಾಗಿ ಟೈಮ್ ಲೈನಿಗೆ ಅನುಸಾರವಾಗಿ ನಡೆದಿದೆ. ಚಂದ್ರನಲ್ಲಿ ಸಾಫ್ಟ್ ಲ್ಯಾಂಡಿಂಗ್ ಮಾಡಿದ 4ನೇ ದೇಶವಾಗಿ ನಾವು ಗುರುತಿಸಿರುವುದಕ್ಕೆ ನಮಗೆ ಸಂತಸವಾಗಿದೆ. ಜೊತೆಗೆ ಚಂದ್ರನ ದಕ್ಷಿಣ ಧ್ರುವಕ್ಕೆ ಸಾಗಿದ ಮೊದಲ ದೇಶ ನಮ್ಮದಾಗಿದೆ ಎಂದರು. ಈ ಸಂದರ್ಭದಲ್ಲಿ ವಿಜ್ಞಾನಿಗಳು ಮತ್ತಷ್ಟು ಸಂತಸದಿಂದ ಕರತಾಡನ ಮಾಡಿದರು.

ವೀರ ಮುತ್ತುವೇಲ್ ಮಾತು ಮುಂದುವರಿಸಿ, ಈ ಸಂದರ್ಭದಲ್ಲಿ ನಾನು ನ್ಯಾವಿಗೇಶನ್, ಗೈಡೆನ್ಸ್, ಕಂಟ್ರೋಲ್, ಸೆನ್ಸಾರ್ ಮತ್ತು ಸಂಬಂಧಪಟ್ಟ ಎಲ್ಲ ತಂಡಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಎಲ್ಲರಿಂದಲೂ ಈ ಯಶಸ್ಸು ಸಾಧ್ಯವಾಗಿದೆ ಎಂದು ತಿಳಿಸಿದರು.

ಮಿಷನ್ ನಿರ್ದೇಶಕ ಶ್ರೀಕಾಂತ್ ಮಾತನಾಡಿ, ಈ ಕಾರ್ಯ ನಿರ್ವಿಘ್ನವಾಗಿ ಸಾಗಲು ಕಾರಣವಾಗಿರುವ ಹಿರಿಯ, ಕಿರಿಯ ಸಹೋದ್ಯೋಗಿಗಳು, ತಂಡದ ಸದಸ್ಯರೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು.

ಉಸಿರು ಬಿಗಿ ಹಿಡಿದು ಕಾರ್ಯನಿರ್ವಹಿಸಿದ್ದೇವೆ: ಯೋಜನೆ ಸಹ ನಿರ್ದೇಶಕಿ ಕಲ್ಪನಾ ಮಾತನಾಡಿ, ಇದು ನಮ್ಮ ಜೀವನದಲ್ಲೇ ಅತ್ಯಂತ ಖುಷಿಯ ಕ್ಷಣವಾಗಿದೆ. ನಾವು ಯಾವುದೇ ಅಡೆತಡೆಯಿಲ್ಲದೆ ನಮ್ಮ ಗುರಿಯನ್ನು ತಲುಪಿದ್ದೇವೆ. ಚಂದ್ರಯಾನ 2 ವಿಫಲವಾದ ಬಳಿಕ ನಾವು ನಮ್ಮ ಅಂತರಿಕ್ಷ ನೌಕೆಯನ್ನು ಪುನರ್ ನಿರ್ಮಾಣ ಮಾಡಲು ಹೊರಟೆವು. ಚಂದ್ರಯಾನ-3ಕ್ಕಾಗಿ ನಾವು ಉಸಿರು ಬಿಗಿ ಹಿಡಿದು ಕೆಲಸ ಮಾಡಿದ್ದೇವೆ. ಎಲ್ಲರ ಅವಿರತ ಶ್ರಮದಿಂದ ಇದು ಸಾಧ್ಯವಾಯಿತು. ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳು ಎಂದರು.

ಇಸ್ರೋ ಕೇಂದ್ರದ ಮುಖ್ಯಸ್ಥ ಶಂಕರನ್ ಮಾತನಾಡಿ, ಎಲ್ಲರೂ ತೋರಿಸುತ್ತಿರುವ ಪ್ರೀತಿಗೆ ಕೃತಜ್ಞನಾಗಿದ್ದೇನೆ. 2019ರಲ್ಲಿ ಸಾಧಿಸಬೇಕು ಅಂತ ಅಂದುಕೊಂಡಿದ್ದನ್ನು ಈಗ ಸಾಧಿಸಿದ್ದೇವೆ. 4 ವರ್ಷ ತಡವಾದರೂ ತುಂಬಾ ಚೆನ್ನಾಗಿ ಮುಗಿಸಿದ್ದೇವೆ. ಚಂದ್ರಯಾನ-3 ನೌಕೆ ಉಡಾವಣೆ ಆದಾಗ ಸಾಫ್ಟ್ ಲ್ಯಾಂಡಿಂಗ್ ಬಳಿಕವೇ ನಾನು ಮಾತನಾಡುವುದಾಗಿ ತಿಳಿಸಿದ್ದೆ. ನಮ್ಮ ಇಡೀ ತಂಡಕ್ಕೆ ಕಳೆದ 4 ವರ್ಷಗಳಿಂದ ಆಹಾರ, ನಿದ್ರೆ, ಉಸಿರಾಟ ಎಲ್ಲವೂ ಚಂದ್ರಯಾನ-3 ಆಗಿತ್ತು ಎಂದು ಸ್ಮರಿಸಿದರು.

ಸಾಫ್ಟ್ ಲ್ಯಾಂಡಿಂಗ್ ಸುಲಭ ಇರಲಿಲ್ಲ




ಅನೇಕ ವರ್ಷಗಳಿಂದ ಈ ದಿನಕ್ಕಾಗಿ ಕಾದಿದ್ದೆವು. ಎರಡನೇ ಬಾರಿ ಸಾಫ್ಟ್ ಲ್ಯಾಂಡಿಂಗ್ ಆಗಿರಲಿಲ್ಲ. ಆದರೆ ಈ ಬಾರಿ ಕಾರ್ಯ ಯಶಸ್ವಿಯಾಗಿದೆ. ಸದ್ಯ ಪ್ರಗ್ಯಾನ್ ರೋವರ್ ಕಾರ್ಯ ಮುಂದುವರಿಯಲಿದೆ ಎಂದು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ ಹೇಳಿದ್ದಾರೆ.

ಚಂದ್ರಯಾನ-3 ಯಶಸ್ವಿಯಾದ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಭಾರತ ಈಗ ಚಂದ್ರನ ಮೇಲಿದೆ. ಚಂದ್ರಯಾನ ಭವಿಷ್ಯದ ವಿಜ್ಞಾನದ ಆವಿಷ್ಕಾರಗಳಿಗೆ ದಾರಿದೀಪ ಆಗಲಿದೆ. ಚಂದ್ರಯಾನ-3 ಯಶಸ್ಸಿಗೆ ಕಾರಣವಾದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಎಲ್ಲರಿಗೂ ಗೊತ್ತಿರುವಂತೆ ಇದು ಅಷ್ಟು ಸುಲಭವಾಗಿರಲಿಲ್ಲ. 2 ಮೀಟರ್ ಪರ್ ಸೆಕೆಂಡ್‌ಗೂ ಕಡಿಮೆ ವೆಲಾಸಿಟಿಯಲ್ಲಿ ಲ್ಯಾಂಡ್ ಆಗಿದೆ. ಆದಿತ್ಯ ಎಲ್ 1 ಮುಂದಿನ ತಿಂಗಳು ಆರಂಭಿಸುತ್ತೇವೆ. ಪ್ರತಿಯೊಬ್ಬ ಭಾರತೀಯನೂ ಈ ಯಶಸ್ಸಿಗಾಗಿ ಹರಸಿದ್ದರು. ಹೋಮ, ಪೂಜೆ ಮಾಡಿ ಯಶಸ್ಸು ಕೋರಿದ್ದರು. ಹೀಗಾಗಿ ಈ ಜಯವನ್ನು ಎಲ್ಲಾ ದೇಶವಾಸಿಗಳಿಗೆ ಡೆಡಿಕೇಟ್ ಮಾಡಲು ಬಯಸುತ್ತೇನೆ ಎಂದರು.

ಪ್ರಗ್ಯಾನ್ ರೋವರ್ ಲ್ಯಾಂಡರ್‌ನಿಂದ ಹೊರಬರಲು ಸಮಯಬೇಕು. ಮುಂದಿನ 4ರಿಂದ 5 ಗಂಟೆ ಬೇಕು. ಅಥವಾ ಒಂದು ದಿನ ಸಮಯ ಬೇಕಾಗುತ್ತದೆ. ವಾತಾವರಣದ ಮೇಲೆ ಇದು ನಿರ್ಧಾರವಾಗುತ್ತದೆ. ಇದಾದ ಬಳಿಕ ನಾವು ಅಧ್ಯಯನ ಶುರು ಮಾಡುತ್ತೇವೆ. ಪ್ರಯೋಗ ಆರಂಭವಾಗುತ್ತೆ. ಮುಂಬರೋ ದಿನಗಳಲ್ಲಿ ಆದಿತ್ಯ ಎಲ್ 1 ಯೋಜನೆ ಇದೆ. ಮಾನವ ಸಹಿತ ಗಗನಯಾನ ಯೋಜನೆ ಕೂಡ ಮುಂದಿನ ದಿನಗಳಲ್ಲಿ ಕೈಗೊಳ್ಳುವುದಾಗಿ ತಿಳಿಸಿದರು. ಇದೇ ವೇಳೆ ಪ್ರಧಾನಿಗಳು ಕರೆ ಮಾಡಿ ಯಶಸ್ಸಿನ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಪ್ರಕ್ರಿಯೆ ಮುಗಿದ ತಕ್ಷಣ ಕರೆ ಮೂಲಕ ಶುಭ ಕೋರಿದರು ಎಂದು ಹೇಳಿದರು.

ಸುತ್ತೂರು ಶ್ರೀಗಳ ಅಭಿನಂದನೆ




ಮೈಸೂರು, ಆ.23- ಭಾರತೀಯ ಬಾಹ್ಯಾಕಾಶ ಸಂಸ್ಥೆಯು ಚಂದ್ರನ ಮೇಲೆ ಯಶಸ್ವಿಯಾಗಿ ಚಂದ್ರಯಾನ-3 ವಿಕ್ರಮ್ ಲ್ಯಾಂಡರ್ ಅನ್ನು ಇಳಿಸಿದ್ದು ಕೋಟ್ಯಾಂತರ ಭಾರತೀಯರ ಹೃದಯದಲ್ಲಿ ಅಭಿಮಾನದ ತರಂಗಗಳನ್ನು ಹಬ್ಬಿಸಿದೆ. ಅಂತಾರಾಷ್ಟ್ರೀಯ ವೈಜ್ಞಾನಿಕ ಸಾಧನೆಯಲ್ಲಿ ಭಾರತೀಯರು ಬೇರಾರೂ ಸಾಧಿಸದ ವಿಕ್ರಮವನ್ನು ಸಾಧಿಸಿರುವುದು ಒಂದು ಯಶಸ್ಸಿನ ಮೈಲಿಗಲ್ಲಾಗಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿನಂದಿಸಿದ್ದಾರೆ.

ಈ ಅಭಿಯಾನದ ಯಶಸ್ಸು ಭಾರತದ ಮೂಲಕ ಇಡೀ ವಿಶ್ವಕ್ಕೇ ಸಂದುದ್ದಾಗಿದೆ. ವಿಜ್ಞಾನಕ್ಕೆ ಸಂದ ಯಶಸ್ಸಾಗಿದೆ. ಕೋಟ್ಯಂತರ ಭಾರತೀಯರ ಎದೆ ಬಡಿತಕ್ಕೆ ಈಗ ಸಮಾಧಾನದ ನಿಟ್ಟುಸಿರು ಸಿಕ್ಕಿದೆ. ಈ ವೈಜ್ಞಾನಿಕ ಅಭಿಯಾನವನ್ನು ಭಾರತವು ಇನ್ನೂ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂದಿದ್ದಾರೆ. ಈ ವೈಜ್ಞಾನಿಕ ಅಭಿಯಾನದ ಅಭೂತಪೂರ್ವ ಯಶಸ್ಸಿಗೆ ಅಹರ್ನಿಶಿ ತುಂಬು ಶ್ರದ್ಧೆ, ಪರಿಶ್ರಮಗಳಿಂದ ಕಾರ್ಯನಿರ್ವಹಿಸಿರುವುದಕ್ಕಾಗಿ ಇಸ್ರೋದ ಎಲ್ಲ ವಿಜ್ಞಾನಿಗಳಿಗೂ ಹೃತ್ಪೂರ್ವಕ ಅಭಿನಂದನೆಗಳು. ಅಲ್ಲದೆ, ಜಗತ್ತೇ ಮೆಚ್ಚುವಂಥ ಕೆಲಸ ಮಾಡಿದ್ದಾರೆ. ಹೀಗೆಯೇ ಯಶಸ್ಸಿನಿಂದ ಯಶಸ್ಸಿಗೆ ಮುನ್ನಡೆಯುತ್ತಿರಲು ಭಗವತ್ಕೃಪೆ ಸದಾ ಇರಲೆಂದು ಹಾರೈಸುತ್ತೇವೆ ಎಂದಿದ್ದಾರೆ.

ಅಭಿನಂದನೆ: ಚಂದ್ರಯಾನ-3 ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲಿ ಎಂದು ಮೈಸೂರು ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಅಭಿನಂದನೆ ಸಲ್ಲಿಸಿದೆ. ಕಾರ್ಯದರ್ಶಿ ಪ್ರೊ.ಎಂ.ಮಂಜುನಾಥ್, ಪ್ರಾಂಶುಪಾಲ ಡಾ.ಪ್ರಭುಸ್ವಾಮಿ ಎಲ್ಲಾ ವಿಭಾಗದ ಬೋಧಕ, ಬೋಧಕೇತರ ವರ್ಗ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿದ್ದರು.

ಇಸ್ರೋಗೆ ನಾಸಾ ಆಡಳಿತಾಧಿಕಾರಿ ಬಿಲ್ ನಲ್ಸನ್ ಅಭಿನಂದನೆ



ಬೆಂಗಳೂರು: ಚಂದ್ರಯಾನ-3 ಯಶಸ್ವಿಯಾಗಿ ಚಂದ್ರನ ಮೇಲೆ ಲ್ಯಾಂಡ್ ಆಗಿದ್ದು, ಚಂದ್ರಯಾನ ಯಶಸ್ಸಿನ ಬಳಿಕ ನಾಸಾ ಆಡಳಿತಾಧಿಕಾರಿ ಬಿಲ್ ನಲ್ಸನ್ ಟ್ವೀಟ್ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಇಸ್ರೋ ವಿಜ್ಞಾನಿಗಳ ಪರಿಶ್ರಮ, ಭಾರತೀಯರ ಪ್ರಾರ್ಥನೆ ಫಲವಾಗಿ ಚಂದ್ರನ ದಕ್ಷಿಣ ಧ್ರುವದಲ್ಲಿ ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಚಂದ್ರಯಾನ-3 ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಚಂದ್ರನ ಮೇಲೆ ಲ್ಯಾಂಡಿಂಗ್ ಆಯಿತು. ಈ ಐತಿಹಾಸಿಕ ಕ್ಷಣಕ್ಕೆ ಇಡೀ ವಿಶ್ವವೇ ಸಾಕ್ಷಿಯಾಯಿತು.

ಸಂಜೆ 6.04ರ ಹೊತ್ತಿಗೆ ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ಮೇಲೆ ಇಳಿಸುವ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರೈಸಿದ್ದು, ಪ್ರತಿಯೊಬ್ಬ ಭಾರತೀಯ ಪ್ರಜೆ ಹೆಮ್ಮೆಪಡುವ ಕ್ಷಣ ಇದಾಗಿದೆ. ಈ ಕುರಿತು ನಾಸಾ ಆಡಳಿತಾಧಿಕಾರಿ ಬಿಲ್ ನಲ್ಸನ್ ಟ್ವೀಟ್ ಮಾಡಿ ಇಸ್ರೋ ತಂಡಕ್ಕೆ ಶುಭಾಶಯ ತಿಳಿಸಿದ್ದಾರೆ.

ಟ್ವೀಟ್‌ನಲ್ಲಿ ಏನಿದೆ: ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಇಳಿಸಿದ 4ನೇ ರಾಷ್ಟ್ರವಾಗಿರುವ ಭಾರತಕ್ಕೆ ಅಭಿನಂದನೆಗಳು. ಈ ಕಾರ್ಯಾಚರಣೆಯಲ್ಲಿ ನಿಮ್ಮ ಪಾಲುದಾರರಾಗಲು ನಮಗೆ ಸಂತೋಷವಾಗಿದೆ ಎಂದು ಬಿಲ್ ನಲ್ಸನ್ ಸಂತಸ ವ್ಯಕ್ತಪಡಿಸಿದ್ದಾರೆ.

ಯಶಸ್ಸಿನ ಸೂತ್ರಧಾರಿಗಳು...

ಬೆಂಗಳೂರು, ಆ.23- ಭಾರತದ ಮೂರನೇ ಚಂದ್ರಯಾನ ಮಿಷನ್ ಚಂದ್ರಯಾನ-3 ಯಶಸ್ವಿಯಾಗಿ ಚಂದ್ರನ ಮೇಲೆ ಇಳಿದಿದೆ. ಜುಲೈ 14 ರಂದು ಪ್ರಾರಂಭವಾಗಿದ್ದ ಈ ಕಾರ್ಯಾಚರಣೆಯಲ್ಲಿ ಉಡಾವಣೆಯಾದ ಲ್ಯಾಂಡರ್ ಬುಧವಾರ ಸಂಜೆ 6.04ಕ್ಕೆ ಚಂದ್ರನ ಮೇಲ್ಮೈಯಲ್ಲಿ ಸಾಫ್ಟ್ ಲ್ಯಾಂಡಿಂಗ್ ಮಾಡಿದೆ. ಈ ಮಿಷನ್ ಭಾರತದ ಬಾಹ್ಯಾಕಾಶ ಪರಿಶೋಧನಾ ಯಾತ್ರೆಯಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಇದು ನೂರಾರು ವಿಜ್ಞಾನಿಗಳ ಶ್ರಮದ ಫಲವೆಂದೇ ಹೇಳಬಹುದು. ಚಂದ್ರಯಾನ-3 ಮಿಷನ್ ಮುಖ್ಯವಾಗಿ ಸೋಮನಾಥ್ ಮತ್ತು ವೀರಮುತ್ತುವೇಲ್ ಅವರಂತಹ ಕೆಲವು ವಿಜ್ಞಾನಿಗಳಿಂದ ಸಾಧ್ಯವಾಗಿದೆ.



ಪಿ.ವೀರಮುತ್ತುವೇಲ್, ಪ್ರಾಜೆಕ್ಟ್ ಡೈರೆಕ್ಟರ್: ಪಿ.ವೀರಮುತ್ತುವೇಲ್ 2019 ರಲ್ಲಿ ಚಂದ್ರಯಾನ-3 ಯೋಜನಾ ನಿರ್ದೇಶಕರಾದರು. ಇದಕ್ಕೂ ಮುನ್ನ ಅವರು ಇಸ್ರೋ ಪ್ರಧಾನ ಕಛೇರಿಯಲ್ಲಿ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಉತ್ತಮ ತಾಂತ್ರಿಕ ಕೌಶಲ್ಯ ಹೊಂದಿರುವ ವೀರಮುತ್ತುವೇಲ್ ಚಂದ್ರಯಾನ-2 ರಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಅವರು ಚಂದ್ರಯಾನ-2 ಮತ್ತು ನಾಸಾ ನಡುವಿನ ಮಾತುಕತೆಗಳಲ್ಲಿ ಸಹಾಯ ಮಾಡಿದರು. ವೀರಮುತ್ತುವೇಲ್ ತಮಿಳುನಾಡಿನ ವಿಲ್ಲುಪುರಂ ಮೂಲದವರು. ಮದ್ರಾಸ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಐಐಟಿ-ಎಂ) ಓದಿದ್ದಾರೆ. ಬಾಹ್ಯಾಕಾಶ ಉದ್ಯಮದಲ್ಲಿ 30 ವರ್ಷಗಳ ಅನುಭವ ಹೊಂದಿರುವ ವೀರಮುತ್ತುವೇಲ್ ಹಲವಾರು ಇಸ್ರೋ ಮಿಷನ್‌ಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



ಎಂ.ಶಂಕರನ್, ನಿರ್ದೇಶಕ: ಜೂನ್ 2021 ರಲ್ಲಿ, ಎಂ. ಶಂಕರನ್ ಅವರನ್ನು ಯುಆರ್ ರಾವ್ ಉಪಗ್ರಹ ಕೇಂದ್ರದ (ಯುಆರ್‌ಎಸ್‌ಸಿ) ನಿರ್ದೇಶಕರಾಗಿ ನೇಮಿಸಲಾಯಿತು. ಈ ಉಪಗ್ರಹ ಕೇಂದ್ರವು ISROಗಾಗಿ ಉಪಗ್ರಹಗಳನ್ನು ತಯಾರಿಸಲು ಭಾರತದಲ್ಲಿ ಮುಖ್ಯ ಸ್ಥಳವಾಗಿದೆ. ಪ್ರಸ್ತುತ, ಸಂವಹನ, ಸಂಚರಣೆ, ಹವಾಮಾನ ಸಂವೇದನೆ ಮತ್ತು ಅಂತರಗ್ರಹ ಪರಿಶೋಧನೆಯಂತಹ ವಿವಿಧ ರೀತಿಯ ಉಪಗ್ರಹಗಳಲ್ಲಿ ಕೆಲಸ ಮಾಡುವ ತಂಡಗಳಿಗೆ ಶಂಕರನ್ ಜವಾಬ್ದಾರರಾಗಿದ್ದಾರೆ. ಉಪಗ್ರಹ ವ್ಯವಸ್ಥೆಯಲ್ಲಿ ಪರಿಣಿತರಾಗಿರುವ ಶಂಕರನ್ ಅವರು ಚಂದ್ರಯಾನ-1 ಮತ್ತು ಚಂದ್ರಯಾನ-2 ಸೇರಿದಂತೆ ಹಲವಾರು ಇಸ್ರೋ ಉಪಗ್ರಹಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



ರಾಜರಾಜನ್: ಪ್ರಖ್ಯಾತ ವಿಜ್ಞಾನಿ ರಾಜರಾಜನ್ ಅವರು ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ಶಾರ್ (SDSC SHAR)ನ ಮುಖ್ಯಸ್ಥರಾಗಿದ್ದಾರೆ. ಅವರು ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಎಲ್ಲಾ ಉಡಾವಣೆಗಳಿಗೆ ಅನುಮತಿ ನೀಡುವ ಲಾಂಚ್ ಆಥರೈಸೇಶನ್ ಬೋರ್ಡ್ (LAB) ಅಧ್ಯಕ್ಷರಾಗಿದ್ದಾರೆ. ರಾಜರಾಜನ್ ಅವರು ಸಂಯೋಜನೆಗಳನ್ನು (Composites) ರಚಿಸುವಲ್ಲಿ ಮತ್ತು ಬಳಸುವಲ್ಲಿ ಅಪಾರ ಜ್ಞಾನ ಮತ್ತು ಅನುಭವವನ್ನು ಹೊಂದಿದ್ದಾರೆ. ಗಗನ್ಯಾನ್, ಎಸ್‌ಎಸ್‌ಎಲ್‌ವಿ ಸೇರಿದಂತೆ ಇಸ್ರೋ ಅವಶ್ಯಕತೆಗಳಿಗೆ ಅನುಗುಣವಾಗಿ ಘನ ರಾಕೆಟ್ ಮೋಟಾರ್‌ಗಳ ಉತ್ಪಾದನೆ ಮತ್ತು ಉಡಾವಣಾ ಸೌಲಭ್ಯಗಳನ್ನು ಸುಧಾರಿಸಲು ರಾಜನ್ ಗಮನಹರಿಸಿದರು. ಲಾಂಚ್ ಆಥರೈಸೇಶನ್ ಬೋರ್ಡ್ (LAB) ಉಡಾವಣೆಯನ್ನು ಯಾವಾಗ ಪ್ರಾರಂಭಿಸಬೇಕೆಂದು ನಿರ್ಧರಿಸುತ್ತದೆ. ರಾಜರಾಜನ್ ಅವರು ಲ್ಯಾಬ್ ಅಧ್ಯಕ್ಷರಾಗಿ SDSC SHARನಿಂದ ಚಂದ್ರಯಾನ-3 ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿದರು. ಬಾಹ್ಯಾಕಾಶ ಯಾನಗಳ ತಾಂತ್ರಿಕ ಅಂಶಗಳನ್ನು ಚೆನ್ನಾಗಿ ತಿಳಿದಿರುವ ರಾಜರಾಜನ್ ಅವರು ಉಡಾವಣೆ ಮಾಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಎಸ್‌ಡಿಎಸ್‌ಸಿ ಶಾರ್‌ನಿಂದ ಪ್ರಾರಂಭವಾದ ಪ್ರತಿಯೊಂದು ಮಿಷನ್‌ನ ಯಶಸ್ಸಿನ ಹಿಂದೆ ರಾಜರಾಜನ್ ಅವರ ಪಾತ್ರ ತುಂಬಾ ಇದೆ.



ಎಸ್.ಸೋಮನಾಥ್, ಇಸ್ರೋ ಅಧ್ಯಕ್ಷ: ಎಸ್.ಸೋಮನಾಥ್ ಅವರು ಚಂದ್ರಯಾನ-3 ಮಿಷನ್‌ನ ಮಾಸ್ಟರ್ ಮೈಂಡ್ ಆಗಿದ್ದಾರೆ. ಅವರು ರಾಕೆಟ್ ತಂತ್ರಜ್ಞಾನದಲ್ಲಿ ಕೆಲಸ ಮಾಡುವ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ ಮತ್ತು ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್‌ನಂತಹ ಯೋಜನೆಗಳನ್ನು ಮುನ್ನಡೆಸಿದ್ದರು. ಸೋಮನಾಥ್ ಇಸ್ರೋ ವಹಿಸಿಕೊಂಡ ನಂತರ ಚಂದ್ರಯಾನ-3, ಭಾರತದ ಮೊದಲ ಮಾನವಸಹಿತ ಬಾಹ್ಯಾಕಾಶ ಮಿಷನ್ ಗಗನ್‌ಯಾನ್ ಮತ್ತು ಆದಿತ್ಯ-ಎಲ್ 1 ಸೇರಿದಂತೆ ಹಲವಾರು ಪ್ರಮುಖ ಮಿಷನ್‌ಗಳಲ್ಲಿ ಪ್ರಮುಖ ಪಾತ್ರರಾಗಿದ್ದಾರೆ.



ಎಸ್. ಉನ್ನಿಕೃಷ್ಣನ್ ನಾಯರ್: ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಎಸ್. ಉನ್ನಿಕೃಷ್ಣನ್ ಅವರು ರಾಕೆಟ್ ಪ್ರೊಪಲ್ಷನ್ ಅನ್ನು ಕರಗತ ಮಾಡಿಕೊಂಡಿದ್ದಾರೆ. ಚಂದ್ರಯಾನ-3 ಉಡಾವಣೆಗೆ ಬಳಸಿದ GSLV Mk III ರಾಕೆಟ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. GSLV ಮಾರ್ಕ್-III ರಾಕೆಟ್ ಅನ್ನು ಪ್ರಸ್ತುತ ಲಾಂಚ್ ವೆಹಿಕಲ್ ಮಾರ್ಕ್-III ಎಂದು ಕರೆಯಲಾಗುತ್ತದೆ, ಇದನ್ನು ಕೇರಳದ ತುಂಬಾದಲ್ಲಿರುವ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದಲ್ಲಿ (VSSC) ನಿರ್ಮಿಸಲಾಗಿದೆ.

ಎಸ್.ಉನ್ನಿಕೃಷ್ಣನ್ ನಾಯರ್ ಅವರ ನೇತೃತ್ವದ VSSC ತಂಡವು ಈ ಮಿಷನ್‌ನ ಪ್ರಮುಖ ಕಾರ್ಯಗಳ ಜವಾಬ್ದಾರಿಯನ್ನು ಹೊಂದಿತ್ತು. VSSC ಇಸ್ರೋದ ಮುಖ್ಯ ರಾಕೆಟ್ ಅಭಿವೃದ್ಧಿ ಕೇಂದ್ರವಾಗಿದೆ. ಮಿಷನ್ ನಿರ್ದೇಶಕ ಮೋಹನ್‌ಕುಮಾರ್ ಮತ್ತು ವೆಹಿಕಲ್ ನಿರ್ದೇಶಕ ಬಿಜು ಸಿ. ಥಾಮಸ್ ನೇತೃತ್ವದ ತಂಡವು ಚಂದ್ರಯಾನ-3 ಮಿಷನ್‌ನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಮೈಸೂರಿನ ತಪೋನಂದನ ಉದ್ಯಾನವನದಲ್ಲಿ ಸಂಭ್ರಮ



ಮೈಸೂರು,ಆ.23-ತಪೋನಂದನ ಉದ್ಯಾನವನ ಸಮೂಹದ ವತಿಯಿಂದ ಚಂದ್ರಯಾನ-3 ವಿಜಯೋತ್ಸವವನ್ನು ಕುವೆಂಪು ನಗರದ ತಪೋನಂದನ ಉದ್ಯಾನವನದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಸ್ಪಂದನ ಅಧ್ಯಕ್ಷ ಎಂ.ಜಯಶಂಕರ್ ಮಾತನಾಡಿ, ಇಸ್ರೋ ವಿಜ್ಞಾನಿಗಳು ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಸಾಫ್ಟ್ ಲ್ಯಾಂಡಿಂಗ್ ಮಾಡಿ ಇತಿಹಾಸ ಬರೆದರು. ಭಾರತ ಮತ್ತೊಂದು ಮೈಲಿಗಲ್ಲಿಗೆ ಸಾಕ್ಷಿಯಾಯಿತು. ಸುವರ್ಣಾಕ್ಷರದಲ್ಲಿ ಬರೆದಿಡುವ ದಿನ ಎಂದು ಬಿಂಬಿಸಿದರು. ಪ್ರೊ.ಸೋಮೇಶ್‌ರವರು ಹಿಂದಿನ ಎರಡು ಚಂದ್ರಯಾನದ ಬಗ್ಗೆ ವಿವರಣೆ ಕೊಟ್ಟು ಚಂದ್ರಯಾನ-3 ಯಶಸ್ವಿಗೆ ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಶ್ರೀನಾಥ್ ಸಾಮಗ ಮಾತನಾಡಿ, 2023 ಚಂದ್ರಯಾನ-3 ಮುಂಚಿನ 2 ತಪ್ಪುಗಳನ್ನು ತಿದ್ದಿಕೊಂಡು ವ್ಯವಸ್ಥಿತವಾಗಿ ನಿರೂಪಿಸಲಾಗಿದೆ. ಇದರ ಯಶಸ್ಸಿಗೆ ನಮ್ಮ ವಿಜ್ಞಾನಿಗಳ ನಿರಂತರ ಪ್ರಯತ್ನ, ಕೇಂದ್ರ ಸರ್ಕಾರದ ಬೆಂಬಲ ಹಾಗೂ ಪ್ರತಿಯೊಬ್ಬ ಭಾರತೀಯರ ವಿಶ್ವಾಸ ಮತ್ತು ನಂಬಿಕೆ ಮುಖ್ಯ ಕಾರಣ. ವಿಜಯೋತ್ಸವದಲ್ಲಿ ತಪೋನಂದನ ಬ್ಯಾಡ್ಮಿಂಟನ್ ಕ್ರೀಡಾಪಟುಗಳು ಉತ್ಸುಕತೆಯಿಂದ ಭಾಗವಹಿಸಿ ದೇಶಪ್ರೇಮ ಮೆರೆದರು. ಈ ವಿಜಯೋತ್ಸವದಲ್ಲಿ ಹಿರಿಯ ನಾಗರಿಕರುಗಳಾದ ಲೋಕೇಶ್, ದರ್ಶನ್, ಪ್ರತಾಪ್ ಸ್ವಾಮಿ, ಲಕ್ಷ್ಮಣ್ ನರಸಿಂಹಮೂರ್ತಿ, ನಾಗರಾಜ್ ಭಾಗವಹಿಸಿ ಸಂತೋಷದ ಕ್ಷಣಗಳನ್ನು ಹಂಚಿಕೊಂಡರು. ಎಲ್ಲರಿಗೂ ಸಿಹಿ ಹಂಚಲಾಯಿತು.

ಮೈಸೂರು ಬಿಜೆಪಿ ಕಚೇರಿ ಮುಂದೆ ಸಂಭ್ರಮಾಚರಣೆ



ಮೈಸೂರು, ಆ.23(ಎಸ್‌ಪಿಎನ್)- ಚಂದ್ರಯಾನ-3ರ ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದಿರುವ ಹಿನ್ನೆಲೆಯಲ್ಲಿ ಬಿಜೆಪಿ ಮೈಸೂರು ಘಟಕ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಕೆಎಂಪಿಕೆ ಟ್ರಸ್ಟ್ ಪದಾಧಿಕಾರಿಗಳು ಭಾರತದ ತಿರಂಗಾ ಧ್ವಜವನ್ನು ಹಾರಿಸಿ, ಭಾರತ್ ಮಾತಾಕೀ ಜೈ ಘೋಷಣೆ ಮೊಳಗಿಸುವ ಮೂಲಕ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿ ಮುಂಭಾಗ ಜಮಾಯಿಸಿ ಸಂಭ್ರಮಪಟ್ಟರು.

ನಂತರ ಮೇಯರ್ ಶಿವಕುಮಾರ್ ಮಾತನಾಡಿ, ದಕ್ಷಿಣ ಧ್ರುವದ ಮೇಲೆ ಇಸ್ರೋ ಹಾರಿಸಿದ್ದ ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಇಳಿಸಲು ಶ್ರಮಿಸಿದ ವಿಜ್ಞಾನಿಗಳಿಗೆ ಕೋಟಿ ಕೋಟಿ ನಮನ ಸಲ್ಲಿಸಿದರೂ ಕಡಿಮೆ. ಪ್ರಪಂಚದ ಯಾವುದೇ ದೇಶ ಸಾಧಿಸದ ಸಾಧನೆಯನ್ನು ನಮ್ಮ ಇಸ್ರೋ ವಿಜ್ಞಾನಿ ಮಾಡಿದ್ದಾರೆ. ಅವರ ಶ್ರಮದಿಂದ ಭಾರತೀಯರೆಲ್ಲಾ ಜಗತ್ತಿನ ಮುಂದೆ ತಲೆಯೆತ್ತಿ ನಿಲ್ಲುವ ಸಂದರ್ಭ ಇದಾಗಿದೆ ಎಂದು ಇಸ್ರೋ ಸಾಧನೆಯನ್ನು ಕೊಂಡಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಇಸ್ರೋ ಸಾಧನೆ ಅವಿಸ್ಮರಣೀಯ. ಜಗತ್ತಿನ ಯಾವ ದೇಶಗಳು ಮಾಡದ ಸಾಧನೆಯನ್ನು ನಮ್ಮ ಇಸ್ರೋ ಮಾಡಿ ತೋರಿಸಿದೆ. ವಿಕ್ರಂ ಲ್ಯಾಂಡರ್ ಚಂದ್ರನ ಅಂಗಳಕ್ಕೆ ಇಳಿದಾಗ ಕೋಟಿಕೋಟಿ ಭಾರತೀಯರ ಪ್ರಾರ್ಥನೆ ಫಲಿಸಿದೆ ಎಂದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಬಿಜೆಪಿ ನಗರ ಘಟಕದ ಮಾಧ್ಯಮ ವಕ್ತಾರ ಕೇಬಲ್ ಮಹೇಶ್, ಲಕ್ಷ್ಮಿದೇವಿ, ವಿಕ್ರಂ ಅಯ್ಯಂಗಾರ್, ಸಂದೇಶ್ ಪವರ್, ರಾಕೇಶ್ ಭಟ್, ಬೈರತಿ ಲಿಂಗರಾಜು, ಕೆ.ಪಿ.ಮಧುಸೂದನ್, ಅಜಯ್ ಶಾಸ್ತ್ರಿ, ಯಶವಂತ್ ಕುಮಾರ್, ಮಹೇಶ್, ಎಂ.ವಿ. ನಾಗೇಂದ್ರ ಬಾಬು, ಕಡಕೊಳ ಜಗದೀಶ್, ರಾಜೇಂದ್ರ, ಪ್ರಭಾಕರ್, ಅರುಣ್, ಚಕ್ರಪಾಣಿ, ದೂರ ರಾಜಣ್ಣ, ಜಯ ಸಿಂಹ ಶ್ರೀಧರ್, ದೀಪಕ್ ಹಾಗೂ ಇನ್ನಿತರರು ಹಾಜರಿದ್ದರು.

ಇಸ್ರೋ 'ಭಾರತದ ಹೆಮ್ಮೆ': ಭಾರತೀಯ ಚಿತ್ರರಂಗ ಅಭಿನಂದನೆ

ಮುಂಬೈ: ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಇಳಿಸುವ ಮೂಲಕ ಇತಿಹಾಸ ಸೃಷ್ಟಿಸಿದ ಭಾರತ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಸಾಧನೆಗೆ ನಟರಾದ ಚಿರಂಜೀವಿ, ಮೋಹನ್ ಲಾಲ್, ಅಕ್ಷಯ್‌ಕುಮಾರ್, ಜೂನಿಯರ್ ಎನ್‌ಟಿಆರ್, ಸನ್ನಿ ಡಿಯೋಲ್ ಹಾಗೂ ನಟಿ ಕರೀನಾ ಕಪೂರ್ ಖಾನ್ ಸೇರಿದಂತೆ ಭಾರತೀಯ ಚಿತ್ರರಂಗದ ಹಲವು ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ. ನಟ ಅಕ್ಷಯ್ ಕುಮಾರ್, 'ನಾವು ತುಂಬಾ ಹೆಮ್ಮೆಪಡುವಂತೆ ನೀವು ಮಾಡಿದ್ದೀರಿ. ಭಾರತವು ಐತಿಹಾಸಿಕ ಸಾಧನೆ ನೋಡುತ್ತಿರುವುದು ಅದೃಷ್ಟ, ಭಾರತವು ಚಂದ್ರನ ಮೇಲಿದೆ. ನಾವು ಚಂದ್ರನ ಮೇಲಿದ್ದೇವೆ. ಚಂದ್ರಯಾನ-3' ಎಂದೂ ಬರೆದುಕೊಂಡಿದ್ದಾರೆ.

'ನಾನು ಭಾರತೀಯಳಾಗಿದ್ದಕ್ಕೆ ಹೆಮ್ಮೆಪಡುತ್ತೇನೆ'. 'ಎಂಥ ಅದ್ಭುತ. ಹೆಮ್ಮೆ ಹೆಮ್ಮೆ ಹೆಮ್ಮೆ!' ಎಂದು ನಟಿ ಕರೀನಾ ಕಪೂರ್ ಇನ್‌ಸ್ಟಾಗ್ರಾಂನಲ್ಲಿ ಹೇಳಿದ್ದಾರೆ.



ಚಂದ್ರನ ಅಂಗಳಕ್ಕೆ ಕಾಲಿಡುವಲ್ಲಿ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿದೆ. ಇದು ಭಾರತದ ಹಾಗೂ ಭಾರತೀಯರ ಗೆಲುವಾಗಿದೆ. ಈ ಐತಿಹಾಸಿಕ ಸಾಧನೆ ಮಾಡಿದ ಇಸ್ರೋದ ಎಲ್ಲ ವಿಜ್ಞಾನಿಗಳ ತಂಡಕ್ಕೆ ಹಾರ್ದಿಕ ಶುಭಾಶಯಗಳು. ಇಂತಹ ಮಹಾನ್ ಸಾಧನೆ ಮಾಡಿದ, ದೇಶದ ಕೀರ್ತಿ ಪತಾಕೆಯನ್ನು ಪ್ರಪಂಚದೆಲ್ಲೆಡೆ ಹಾರಿಸಿದ ಇಸ್ರೋದ ವಿಜ್ಞಾನಿಗಳ ತಂಡವನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯ ಸರ್ಕಾರದ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಭಿನಂದಿಸಿ ಗೌರವಿಸಬೇಕು ಎಂದು ಈ ಮೂಲಕ ಮನವಿ ಮಾಡುತ್ತೇನೆ.

-ದಿನೇಶ್‌ಗೂಳಿಗೌಡ, ಶಾಸಕರು, ವಿಧಾನಪರಿಷತ್



ವಿಶ್ವಕ್ಕೆ ಇಂದು ತಂತ್ರಜ್ಞರಿಗಿಂತ ಹೆಚ್ಚಾಗಿ ಸಂಪನ್ಮೂಲದ ಸದ್ಬಳಕೆಗೆ ಪೂರಕ ತಂತ್ರಜ್ಞಾನ ಅಭಿವೃದ್ಧಿಪಡಿಸಬಲ್ಲ ಸೃಜನಶೀಲ ವಿಜ್ಞಾನಿಗಳ ಅಗತ್ಯ ಇದೆ. ಇತ್ತೀಚಿನ ದಿನಗಳಲ್ಲಿ ಮೂಲವಿಜ್ಞಾನ ಸಂಶೋಧನಾ ಕ್ಷೇತ್ರಕ್ಕೆ ಯುವಕರು ಹೆಚ್ಚು ಒಲವು ತೋರುತ್ತಿದ್ದಾರೆ. ಅಂತಹವರ ಮನಸ್ಸಿನಲ್ಲಿ ಇಸ್ರೋ ವಿಜ್ಞಾನಿಗಳು ಯಶಸ್ವಿ ಚಂದ್ರಯಾನ 3ರ ಮುಖೇನಾ ಮತ್ತಷ್ಟು ಆಶಾಭಾವನೆ ತುಂಬಿ, ಪ್ರೇರಣೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ದೇಶದಲ್ಲಿ ವಿಜ್ಞಾನಿಗಳು ಮತ್ತಷ್ಟು ಸಾಧನೆಯ ಮೂಲಕ ದೇಶದ ಕೀರ್ತಿಯನ್ನು ಹೆಚ್ಚಿಸಲಿ ಎಂದು ಆಶಿಸುತ್ತೇನೆ.

-ಎಂ.ಕೆ.ಸೋಮಶೇಖರ್, ಮಾಜಿ ಶಾಸಕ.



ಚಂದ್ರಯಾನ-3 ಯಶಸ್ವಿಯಾದ ಹಿನ್ನೆಲೆಯಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಸಂಘದ ಆವರಣದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿ, ಸಂಭ್ರಮಾಚರಣೆ ಮಾಡಲಾಯಿತು. ಈ ವೇಳೆ ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಬಿ.ಶಿವಣ್ಣ, ಸಂಘದ ಹಿರಿಯ ಕಮಿಟಿ ಸದಸ್ಯ ಲಕ್ಷ್ಮಣ್, ಹಿರಿಯ ವಕೀಲ ರೇಣುಕ ಪ್ರಸನ್ನ, ಸಂಘದ ಮಾಜಿ ಉಪಾಧ್ಯಕ್ಷ ಎಸ್.ಜಿ.ಶಿವಣ್ಣಗೌಡ, ಮರಪ್ಪ, ದಿಲೀಪ್ ಕುಮಾರ್, ವಿಶ್ವನಾಥ್, ಅಪ್ಪಾಜಿ, ಚಂದ್ರಶೇಖರ್, ಲೋಕೇಶ್ ಮತ್ತಿತರರಿದ್ದರು.



ಟೀಂ ಮೈಸೂರು ತಂಡದ ಚಿತ್ರಕಲಾವಿದ ಮನೋಹರ್, ಚಂದ್ರಯಾನ-3 ವಿಕ್ರಂ ಲ್ಯಾಂಡರ್ 3ಡಿ ಚಿತ್ರವನ್ನು ಅಗ್ರಹಾರ ವೃತ್ತದಲ್ಲಿ ಬಿಡಿಸಿ, ಗಮನ ಸೆಳೆದರು. ಈ ವೇಳೆ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ತಂಡದ ಕಿರಣ್, ಜೈರಾಮ್‌ಗೌಡ, ಯಶ್ವಂತ್, ಮನೋಹರ್, ಹರೀಶ್‌ಬಾಬು, ಹಿರಿಯಣ್ಣ, ಯತೀಶ್, ಅನಿಲ್‌ಜೈನ್, ಮುರಳಿ, ಸಹನ, ಸುಧಾ ಗೌರವ್ ಮುರಳಿ, ಮಂಜು, ಸುನಿಲ್, ಮನೋಜ್, ಚಂದು, ಗೋವಿತ್, ಕಿರಣ್, ರವಿ, ಮಿನುಗು ಇದ್ದರು.

ಶ್ರೀರಾಮಕೃಷ್ಣ ವಿದ್ಯಾಶಾಲೆಯೊಂದಿಗಿನ ಇಸ್ರೋ ಅಧ್ಯಕ್ಷರ ಅವಿನಾಭಾವ ಸಂಬಂಧ

ವಿದ್ಯಾರ್ಥಿಗಳಿಗೆ ಪ್ರಾಂಶುಪಾಲ ಎಸ್.ಬಾಲಾಜಿ ಮಾಹಿತಿ





ಮೈಸೂರು,ಆ.23(ಎಸ್‌ಪಿಎನ್)-ಚಂದ್ರಯಾನ-3ರ ವಿಕ್ರಂ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದ ಮೇಲೆ ಸುರಕ್ಷಿತ ಇಳಿದು ಐತಿಹಾಸಿಕ ದಾಖಲೆ ನಿರ್ಮಿಸಿದ ಕ್ಷಣವನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳು ವೀಕ್ಷಿಸಿ ಕಣ್ತುಂಬಿಕೊಂಡರು.

ನಂತರ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಶುಪಾಲ ಎಸ್.ಬಾಲಾಜಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುತ್ತಾ, ಇಸ್ರೋ ಸಂಸ್ಥೆಗೂ ಶ್ರೀ ರಾಮಕೃಷ್ಣ ಶಾಲೆಗೂ ಅವಿನಾಭಾವ ಸಂಬಂಧವಿದೆ. ಇಸ್ರೋದ ಹಲವಾರು ಮುಖ್ಯಸ್ಥರು ನಮ್ಮ ವಿದ್ಯಾಶಾಲೆಗೆ ಆಗಮಿಸಿ ಇಲ್ಲಿನ ವಿದ್ಯಾರ್ಥಿಗಳನ್ನು ಮನಸಾರೆ ಹರಿಸಿದ್ದಾರೆ. 2000 ಇಸವಿಯಲ್ಲಿ ಡಾ.ಕಸ್ತೂರಿ ರಂಗನ್ (ಅಂದಿನ ಇಸ್ರೋ ಮುಖ್ಯಸ್ಥರು) ನಮ್ಮ ಶಾಲೆಗೆ ಭೇಟಿ ನೀಡಿ, ಅರ್ಧ ದಿನ ಕಳೆದಿದ್ದರಲ್ಲದೆ, ಸರಳ-ಸಜ್ಜನಿಕೆಯ ವ್ಯಕ್ತಿತ್ವ ಅಳವಡಿಸಿಕೊಂಡಿದ್ದ ಡಾ.ಕಸ್ತೂರಿ ರಂಗನ್, ಭಾಷಣ ಮಾಡಿದ್ದ ಪ್ರಸಂಗವನ್ನು ವಿವರಿಸಿದರು.

2001ರಲ್ಲಿ ಡಾ.ಎ.ಪಿ.ಜೆ.ಅಬ್ದುಲ್ ಕಲಂ ಅವರು, ಸಂಸ್ಥೆಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನುದ್ದೇಶಿಸಿ, ಭಾಷಣ ಮಾಡಿ ಅಭಿನಂದಿಸಿದರು. 2009ರಲ್ಲಿ ಇಸ್ರೋ ಅಧ್ಯಕ್ಷರಾಗಿದ್ದ ಡಾ.ಮಾಧವನ್ ನಾಯರ್, ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಆಗಮಿಸಿ ನಮ್ಮೆಲ್ಲರನ್ನೂ ಆಶೀರ್ವದಿಸಿದ್ದರು. ನಮ್ಮ ವಿದ್ಯಾರ್ಥಿಗಳು ಮಾಡಿದ್ದ ಚಂದ್ರಯಾನ ಮಾದರಿಯನ್ನು (ವರ್ಕಿಂಗ್ ಮಾದರಿ) ನೋಡಿ, ಪ್ರೋತ್ಸಾಹಿಸಿದ್ದರಲ್ಲದೆ, ಆ ಸಭೆಯಲ್ಲೇ ನಮ್ಮ ಸಂಸ್ಥೆಗೆ 50 ಸಾವಿರ ಹಾಗೂ ಚಂದ್ರಯಾನ ಮಾದರಿಗೆ 10 ಸಾವಿರ ರೂ. ನೀಡಿದ್ದ ಪ್ರಸಂಗ ವಿವರಿಸಿದರು. 2017ರಲ್ಲಿ ಇಸ್ರೋ ಅಧ್ಯಕ್ಷರಾಗಿದ್ದ ಹಿರಿಯ ವಿಜ್ಞಾನಿ ಡಾ.ಕಿರಣ್‌ಕುಮಾರ್, ನಮ್ಮ ಕಾಲೇಜಿನ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಆಗಮಿಸಿ, ಕೆಲ ವಿದ್ಯಾರ್ಥಿಗಳೊಂದಿಗೆ ಕಾಲ ಕಳೆದಿದ್ದರು. ಅವರು ಮಾಡಿದ ಭಾಷಣ ಇಂದಿಗೂ ಮನಸ್ಸಿನಲ್ಲಿ ಹಚ್ಚಹಸುರಾಗಿದೆ ಎಂದು ಮಾಹಿತಿ ನೀಡಿದರು.

ಇಂದಿನ ವಿಕ್ರಂ ಲ್ಯಾಂಡರ್‌ನ ಸಾಧನೆಯನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳು ವೀಕ್ಷಿಸಿ, ಸಂಭ್ರಮಿಸಿದರು. ಕುಣಿದು ಕುಪ್ಪಳಿಸಿ ಸಂಭ್ರಮಪಟ್ಟಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯನ್ನು ಸ್ವಾಮೀಜಿಯವರು, ಶಿಕ್ಷಕರು, ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ ಎಂದು ಪ್ರಾಂಶುಪಾಲ ಎಸ್.ಬಾಲಾಜಿ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಕಂಡಕ್ಟರ್ : (ಮಹಡಿ ಬಸ್ ಹತ್ತಿ ಕೆಲವೇ ಕ್ಷಣಗಳಲ್ಲಿ ಎದ್ದು ಬಿದ್ದು ಓಡಿ ಬಂದು ಪ್ರಯಾಣಿಕರೋರ್ವರಿಗೆ)
ಯಾಕ್ರಿ ಅಷ್ಟೊಂದು ಹೆದರಿಕೊಂಡು ಓಡಿ ಬರ್ತಾ ಇದ್ದೀರಾ?
ಪ್ರಯಾಣಿಕ : ಮೇಲಿನ ಬಸ್‌ನಲ್ಲಿ ಚಾಲಕನೇ ಇಲ್ಲ ಮಹಾರಾಯ!

ಮೈಸೂರು ಮಿತ್ರ
ಗುರುವಾರ, 24 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅವಕಾಶಗಳು ಬಸ್ ಇದ್ದ ಹಾಗೆ. ಒಂದು ತಪ್ಪಿದರೆ ಇನ್ನೊಂದು ಸಿಗುತ್ತದೆ.
–ರಿಚರ್ಡ್ ಬ್ರಾನ್‌ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೂವಿನ ಹಾರ ಎತ್ತಿದ ಹಾಗೆ

ನಿಮ್ಮ ಪತ್ರಗಳು

ಉಪನ್ಯಾಸಕರ ಹರಕು ಬಾಯಿಗೂ ಕಡಿವಾಣ ಹಾಕುವತ್ತ ಗಮನಹರಿಸಿ

ಮಾನ್ಯರೆ,

ಮುಖ್ಯಮಂತ್ರಿಗಳು ವಿಶ್ವ ವಿದ್ಯಾನಿಲಯಗಳಲ್ಲಿ ಸಂವಿಧಾನ ವಿರೋಧಿ ಚಟುವಟಿಕೆ ಸಲ್ಲದು ಎಂದು ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ವಿ.ವಿ. ಕುಲಪತಿಗಳ ಸಭೆಯಲ್ಲಿ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಜಾತ್ಯಾತೀತ ವಿರೋಧಿ ಮನೋಭಾವನೆ ಹೊಂದಿರುವವರಿಗೆ ಅತಿಥಿ ಉಪನ್ಯಾಸಕರಾಗಿ ನೇಮಿಸಿಕೊಳ್ಳಬಾರದು ಎಂದೂ ಅವರು ಹೇಳಿದ್ದಾರೆ.

ಇದು ನಿಮ್ಮ ನಿಲುವಾಗಿದ್ದರೆ ಅದನ್ನು ಹಿಂದೂ ಧರ್ಮ ಅವಹೇಳನ ಮಾಡುವ, ಹಿಂದೂ ದೇವರುಗಳನ್ನು ಅಪಹಾಸ್ಯ ಮಾಡುವ ಉಪನ್ಯಾಸಕರು ತುಂಬಿ ಹೋಗಿರುವ ಮೈಸೂರು ವಿಶ್ವವಿದ್ಯಾನಿಲಯ ನಿಮ್ಮ ಕಣ್ಣಿಗೆ ಕಾಣದಿದ್ದುದು ದುರದೃಷ್ಟಕರ. ಕೆಲವು ಎಡಪಂಥೀಯ ಉಪನ್ಯಾಸಕರ ಹರಕು ಬಾಯಿಗೂ ಕಡಿವಾಣ ಹಾಕುವತ್ತಲೂ ನೀವು ಗಮನಹರಿಸುವುದು ಒಳಿತು.

ಮುಖ್ಯಮಂತ್ರಿಗಳ ಪರಿಭಾಷೆಯಲ್ಲಿ ವಿಶ್ವವಿದ್ಯಾನಿಲಯದಲ್ಲಾಗಲೀ, ತಮ್ಮ ಆಪ್ತ ವಲಯದಲ್ಲಾಗಲೀ ಎಡಪಂಥೀಯ ಧೋರಣೆಯ ನಿಲುವುಗಳು ಪಕ್ಕಾ ಸಂವಿಧಾನಬದ್ಧ. ಅದು ದೇಶ ಭಂಜಕ ಟುಕ್ಡೆ ಗ್ಯಾಂಗ್ ಆಗಲೀ, ಮೇಲ್ವರ್ಗವನ್ನು ಸದಾ ದ್ವೇಷಿಸುವ, ದೂಷಿಸುವ ಚಿಂತನೆ, ಬರಹ, ಉದ್ಘೋಷಗಳಾದರೂ ಅದು ಸಹ್ಯ. ಸಂವಿಧಾನವೇ ರಕ್ಷಣೆ ನೀಡಿರುವ ಪ್ರಜಾಪ್ರಭುತ್ವದ ಮೌಲ್ಯವಾದ ವೈಚಾರಿಕ ಸ್ವಾತಂತ್ರ್ಯವನ್ನು ಹಳಿಯುವ, ಹಣಿಯುವ ಕೆಲಸ ತಾವು ನಂಬಿರುವ ಮೌಲ್ಯವೊಂದೇ ಶ್ರೇಷ್ಠ ಎಂದು ಸಾರುವ ಪ್ರಭುತ್ವಗಳು ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿವೆ. ವಿಶ್ವವಿದ್ಯಾಲಯಗಳ ಪಡಸಾಲೆಗಳು ಇಂತಹ ಮೌಲಿಕ ಅಧಃಪತನಕ್ಕೆ ಸಾಕ್ಷಿಯಾಗುತ್ತಿರುವುದು ಇಂದಿನ ದುರಂತ.

ಮುಖ್ಯಮಂತ್ರಿಗಳೇ ನೀವು ಸಮಸ್ತ ಕರ್ನಾಟಕದ ಮತದಾರರಿಗೂ ನ್ಯಾಯ ಒದಗಿಸಿದಂತಾಗಬೇಕಾದರೆ ಎಲ್ಲರಿಗೂ ಪಕ್ಷಾತೀತವಾಗಿ ಪಾಠ ಹೇಳುವ ಮೇಸ್ಟ್ರಾಗಿ ಕಾರ್ಯ ನಿರ್ವಹಿಸಿ ಎಂಬುದೇ ನಮ್ಮ ಆಶಯ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಪ್ರಕಾಶ್ ರೈ ಚಂದ್ರಯಾನದ ವ್ಯಂಗ್ಯ ಚಿತ್ರ ಖಂಡನೀಯ



ಮಾನ್ಯರೆ,

ಭಾರತದ ಮಹತ್ವಾಕಾಂಕ್ಷೆ ಯೋಜನೆಯಾದ ಚಂದ್ರಯಾನ – 3 ಅನ್ನು ಯಶಸ್ವಿಗೊಳಿಸಲು ಇಸ್ರೋದ ಅನೇಕ ವಿಜ್ಞಾನಿಗಳು ಹಗಲು, ರಾತ್ರಿ ಎನ್ನದೆ ಅವಿರತವಾಗಿ ಕಷ್ಟಪಟ್ಟು ಯಶಸ್ವಿಯಾಗಿದ್ದಾರೆ. ಈ ಯೋಜನೆಗೆ 600 ಕೋಟಿ ರೂ. ತುಂಬಾ ಕಡಿಮೆ ವೆಚ್ಚದಲ್ಲಿ ತಯಾರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇದು ಭಾರತದ ಹೆಮ್ಮೆ ಮತ್ತು ಅಸ್ಮಿತೆಯನ್ನು ಇಡೀ ಪ್ರಪಂಚಕ್ಕೆ ಪರಿಚಯಿಸುವ ಸುಸಂದರ್ಭ. ಚಂದ್ರನ ಮೇಲೆ ರೋವರ್ ಸಾಫ್ಟ್ ಲ್ಯಾಂಡಿಂಗ್ ಮಾಡಲೆಂದು ಈ ಯೋಜನೆ ಯಶಸ್ವಿಯಾಗಲಿ ಎಂದು ಕೋಟ್ಯಾಂತರ ಭಾರತೀಯರು ಅನೇಕ ದೇವಾಲಯಗಳಲ್ಲಿ ದೇವರಿಗೆ ವಿಶೇಷ ಪೂಜೆ ಮತ್ತು ಪ್ರಾರ್ಥನೆಯನ್ನು ಭಕ್ತಿಯಿಂದ ಸಲ್ಲಿಸಿದ್ದು, ಆ ಪ್ರಾರ್ಥನೆ ಸಾಫಲ್ಯ ಕಂಡಿಗೆ. ಬೇರೆ ಯಾವ ದೇಶ ಮಾಡಿರದ ಸಾಧನೆಯನ್ನು ಚಂದ್ರನ ದಕ್ಷಿಣ ಧ್ರುವದಲ್ಲಿ ರೋವರ್ ಸಾಫ್ಟ್ ಲ್ಯಾಂಡಿಂಗ್ ಮಾಡಿ ಅದರ ಅನ್ವೇಷಣೆಗಾಗಿ ಹೊರಟಿರುವುದು ಶ್ಲಾಘನೀಯ ವಿಷಯವಾಗಿದೆ. ಭಾರತ ಇದರಲ್ಲಿ ಯಶಸ್ವಿಯಾಗಿದ್ದು, ದಕ್ಷಿಣ ಧ್ರುವದಲ್ಲಿ ಪ್ರಪಂಚದ ಮೊಟ್ಟ ಮೊದಲ ದೇಶ ಎಂಬ ಹೆಗ್ಗಳಿಕೆ ಗಳಿಸಿದೆ.

ಇತ್ತ ಭಾರತೀಯರೇ ಆದ ಬಹು ಭಾಷಾ ನಟನಾದ ಪ್ರಕಾಶ್ ರೈ ಚಂದ್ರಯಾನದ ಕುರಿತು ಟ್ವೀಟರ್‌ನಲ್ಲಿ ಚಂದ್ರಯಾನದ ಮೊದಲ ಚಿತ್ರವೆಂದು ಬರೆದು, ಒಬ್ಬ ವ್ಯಕ್ತಿ ಚಹ ಸುರಿಯುತ್ತಿರುವ ಅಪಹಾಸ್ಯದ ಕಾರ್ಟೂನ್ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಶೇರ್ ಮಾಡಿರುವುದು ಖಂಡನೀಯ. ಇದರ ಬಗ್ಗೆ ವ್ಯಾಪಕವಾದ ಆಕ್ರೋಶ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುತ್ತಿದ್ದು, ನೆಟ್ಟಿಗರು ಹಿಗ್ಗಾಮುಗ್ಗವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ.

ಇವರು ಭಾರತೀಯರಲ್ಲವೇ, ಇವರ ರಾಜಕೀಯದ ಭವಿಷ್ಯಕ್ಕಾಗಿ ಈ ರೀತಿ ಕೆಳಮಟ್ಟಕ್ಕೆ ಇಳಿದು ದೇಶವನ್ನು ಅವಮಾನಿಸಿ, ಮಾನ, ಮರ್ಯಾದೆಯನ್ನು ಹಾಳು ಮಾಡುತ್ತಿರುವವರನ್ನು ಕಠಿಣ ಶಿಕ್ಷೆ ನೀಡಬೇಕೆಂದು ಅಕ್ರೋಶದ ನುಡಿಗಳನ್ನು ಹೊರಹಾಕುತ್ತಿದ್ದಾರೆ. ಒಬ್ಬ ಬಹುಭಾಷಾ ನಟನಾಗಿ ದೇಶದ ಬಗ್ಗೆ ಅಭಿಮಾನ, ದೇಶಪ್ರೇಮ ಬೆಳೆಸಿಕೊಳ್ಳಬೇಕು. ಒಬ್ಬ ವ್ಯಕ್ತಿಯನ್ನು ದ್ವೇಷಿಸುವುದಕ್ಕೂ, ತಮ್ಮ ದೇಶವನ್ನು ದ್ವೇಷಿಸುವುದಕ್ಕೂ ವ್ಯತ್ಯಾಸವಿಲ್ಲವೇ? ನೀವೇನು ಪಾಕಿಸ್ತಾನದಲ್ಲಿ ಇದ್ದೀರಾ? ಒಬ್ಬ ಸಾಮಾನ್ಯ ಪ್ರಜೆಗೆ ಇರಬೇಕಾದ ಜ್ಞಾನವು ನಿಮಗಿಲ್ಲವೇ? ಸಂಭ್ರಮಿಸಬೇಕಾದ ಸಮಯದಲ್ಲಿ ಅಪಹಾಸ್ಯವೇಕೆ? ರಾಜಕೀಯ ಸಿದ್ಧಾಂತವನ್ನು ಬದಿಗಿಟ್ಟು ಒಬ್ಬ ದೇಶಾಭಿಮಾನಿಯಾಗಿ ಸಂಭ್ರಮಿಸಬೇಕಲ್ಲವೇ? ಅಪಹಾಸ್ಯವನ್ನು ಬಿಟ್ಟು ಸ್ಫೂರ್ತಿ ನೀಡುವಂತಹ ಭಾರತೀಯರಾಗಿ ಹೆಮ್ಮೆಪಡಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ನಿವೃತ್ತ ಯೋಧರನ್ನು ಅಲೆದಾಡಿಸಬೇಡಿ

ಮಾನ್ಯರೆ,

ಜೈ ಜವಾನ್ ಜೈ ಕಿಸಾನ್ ಇದು 1965ರ ಭಾರತ ಪಾಕಿಸ್ತಾನ ಯುದ್ಧದ ಸಮಯದಲ್ಲಿ ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಯೋಧರನ್ನು ಹುರಿದುಂಬಿಸಲು ಹೇಳಿದ ಮಾತು. ರೈತ ಮತ್ತು ಯೋಧ ಯಾವುದೇ ದೇಶದ ಆಸ್ತಿ.

ರೈತ ಮತ್ತು ಯೋಧ ಇಬ್ಬರಲ್ಲಿ ಯಾರಾದರೊಬ್ಬರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಎಡವಿದರೆ ದೇಶದ ಪ್ರಗತಿ ಅಸಾಧ್ಯ ನಮ್ಮ ಭಾರತ ಸೇನೆ ವಿಶ್ವದಲ್ಲಿ ಅತ್ಯಂತ ಶಕ್ತಿಶಾಲಿ ಸೇನೆಯಾಗಿದೆ. ನಮ್ಮ ವೀರ ಯೋಧರು ಪಾಕಿಸ್ತಾನದೊಂದಿಗಿನ ನಾಲ್ಕು ಯುದ್ಧಗಳು, ಚೀನಾದೊಂದಿಗಿನ ಯುದ್ಧಗಳಲ್ಲಿ ಮತ್ತು ವಿಶ್ವ ಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ, ಶ್ರೀಲಂಕಾದಲ್ಲಿ ಎಲ್‌ಟಿಟಿಇಯೊಂದಿಗಿನ ಯುದ್ಧಗಳಲ್ಲಿ ದೇಶದ ಗೌರವವನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡಿದ್ದಾರೆ. ಇಂತಹ ವೀರ ಯೋಧರುಗಳಿಗೆ ವೃತ್ತಿಯಲ್ಲಿದ್ದಾಗ ಮಾತ್ರ ಬೆಲೆ ಕೊಡುವ ಸರ್ಕಾರಗಳು ಇವರ ನಿವೃತ್ತಿಯ ನಂತರ ಕಡೆಗಣಿಸುವುದು ದುರದೃಷ್ಟಕರವಾಗಿದೆ. ನಿವೃತ್ತಿಯ ನಂತರ ಪಿಂಚಣಿ, ನಿವೇಶನ ಮುಂತಾದ ಸೌಲಭ್ಯಗಳಿಗೆ ಪರದಾಡುವಂತೆ ಮಾಡುವುದು ಯಾವ ನ್ಯಾಯ.

ಯೋಧರು ತನ್ನ ದೇಶಕ್ಕಾಗಿ ಕುಟುಂಬದಿಂದ ದೂರವಿದ್ದು ಹಲವಾರು ತ್ಯಾಗ ಮಾಡಿರುತ್ತಾರೆ. ಇಂತಹ ಯೋಧರು ನಿವೃತ್ತಿಯ ನಂತರ ನೆಮ್ಮದಿಯಾಗಿರಲೆಂದು ಪಿಂಚಣಿಯ ಜೊತೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ಅಡಿ ನಿವೃತ್ತಿಯಾದ ಯೋಧರಿಗೆ ಅವರ ವಾಸ ಸ್ಥಾನ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ 5 ಎಕರೆ ಜಮೀನು ಮಂಜೂರು ಮಾಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

ಒಂದು ವೇಳೆ ಭೂಮಿಯ ಲಭ್ಯತೆಯಿರದ ಪ್ರದೇಶಗಳಲ್ಲಿ, ಸರ್ಕಾರದ ಆಶ್ರಯ ಯೋಜನೆಯಡಿಯಲ್ಲಿ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 1200 ಚದರ ಅಡಿ ನಿವೇಶನ ಮತ್ತು ಗ್ರಾಮೀಣ ಭಾಗದಲ್ಲಿ 2400 ಚದರ ಅಡಿ ನಿವೇಶನವನ್ನು ಮಂಜೂರು ಮಾಡಬಹುದಾಗಿದೆ. ನಿವೃತ್ತ ಯೋಧರ ಫೌಂಡೇಶನ್‌ನ ಪ್ರಕಾರ ರಾಜ್ಯಾದ್ಯಂತ ನಾನಾ ಜಿಲ್ಲೆಗಳಲ್ಲಿ ಭೂ ಮಂಜೂರಾತಿಗಾಗಿ 5000 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಇದರಲ್ಲಿ 1000 ಅರ್ಜಿಗಳು ಮಾತ್ರ ವಿಲೇವಾರಿಯಾಗಿರುವುದು ದುರದೃಷ್ಟಕರವಾಗಿದೆ. ಸರ್ಕಾರ ಶೀಘ್ರವಾಗಿ ಉಳಿದ ಅರ್ಜಿಗಳು ವಿಲೇವಾರಿಯಾಗುವಂತೆ ಕ್ರಮ ಕೈಗೊಳ್ಳಬೇಕೆಂದು ವೀರ ಯೋಧರ ಪರವಾಗಿ ಅಗ್ರಹಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಸ್ವಾಮಿ ವಿವೇಕಾನಂದರ ತತ್ವಗಳು ಅಮೃತಾಂಬರದಿ ಆರದ ದೀಪಗಳು

ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಂಡ ನಾಡಿನಲ್ಲಿ ನಮ್ಮ ಭಾರತೀಯತೆಯ ಭವ್ಯ ದರ್ಶನ ಮಾಡಿಸಿ ಪ್ರತಿಯೊಬ್ಬರಲ್ಲೂ ದೇಶಭಕ್ತಿಯನ್ನು ಬಡಿದೆಬ್ಬಿಸಿದ ಅಪ್ರತಿಮ ವೀರ ಸೇನಾನಿ ಸ್ವಾಮಿ ವಿವೇಕಾನಂದರು. ಅವರು ಬದುಕಿದ್ದು ಕೆಲವೇ ವರ್ಷಗಳಾದರೂ ಯುಗ ಕಳೆದರೂ ಯುಗಾಂತರದ ಯುಗಪುರುಷ. ಕಾಲದ ಮರೆಯಲ್ಲಿ ಮಾಸಿ ಹೋಗದೆ ಎಲ್ಲರ ಮನಗಳು ಸ್ಮರಿಸುವ ಹಾಗೂ ನೆನಪಿಡಬಹುದಾದ ಸಂದೇಶಗಳನ್ನು ಯುವ ಜನಾಂಗಕ್ಕೆ ಬಳುವಳಿಯಾಗಿ ಕೊಟ್ಟ ದೇಶ ಮರೆಯಲಾಗದ ಸ್ಫೂರ್ತಿಯ ಚಿಲುಮೆಯಾಗಿದ್ದವರು. ಅವರ ಬದುಕೇ ಒಂದು ಸ್ಫೂರ್ತಿಯ ಚಿಲುಮೆ, ಎಂತಹ ಬಲಹೀನನನ್ನು ಬಲಶಾಲಿಯನ್ನಾಗಿ ಮಾಡಬಲ್ಲದು. ಈ ಎಲ್ಲಾ ಕಾರಣಗಳಿಂದಲೇ ಅವರ ಜನುಮ ದಿನವನ್ನು ಇಡೀ ದೇಶವೇ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಿ ಯುವಕರನ್ನು ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂದು ಎಚ್ಚರಿಸುವ ಕರೆಘಂಟೆಯಾಗು ಕರೆ ನೀಡಲಾಗುತ್ತದೆ.

ವಿವೇಕಾನಂದರು ಯುವಜನಾಂಗಕ್ಕೆ ಸಾರಿದ ಸಂದೇಶಗಳು ಕೇವಲ ಆ ಕಾಲಕ್ಕೆ ಮಾತ್ರ ವಲ್ಲದೇ ಅಂದಿಗೂ, ಇಂದಿಗೂ, ಮುಂದಿನ ದಿನಮಾನ ಗಳಿಗೆ ಮಾತ್ರವಲ್ಲದೆ ಸೂರ್ಯ–ಚಂದ್ರ–ಆಕಾಶ–ನಕ್ಷತ್ರ ಬದುಕಿರುವವರೆಗೂ ಅನುಸರಣೀಯದಲ್ಲಿ ಆದರ್ಶವಾಗಿರಬಲ್ಲವು. ಅವರ ಸಿದ್ಧಾಂತಗಳಲ್ಲಿ ಪ್ರಮುಖವಾದ ಹಾಗೂ ಗಣ್ಯವಾದ ನನ್ನ ಪರಿಮಿತಿಯ ಗ್ರಹಿಕೆಯಲ್ಲಿ ಸೆರೆಗೆ ಸಿಕ್ಕ ಕೆಲವು ತತ್ವ–ಸಿದ್ಧಾಂತಗಳು ಪ್ರಸ್ತುತ ದಿನಗಳಲ್ಲಿ ಯುವಜನಾಂಗಕ್ಕೆ ಹೇಗೆ ಮಾರ್ಗದರ್ಶಕವಾಗಬಲ್ಲವು ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ

ಸ್ವಾಮಿ ವಿವೇಕಾನಂದರ ಸಿದ್ಧಾಂತಗಳು

ನಿನ್ನ ಏಳಿಗೆಗೆ ನೀನೇ ಶಿಲ್ಪಿ: ಸ್ವಾಮಿ ವಿವೇಕಾನಂದರು ಯುವಜನತೆಗೆ ಕೊಟ್ಟ ಪ್ರಸಿದ್ಧ ಸಂದೇಶ ಇದಾಗಿದೆ. ಸರ್ವಕಾಲದಲ್ಲಿಯೂ ಪ್ರತಿಯೊಬ್ಬನಲ್ಲಿಯೂ ಸ್ಫೂರ್ತಿ ನೀಡಬಲ್ಲ ನುಡಿ ಇದಾಗಿದೆ. ಒಬ್ಬ ವ್ಯಕ್ತಿ ಉದ್ಧಾರವಾಗಲು ಅಥವಾ ಹಾಳಾಗಲು ಮತ್ತೊಬ್ಬ ವ್ಯಕ್ತಿ ಕಾರಣವಾಗಲಾರನು. ನಮ್ಮಲ್ಲಿ ಕೆಲವು ಪೋಷಕರ ಸಾಮಾನ್ಯ ನುಡಿ ಪ್ರಚಲಿತದಲ್ಲಿದೆ–ನಮ್ಮ ಮಗ ಒಳ್ಳೆಯವನೇ, ಆ ಹುಡುಗನ ಸಹವಾಸ ಮಾಡಿ ಹಾಳಾದ ಎಂದು ತೆಗಳಿಕೆಯ ಉತ್ತರ ನೀಡಬಲ್ಲ ಜನರಿಗಂತೂ ಈ ವಾಕ್ಯ ಹೊಸ ವ್ಯಾಖ್ಯಾನ ಕೊಟ್ಟಂತಿದೆ. ನಾನು ಇಂದು ಏನಾಗಿದ್ದೇನೋ ಅದು ಭೂತಕಾಲದಲ್ಲಿ ಮಾಡಿದ ಕೆಲಸದ ಫಲ, ಇಂದು ಏನು ಮಾಡುವೇನೋ ಅದು ನನ್ನ ಮುಂದಿನ ಭವಿಷ್ಯವನ್ನು ರೂಪಿಸಲು ನಾಂದಿಯಾಗಿರುತ್ತದೆ. ಹಾಗಾಗಿ ನಮ್ಮ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿದ್ದಲ್ಲಿ ತಕ್ಕ ಪ್ರತಿಫಲವನ್ನು ಪಡೆಯಬಲ್ಲೆವು. ಇದನ್ನು ಹೇಳುವಾಗ ಹಿಂದೆ ಎಲ್ಲೋ ಓದಿದ ಅಥವಾ ಕೇಳಿದ ಘಟನೆ ನೆನಪಾಗುತ್ತದೆ.

ಘಟನೆ: ಶಿಲ್ಪಿಯೊಬ್ಬ ಒಂದು ಕಲ್ಲಿನಿಂದ ವಿನೂತನವಾದ, ಸುಪ್ರಸಿದ್ಧವಾದ ಮೂರ್ತಿಯೊಂದನ್ನು ಕೆತ್ತಿದ ನಂತೆ. ಆಗ ಆ ಮೂರ್ತಿಯನ್ನು ನೋಡಿ ಜನರೆಲ್ಲರೂ ಹರ್ಷದಿಂದ ಸಂಭ್ರಮಿಸಿದರಂತೆ. ಜನರ ಸಂಭ್ರಮವನ್ನು ನೋಡಿದ ಮೂರ್ತಿ ಆ ಶಿಲ್ಪಿಗೆ ತನ್ನ ಬದುಕಿಗೆ ಸಾರ್ಥಕತೆಯನ್ನು ತಂದುಕೊಟ್ಟಿದ್ದಕ್ಕಾಗಿ ಧನ್ಯವಾದವನ್ನು ಅರ್ಪಿಸಿದಾಗ ಆ ಶಿಲ್ಪಿ ಹೀಗೆ ನುಡಿದನಂತೆ 'ನಾನೇನು ವಿಶೇಷವಾದುದನ್ನು ಮಾಡಿಲ್ಲ, ನಿನ್ನಲ್ಲೇ ಅಡಕವಾಗಿದ್ದ ಬೇಡವಾದ ಅಂಶಗಳನ್ನು ಬೇರ್ಪಡಿಸಿದೆ ಅಷ್ಟೇ, ಸುಂದರವಾದ ಪ್ರತಿಮೆ ನೀನೇ ಆಗಿರುವೆ' ಎಂದನಂತೆ. ಘಟನೆ ಎಷ್ಟು ಅರ್ಥಪೂರ್ಣವಾಗಿದೆ ಅಲ್ವ! ನಮ್ಮಲ್ಲಿಯೇ ಇರುವ ಗುಣಗಳನ್ನು ಸರಿಪಡಿಸಿಕೊಂಡಲ್ಲಿ ನಾವೇ ಸುಂದರ ವಿಗ್ರಹವಾಗಿ ರೂಪುಗೊಳ್ಳಬಲ್ಲೆವು. ಇದನ್ನೇ ಸ್ವಾಮಿ ವಿವೇಕಾನಂದರು ಹೇಳಿರುವುದು ನಿನ್ನ ಏಳಿಗೆಗೆ ನೀನೇ ಶಿಲ್ಪಿಯೇ ಹೊರತು ಬೇರೆ ಯಾರಿಲ್ಲ ಎಂದು. ನಮ್ಮಲ್ಲಿಯೇ ಅನಂತವಾದ ಶಕ್ತಿ ಅಡಗಿದೆ, ಅದನ್ನರಿಯುವ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಕಾಡಿನಲ್ಲಿ ವಾಸಮಾಡುವ ಕಸ್ತೂರಿ ಮೃಗ ತನ್ನ ಮೈಯಿಂದಲೇ ಸೂಸುವ ಸುಗಂಧ ಪರಿಮಳವನ್ನು ಕಂಡುಹಿಡಿಯಲಾಗದೇ ಕಾಡಿನಲ್ಲೆಲ್ಲ ಹುಡುಕವಂತಹ ಕೆಲಸವನ್ನು ಮಾಡುವಂತೆ ಪ್ರಸ್ತುತ ಯುವ ಸಮುದಾಯವು ಎಲ್ಲಿ ಸ್ಫೂರ್ತಿ ಸಿಗುವುದೆಂದು ಹುಡುಕುತ್ತಾ ಸಮಯ ಕಳೆಯುತ್ತಾರೆ. ಅಗಾಧವಾದ ಶಕ್ತಿ ನಿಮ್ಮಲ್ಲಿಯೇ ಅಡಗಿದೆ ಎಂಬ ಸೂಚ್ಯವನ್ನು ವಿವೇಕಾನಂದರ ಈ ನುಡಿ ನೀಡುತ್ತದೆ. ಇದನ್ನು ಅರ್ಥಮಾಡಿಕೊಂಡಾಗ ಮಾತ್ರ ಈ ಸಂದೇಶ ಮುಟ್ಟುತ್ತದೆ, ಮನಸ್ಸನ್ನು ಎಚ್ಚರಿಸುತ್ತದೆ.



ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ: ಯುವಕರಿಗೆ ಸ್ವಾಮಿ ವಿವೇಕಾನಂದರು ಕೊಟ್ಟ ಆದರ್ಶಯುಕ್ತವಾದ ನುಡಿ ಇದಾಗಿದೆ. ನಿಮ್ಮಲ್ಲಿ ಗುರಿಯೊಂದು ಇರಲಿ, ಆ ಗುರಿಯನ್ನು ಮುಟ್ಟುವ ತನಕ ನಿಮ್ಮ ಪ್ರಯತ್ನ ನಿಲ್ಲಬಾರದೆಂಬ ಸ್ಫೂರ್ತಿದಾಯಕವಾದ ನುಡಿ ಎಲ್ಲಾ ಕಾಲಕ್ಕೂ ಅನ್ವಯವಾಗುವಂತದ್ದು. ಪ್ರತಿಯೊಬ್ಬ ವ್ಯಕ್ತಿಗೂ ಗುರಿ ಇರಬೇಕು, ಆ ಗುರಿಯೆಡೆಗೆ ಸಾಗುವ ಪ್ರಯತ್ನ ಮಾಡಬೇಕು, ಗುರಿ ತಲುಪುವವರೆಗೂ ಪ್ರಯತ್ನಿಸುತ್ತಲೇ ಇರಬೇಕು. ಕೆಲವೊಮ್ಮೆ ಗುರಿಯನ್ನು ತಲುಪುವ ವೇಳೆಯಲ್ಲಿ ಸೋಲುಗಳುಂಟಾಗಬಹುದು, ನೋವು, ಅಪಮಾನ, ಅವಮಾನಗಳನ್ನು ಎದುರಿಸಬೇಕಾದ ಸಂದರ್ಭಗಳು ಎದುರಾಗಬಹುದು. ಆದರೆ ಅವುಗಳಿಗೆಲ್ಲಾ ತಲೆಕೆಡಿಸಿಕೊಳ್ಳದೇ ಮುನ್ನುಗ್ಗಬೇಕಾಗಿರುತ್ತದೆ. ಏಕೆಂದರೆ ಪ್ರಸ್ತುತ ದಿನಗಳಲ್ಲಿ ಸಾಧನೆ ಮಾಡಹೊರಟವನಿಗೆ ಬೆಕ್ಕುಗಳಿಗಿಂತ ಜನರೇ ಅಡ್ಡುರುತ್ತಾರೆ ಎಂದು ಎಲ್ಲೋ ಓದಿದ ಮಾತು ಅಷ್ಟು ಸತ್ಯವೆನಿಸುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿವೇಕಾನಂದರ ಈ ನುಡಿ ನನ್ನಿಂದ ಏನು ಸಾಧ್ಯವಾಗಲಾರದು ಎಂದು ಕೈಕಟ್ಟಿ ಕುಳಿತವರಿಗೆ ಭರವಸೆಯ ದಿವ್ಯಮಂತ್ರವಾಗಬಲ್ಲದು. ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಸಿದ್ಧಾಂತ ಸರ್ವ ಕಾಲದಲ್ಲಿಯೂ ಎಂತಹ ನಿರುತ್ಸಾಹನಲ್ಲಿಯೂ ಉತ್ಸಾಹ ತುಂಬಬಹುದಾದ ಮಿಂಚಿನಂತಹ ಪ್ರೇರಣೆಯಾಗಬಲ್ಲದು.

ದೇಶಭಕ್ತರಾಗಿರಿ: ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಭಾರತಕ್ಕೆ ಮರಳಿ ಬಂದಾಗ ಅವರಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿತು. ಆಗ ಅಲ್ಲಿದ್ದವರು ಇಷ್ಟು ದಿನ ವಿದೇಶದಲ್ಲಿ ತಂಗಿದ್ದಿರಿ, ಈಗ ಭಾರತಕ್ಕೆ ಬಂದಿರುವಿರಿ, ನಿಮಗೆ ಈ ಕ್ಷಣದಲ್ಲಿ ಭಾರತದ ಬಗ್ಗೆ ಎಂತಹ ಭಾವನೆ ಇದೆ? ಎಂದು ಪ್ರಶ್ನಿಸಿದಾಗ– ನಾನು ವಿದೇಶಕ್ಕೆ ಹೋಗುವ ಮುನ್ನ ಭಾರತವನ್ನು ಪ್ರೀತಿಸುತ್ತಿದ್ದೆ ಹೋಗುವಾಗಲು, ಈಗ ನನ್ನ ಮನಸ್ಸು ದೇಶಪ್ರೇಮದಲ್ಲಿಯೇ ತೊಯ್ದು ಹೋಗಿದೆ. ಈಗಂತೂ ನನ್ನ ದೇಶದ ಪ್ರತಿ ಕಣ, ಕಣವನ್ನು ಪೂಜಿಸುತ್ತೇನೆ ಎಂದು ಉತ್ತರ ನೀಡಿದರಂತೆ. ತನ್ನ ದೇಶದ ಬಗ್ಗೆ ಪೂಜ್ಯಭಾವನೆಯನ್ನು ಬಿತ್ತಿ ಬೆಳೆದು ಮೊಳಕೆಯೊಡೆಯುವಂತೆ ಮಾಡಿದ ಭವ್ಯವಾದ ಸಂದೇಶವಿದು. ಆದರೆ ಪ್ರಸ್ತುತ ದಿನಗಳಲ್ಲಿ ಹಣದ ವ್ಯಾಮೋಹದಿಂದಲೋ, ಪ್ರತಿಷ್ಠೆಯ ಕಾರಣದಿಂದಲೋ ವಿದೇಶದಲ್ಲಿ ಹೋಗಿ ನೆಲೆಸುವ ಅನೇಕ ಯುವ ಪ್ರತಿಭೆಗಳನ್ನು ಇತ್ತೀಚಿನ ದಿನಗಳಲ್ಲಿ ಕಾಣುತ್ತಿದ್ದೇವೆ. ಪ್ರತಿಭೆಗಳೆಲ್ಲಾ ಈ ರೀತಿ ಪಲಾಯನ ಮಾಡಿದ್ರೇ ಆದರೆ ನಮ್ಮ ದೇಶವನ್ನು ಪ್ರೀತಿಸುವ, ಗೌರವಿಸುವ ಕಾರ್ಯವನ್ನು ಯಾರು ಮಾಡಬಲ್ಲರು? ಚಿಂತಿಸಿ ಇದೇ ಕಳೆದ ಮೂರ್ನಾಲ್ಕು ವರ್ಷಗಳ ಹಿಂದೆ ಕೊರೊನಾ ಎಂಬ ಮಹಾಮಾರಿ ಎಲ್ಲೆಡೆ ಆಕ್ರಮಿಸಿಕೊಂಡಾಗ ರಕ್ಷಣೆಗಾಗಿ ಆಶ್ರಯ ಬಯಸಿ ಬಂದದ್ದು ಮಾತ್ರ ನಮ್ಮ ದೇಶಕ್ಕೆ ಹೊರತು ವಿದೇಶಕ್ಕಲ್ಲ. ನಮ್ಮ ದೇಶದ ಬಗ್ಗೆ ನಮಗೆ ಪೂಜ್ಯ ಭಾವನೆ ಇರಬೇಕೆಂಬ ಸ್ವಾಮಿಜೀ ಅವರ ನುಡಿ ಎಲ್ಲಾ ಕಾಲಕ್ಕೂ ಸಲ್ಲುವಂತದ್ದು.

ಮತ್ತೊಮ್ಮೆ ಈ ಮಾತನ್ನು ಹೇಳುತ್ತಾರೆ – ವಿದೇಶಿಗರಲ್ಲಿ ಒಳ್ಳೆಯ ಅಂಶಗಳಿದ್ದರೆ ಅದನ್ನು ಸ್ವೀಕರಿಸಿ,ಆದರೆ ಅವರನ್ನೇ ಅನುಕರಣೆ ಮಾಡಬೇಡಿ ಎಂದು ಹೇಳುವ ಮೂಲಕ ನಮ್ಮತನವನ್ನು ಮರೆಯಬಾರದೆಂಬ ಸೂಚನೆಯನ್ನು ಕೊಡುತ್ತಾರೆ. ಒಳ್ಳೆಯತನಗಳಿದ್ದರೆ ತೆಗೆದುಕೊಳ್ಳೋಣ, ಅದೇ ಸಮಯದಲ್ಲಿ ನಮ್ಮತನವನ್ನು ಕಡೆಗಣಿಸುವ ಪ್ರಯತ್ನ ಮಾಡದಿರೋಣ. ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ಬಿಟ್ಟುಕೊಡುವ ಅಗತ್ಯವಿಲ್ಲ. ಕೊರೊನೊ ಬಂದಾಗಲೇ ನಮ್ಮ ಭಾರತೀಯ ಸಂಸ್ಕೃತಿಯ ನೈಜ ಅರಿವು ಕೆಲವರಿಗಾದರೂ ಆಗಿರಬಹುದೆಂಬ ನಂಬಿಕೆ ನನಗಿದೆ. ಅದು ಕೈ ಮುಗಿದು ನಮಸ್ಕರಿಸುವ, ಹೊರಗಡೆಯಿಂದ ಮನೆಗೆ ಬಂದಾಗ ಕೈ ಕಾಲು ತೊಳೆದು ಮನೆಯೊಳಗೆ ಕಾಲಿಡುವ ಸಂಪ್ರದಾಯ ಇದ್ದದ್ದು ಅದರ ಉದ್ದೇಶದ ಅರಿವು ವರ್ಷಗಳ ಮಟ್ಟಿಗಾದರೂ ಕೆಲವರಿಗಾದರೂ ಅರ್ಥವಾಗಿರಬಹುದು. ನಮ್ಮ ಸಂಸ್ಕೃತಿಯನ್ನು ಕೆಲವು ವಿದೇಶಿಗರೇ ಪಾಲಿಸುತ್ತಾ ಬಂದಿರುವುದೇ ಇದಕ್ಕೆ ನಿದರ್ಶನ.ಆದರೆ ನಾವು ಬೇರೆಯ ಸಂಸ್ಕೃತಿಯ ಅಂಧಾನುಕರಣೆಯನ್ನು ಮಾಡುತ್ತಾ ನಮ್ಮ ಸಂಸ್ಕೃತಿಯ ಬಗ್ಗೆ ನಿರ್ಲಕ್ಷ್ಯ ವಹಿಸುವುದು ದುರಂತವೆಂದೇ ಹೇಳಬಹುದು. ಅಂತವರಿಗೆ ಸ್ವಾಮಿ ವಿವೇಕಾನಂದರ ಈ ಸಿದ್ಧಾಂತ ಹೊಸ ಅರ್ಥವನ್ನು ನೀಡಿ ಪರಿವರ್ತನೆಯನ್ನು ತರಬಲ್ಲದು.

ಯಾವುದನ್ನು ಪ್ರಶ್ನಿಸದೇ ಒಪ್ಪಿಕೊಳ್ಳಬೇಡಿ: ಯಾವುದೋ ಗ್ರಂಥದಲ್ಲಿ ಹೇಳಿದೆ, ಯಾರೋ ವಿದ್ವಾಂಸರು ಹೇಳಿದ್ದಾರೆ, ಯಾರೋ ಪ್ರಮುಖ ಗಣ್ಯರು ಹೇಳಿದ್ದಾರೆಂದು ಅವರ ನುಡಿಗಳನ್ನು, ವಿಚಾರಗಳನ್ನು ನಂಬಬೇಡಿ, ಆಲೋಚಿಸಿ ನಿಮ್ಮ ಸ್ವ ಅನುಭವಕ್ಕೆ ಬಂದರೆ ಮಾತ್ರ ಅದನ್ನು ನಂಬಿ, ಪ್ರಶ್ನಿಸದೇ, ನಿಮ್ಮ ಅನುಭವಕ್ಕೆ ಬಾರದ ಯಾವುದೇ ವಿಷಯ ವನ್ನೂ ಅದು ಎಲ್ಲಿಯೇ ಇರಲಿ, ಯಾರೇ ಹೇಳಿರಲಿ ಅದನ್ನು ನಂಬದಿರಿ ಎನ್ನುವ ಸ್ವಾಮಿ ವಿವೇಕಾನಂದರ ಈ ಆದರ್ಶದ ಸಿದ್ಧಾಂತವನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಬಂದಿದ್ದಲ್ಲದೇ ಅದನ್ನೇ ಸಂದೇಶವಾಗಿ ಸಾರುವ ಮೂಲಕ ಯುವ ಸಮುದಾಯವನ್ನು ಎಚ್ಚರಿಸುವ ಕೆಲಸವನ್ನು ಮಾಡಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಯಾರೋ ಸಿನಿಮಾ ನಟನ ಅಭಿಮಾನಿ, ರಾಜಕಾರಣಿಯ ಬೆಂಬಲಿಗ, ಸಾಹಿತಿಯ ಪರಿಪಾಲಕನೆಂದೋ ತಮಗೆ ಇಷ್ಟವಾದವರು ಹೇಳಿದ್ದನ್ನೇ ವೇದವಾಕ್ಯವೆಂದು ಪರಿಪಾಲಿಸುವ ಯುವ ಸಮುದಾಯವನ್ನು ಒಂದು ಕ್ಷಣದ ಮಟ್ಟಿಗಾದರೂ ಆಲೋಚಿಸುವಂತೆ ಮಾಡಬಲ್ಲ ನುಡಿ ಇದಾಗಿದೆ ಎಂದರೆ ಬಹುಶಃ ಅದರಲ್ಲಿ ಯಾವುದೇ ಅತಿಶಯೋಕ್ತಿ ಇರಲಾರದು. ಪ್ರಶ್ನಿಸಬೇಕು, ಸಾಧಕ – ಬಾಧಕಗಳನ್ನು ಅರ್ಥಮಾಡಿಕೊಂಡು ಅನುಭವಕ್ಕೆ ಬಂದ ನಂತರ ವಿಚಾರಗಳನ್ನು ನಂಬಬೇಕೆಂಬ ಈ ಸಿದ್ಧಾಂತ ನಿಜಕ್ಕೂ ಅನುಕರಣೀಯವಾದುದು.

ನಿಮ್ಮಲ್ಲಿ ಶ್ರದ್ಧೆ ಜಾಗೃತವಾಗಿರಲಿ : ಪ್ರತಿಯೊಬ್ಬ ಮನುಷ್ಯನಲ್ಲಿಯೂ ಶ್ರದ್ಧೆ ಇರಬೇಕು.ಶ್ರದ್ಧೆ ಜಾಗೃತವಾಗಿದ್ದರಷ್ಟೇ ಅವನಿಂದ ಏನಾದರೂ ಸಾಧನೆ ಮಾಡಲು ಸಾಧ್ಯವಾಗಬಹುದು. ಇದನ್ನು ಹೇಳುವಾಗ ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದ ಘಟನೆ ಎಂದು ಹೇಳಲಾಗುವ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆ: ಒಮ್ಮೆ ಸ್ವಾಮಿ ವಿವೇಕಾನಂದರು ಕಾಡಿನ ಮಾರ್ಗದಲ್ಲಿ ಬರುವಾಗ ಹಸಿದ ಭಯಂಕರವಾದ ಹುಲಿಯೊಂದು ಎದುರಾಯಿತು. ಆಗ ವಿಚಲಿತರಾಗದ ಸ್ವಾಮಿಜೀ ಆ ಹುಲಿಗೆ ನೀನು ಹಸಿದಿರುವೆ, ನಾನು ಕೂಡ ಹಸಿದಿರುವೆ ,ಬಾ ನನ್ನನ್ನು ತಿಂದು ನಿನ್ನ ಹಸಿವನ್ನು ನೀಗಿಸಿಕೊ ಎಂದು ಹೇಳಿ ಕಣ್ಣುಮುಚ್ಚಿ ಧ್ಯಾನಸ್ತಕರಾದರಂತೆ. ಆ ಹುಲಿ ಸ್ವಾಮಿಜಿಯ ಹತ್ತಿರ ಬಂದು ಏನೂ ಮಾಡದೇ ಹೊರಟುಹೋಯಿತು ಎನ್ನುತ್ತಾರೆ. ಸ್ವಾಮಿ ವಿವೇಕಾನಂದರಿಗಿದ್ದ ಶ್ರದ್ಧೆಗೆ ನಿರ್ದಶನ ಎನ್ನುವಂತೆ ಈ ಕಥೆಯನ್ನು ಹೇಳಲಾಗುತ್ತದೆ. ಮನುಷ್ಯನಿಗೆ ಶ್ರದ್ಧೆ ಎಂಬುದಿದ್ದರೆ ಆತನಿಂದ ಏನು ಬೇಕಾದರೂ ಸಾಧ್ಯ ಎಂಬುದಕ್ಕೆ ಉದಾಹರಣೆಯಾಗಿ ಈ ಕಥೆ.

ಈ ಕಥೆಯನ್ನು ಈಗಿನ ಯುವ ಸಮುದಾಯದವರು ಕೇಳಿದರೆ ಇದು ಎಲ್ಲಾದರೂ ಸಾಧ್ಯ ಉಂಟಾ? ಎಂದು ಕೆಲವರಾದರೂ ಕೇಳಬಹುದು. ನನಗೆ ಈ ಕಥೆಯನ್ನು ಓದಿದಾಗ ಇಲ್ಲಿ ಬರುವ ಹುಲಿಯನ್ನು ಒಂದು ಪ್ರಾಣಿಯನ್ನಾಗಿ ನೋಡದೇ ಸಮಸ್ಯೆಗಳೇ ಹುಲಿಯಂತೆ ಕಾಡಿದಾಗ ನಾವು ಸಮಸ್ಯೆಯ ಎದುರು ನಿಂತು ಹೋರಾಡುವ ಕೆಲಸವನ್ನು ಮಾಡಬೇಕು, ಆಗ ಸಮಸ್ಯೆ ಖಂಡಿತವಾಗಿ ಪರಿಹಾರವಾಗಬಲ್ಲದು ಎಂಬುದು ನನ್ನ ಭಾವನೆ.

ಸಣ್ಣ ಪುಟ್ಟ ವಿಷಯಗಳಿಗೂ ಆತ್ಮಹತ್ಯೆ ದಾರಿ ಹಿಡಿಯುವ, ಸಮಸ್ಯೆಗಳಿಗೆ ಬೆನ್ನು ತಿರುಗಿಸಿ ಓಡುವಂತಹ, ಮಾನಸಿಕ ಖಿನ್ನತೆಗೆ ಒಳಗಾಗುವಂತಹ ಇತ್ತೀಚಿನ ಯುವ ಜನತೆಗೆ ಭರವಸೆಯ ದಿವ್ಯಚೇತನವನ್ನು ನೀಡಬಲ್ಲ ಸಂದೇಶ ಇದಾಗಿದೆ ಎನ್ನಬಹುದು. ನಮ್ಮ ಬಗ್ಗೆ ಬೇರೆ ಯಾರಿಗೂ ನಂಬಿಕೆ ಇಲ್ಲದಿದ್ದರೂ ತೊಂದರೆ ಇಲ್ಲ ನಮಗೆ ನಮ್ಮ ಬಗ್ಗೆ ಶ್ರದ್ಧೆ, ಆತ್ಮವಿಶ್ವಾಸ ಮೊದಲು ಇರಬೇಕು ಎಂಬುದನ್ನು ಈ ನುಡಿ ತಿಳಿಸುತ್ತದೆ.

ಸಮುದ್ರವನ್ನು ನಮ್ಮ ದೃಷ್ಟಿಗೆ ನಿಲುಕವಷ್ಟು ನೋಡಿ ಸಂಭ್ರಮಿಸಬಹುದೋ ಹಾಗೇ ಸ್ವಾಮಿ ವಿವೇಕಾನಂದರ ಜೀವನದ ಸಿದ್ಧಾಂತಗಳು ಸಮುದ್ರದಷ್ಟೇ ಶ್ರೇಷ್ಠವೂ, ಆಳವೂ, ಅರ್ಥಪೂರ್ಣ ವಾದಂತವುಗಳಾಗಿವೆ. ಅವುಗಳನ್ನು ತಿಳಿಯಲು ಅಂತರಂಗದ ಕಣ್ಣನ್ನು ತೆರೆಯಬೇಕು, ವಿಶಾಲವಾದ ದೃಷ್ಟಿಕೋನವಿರಬೇಕು ಆಗ ಮಾತ್ರ ಅವರ ಸಿದ್ಧಾಂತಗಳು ಎಲ್ಲಾ ಕಾಲಕ್ಕೂ ಮಾರ್ಗ ದರ್ಶಕವಾಗಬಲ್ಲುವು. ರವೀಂದ್ರನಾಥ ಠಾಗೋರ್ ಅವರು ಹೇಳಿರುವ ಈ ಮಾತು: ನೀವು ಭಾರತವನ್ನು ತಿಳಿಯಬೇಕೆಂದರೆ ಸ್ವಾಮಿ ವಿವೇಕಾ ನಂದರ ಸಿದ್ಧಾಂತಗಳನ್ನು, ಅವರ ನುಡಿಗಳನ್ನು ಓದಿ ಅರ್ಥಮಾಡಿಕೊಳ್ಳಿ ಅಲ್ಲಿ ಯಾವುದೇ ನುಡಿಯೂ ನಕರಾತ್ಮಕವಲ್ಲ, ಎಲ್ಲವೂ ಸಕರಾತ್ಮಕವಾದವುಗಳೇ ಎಂಬ ಮಾತು ಅಕ್ಷರಶಃ ಸತ್ಯವಾದುದು.

ಚಂದ್ರಯಾನ–3 ಯಶಸ್ಸಿನಲ್ಲಿ ಬೆಳಗಾವಿ ವಿಜ್ಞಾನಿಗಳು ಪಾಲುದಾರರು!

ಬೆಳಗಾವಿ: ಚಂದ್ರಯಾನ–3' ಯಶಸ್ಸಿನೊಂದಿಗೆ ಬೆಳಗಾವಿಯೂ ಐತಿಹಾಸಿಕ ಪುಟ ತೆರೆಯಿತು. ಈ ಗಗನನೌಕೆಯು ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿಯಲು ಬೇಕಾದ ಸಲಕರಣೆಗಳನ್ನು ಸಿದ್ಧಪಡಿಸುವುದರೊಂದಿಗೆ ಜಿಲ್ಲೆಯ ಇಬ್ಬರು ವಿಜ್ಞಾನಿಗಳು ಕೂಡ ಈ ತಂಡದ ಸದಸ್ಯರಾಗಿದ್ದಾರೆ.

ಇಲ್ಲಿನ ಸರ್ವೊ ಕಂಟ್ರೋಲ್ಸ್ ಏರೋಸ್ಪೇಸ್ ಇಂಡಿಯಾ ಲಿಮಿಟೆಡ್ ಕಂಪನಿ ಸಿದ್ಧಪಡಿಸಿದ ಬಿಡಿ ಭಾಗಗಳು ಈ ಖಗೋಳಯಾನದ ಪೂರ್ಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಗಗನನೌಕೆಯಲ್ಲಿ ಬಳಸಿದ ಹೈಡ್ರಾಲಿಕ್ ಉಪಕರಣ, ವಾಲ್ವ್‌ಗಳು, ಸ್ಪೂಲ್ಸ್, ಸ್ಲೀವ್ಸ್, ಮ್ಯಾನಿಫೋಲ್ಡ್ ಬ್ಲಾಕ್ಸ್, ಎಲೆಕ್ಟ್ರಾನಿಕ್ ಸೆನ್ಸಾರ್‌ಗಳನ್ನು ಇಲ್ಲಿಂದ ರವಾನಿಸಲಾಗಿದೆ. ನೌಕೆಯನ್ನು ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿಸುವಲ್ಲಿ ಈ ಉಪಕರಣಗಳ ಪಾತ್ರ ಮಹತ್ವದ್ದು. ಚಂದ್ರಸ್ಪರ್ಶ ಮಾಡಿದ್ದು ಒಂದು ಅಭೂತಪೂರ್ವ ಕ್ಷಣ. ಯಂತ್ರಗಳು ನೌಕೆಯಿಂದ ಹೊರಬಂದು ಹೇಗೆ ಕೆಲಸ ಮಾಡುತ್ತವೆ ಎಂಬುದು



ಪ್ರಕಾಶ ಪಡಣೇಕರ ಶಿವಾನಂದ ಕಾಮತ

ಮುಂದಿನ ಕುತೂಹಲ ಎಂದು ಕಂಪನಿ ಮಾಲೀಕ, ವ್ಯವಸ್ಥಾಪಕ ನಿರ್ದೇಶಕರೂ ಆದ ದೀಪಕ್ ಧಡೋತಿ ತಿಳಿಸಿದರು.

ಹೈಡ್ರಾಲಿಕ್ ಉಪಕರಣವು ಗಗನನೌಕೆಯ ಪಥ ನಿರ್ವಹಣೆ (ನಾಜಲ್ ಕಂಟ್ರೋಲ್) ಮಾಡಲು ಸಹಕರಿಸುವ ಕೆಲಸ ಮಾಡಿತು. ನೌಕೆಯು ಚಂದ್ರನ ಕಕ್ಷೆಯಲ್ಲಿ ಸುತ್ತುವಾಗ ಹಾಗೂ ನೌಕೆಯಿಂದ ರೋವರ್ ಚಂದ್ರನ ಮೇಲೆ ಇಳಿಯುವಾಗ ಸೆನ್ಸರ್ ಉಪಕರಣ ಕೆಲಸ ಮಾಡಿತು ಎಂದರು. ಇದೇ ಕಂಪನಿಯು ಚಂದ್ರಯಾನ–2 ಹಾಗೂ ಮಂಗಳಯಾನಕ್ಕೂ ಬಿಡಿಭಾಗಗಳನ್ನು ಪೂರೈಸಿತ್ತು. 15 ವರ್ಷಗಳಿಂದ 'ಇಸ್ರೊ' ಸಂಸ್ಥೆಯೊಂದಿಗೆ ಈ ಕಂಪನಿ ಹೆಜ್ಜೆ ಹಾಕುತ್ತಿದೆ.

ಹಿರಿಮೆ ತಂದ ಇಬ್ಬರು ವಿಜ್ಞಾನಿಗಳು: ಖಾನಾಪುರ ತಾಲೂಕಿನ ಕಾಪೋಲಿ ಗ್ರಾಪಂ ವ್ಯಾಪ್ತಿಯ ಅನಗಡಿ ಗ್ರಾಮದ ಯುವ ವಿಜ್ಞಾನಿ ಪ್ರಕಾಶ ನಾರಾಯಣ ಪಡಣೇಕರ ಹಾಗೂ ಗೋಕಾಕ ತಾಲೂಕಿನ ಮಮದಾಪುರ ಗ್ರಾಮದ ಶಿವಾನಂದ ಮಲಪ್ಪ ಕಮತ ಚಂದ್ರಯಾನ–3ರ ಸಾಧಕರ ತಂಡದಲ್ಲಿದ್ದಾರೆ. ಪ್ರಕಾಶ ಪಡಣೇಕರ 2019ರಿಂದ ಇಸ್ರೋದಲ್ಲಿದ್ದಾರೆ. 32ರ ಪ್ರಾಯದ ಈ ಅಂತರಿಕ್ಷ ವಿಜ್ಞಾನಿಯ ತಂದೆ–ತಾಯಿ ಕೃಷಿಕರು. ಕಾಡುಹಳ್ಳಿಯ ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಈ ಯುವಕ, ಶಿಕ್ಷಣವನ್ನೂ ಬೆಳಗಾವಿಯಲ್ಲಿ ಪೂರೈಸಿದ್ದರು. ಚಂದ್ರಯಾನ–2ರಲ್ಲೂ ಅವರು ಕೆಲಸ ಮಾಡಿದ್ದಾರೆ. 52 ವರ್ಷದ ವಿಜ್ಞಾನಿ ಶಿವಾನಂದ ಮಲ್ಲಪ್ಪ ಕಮತ ಬಡ ಕುಟುಂಬದಲ್ಲಿ ಹುಟ್ಟಿದವರು. ಹಳ್ಳಿಯಲ್ಲೇ ಆರಂಭಿಕ ಶಿಕ್ಷಣ ಪೂರೈಸಿ, ಬೆಳಗಾವಿಯ ಜಿಐಟಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಹಲವು ವರ್ಷಗಳಿಂದ ಇಸ್ರೋದ ವಿಜ್ಞಾನಿಗಳ ತಂಡದ ಸಕ್ರಿಯ ಸದಸ್ಯರಾಗಿದ್ದಾರೆ.



ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಕೆಎಸ್‌ಆರ್‌ಟಿಸಿ ನೌಕರರ ಪತ್ತಿನ ಜಿಲ್ಲಾ ಸಹಕಾರ ಸಂಘದ ನೂತನ ಅಧ್ಯಕ್ಷ ಎಚ್.ಬಿ.ರಾಜು, ಉಪಾಧ್ಯಕ್ಷ ಕೆ.ಗುರುಸ್ವಾಮಿ ಅವರನ್ನು ಅವರ ಹಿತೈಷಿಗಳು, ಸ್ನೇಹಿತರು ಆತ್ಮೀಯವಾಗಿ ಅಭಿನಂದಿಸಿದರು.

ಅಂದು ಸಂಕಟ, ಈಗ ಶಿವನ್ ಸಂತಸ



ಮೈಸೂರು, ಆ. 23– ಚಂದ್ರಯಾನ–2ರ ನೇತೃತ್ವ ವಹಿಸಿದ್ದ ಇಸ್ರೋ ಅಧ್ಯಕ್ಷ ಕೆ.ಶಿವನ್ ಇಂದು ಹರ್ಷಚಿತ್ತರಾಗಿದ್ದಾರೆ. 2019ರಲ್ಲಿ ಮಹತ್ವಾಕಾಂಕ್ಷಿ ಚಂದ್ರಯಾನ–2 ಲ್ಯಾಂಡಿಂಗ್ ವೇಳೆ ವಿಫಲವಾಗಿತ್ತು. ಆಗ ಸ್ವತಃ ಪ್ರಧಾನಿ ನರೇಂದ್ರ ಮೋದಿ ಇಸ್ರೋದಲ್ಲಿ ಉಪಸ್ಥಿತರಿದ್ದು, ಚಂದ್ರಯಾನದ ಕ್ಷಣಕ್ಷಣದ ಮಾಹಿತಿಯನ್ನು ಪಡೆದುಕೊಂಡಿದ್ದರು. ಯಶಸ್ವಿ ಉಡಾವಣೆಯಾಗಿದ್ದರೂ ಚಂದ್ರನ ಕಕ್ಷೆ ತಲುಪುವ ವೇಳೆ ವಿಫಲವಾಗಿತ್ತು. ಆಗ ಇಸ್ರೋ ಅಧ್ಯಕ್ಷರಾಗಿದ್ದ ಕೆ. ಶಿವನ್ ಅತೀವ ದುಃಖತಪ್ತರಾಗಿ ಕಣ್ಣೀರಿಟ್ಟಿದ್ದರು. ಅವರನ್ನು ಪ್ರಧಾನಿ ಮೋದಿ ತಬ್ಬಿ ಸಮಾಧಾನಪಡಿಸಿದ್ದರು.

ಇಂದು ಚಂದ್ರಯಾನ–3 ಯಶಸ್ವಿಯಾದ ಸಂದರ್ಭದಲ್ಲಿ ಶಿವನ್ ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ದೇಶ ಖಗೋಳ ಪ್ರಯೋಗದಲ್ಲಿ ಪ್ರಪಂಚದಲ್ಲಿ ಮುಂಚೂಣಿ ಸಾಧಿಸುತ್ತಿರುವುದಕ್ಕೆ ಹೆಮ್ಮೆಪಟ್ಟಿದ್ದಾರೆ.

ಭಾರತ, ಮನುಕುಲದ ಹೆಮ್ಮೆಯ ಕ್ಷಣ



ಹೊಸದಿಲ್ಲಿ: ಚಂದ್ರಯಾನ–3ರ ಲ್ಯಾಂಡಿಂಗ್ ಕುರಿತಂತೆ ವಿವಾದಾತ್ಮಕ ಟ್ವೀಟ್ ಮೂಲಕ ತೀವ್ರ ಟೀಕೆಗೆ ಗುರಿಯಾಗಿದ್ದ ನಟ ಪ್ರಕಾಶ್ ರಾಜ್, ಚಂದ್ರಯಾನ– 3ರ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಲ್ಯಾಂಡ್ ಆಗಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ. ಭಾರತ ಮತ್ತು ಮನುಕುಲಕ್ಕೆ ಇದು ಹೆಮ್ಮೆಯ ಕ್ಷಣ ಎಂದು ಪ್ರಕಾಶ್ ರಾಜ್ ಟ್ವೀಟ್ ಮಾಡಿದ್ದಾರೆ. ಬ್ರಹ್ಮಾಂಡದ ವಿಸ್ಮಯಗಳನ್ನು ಅನ್ವೇಷಿಸಲು ಮತ್ತು ಸಂಭ್ರಮಿಸಲು ಈ ಸಾಧನೆ ಮಾರ್ಗವಾಗಲಿ ಎಂದು ಆಶಿಸಿದ್ದಾರೆ.

ಭಾರತದ.. ಮನುಕುಲದ ಹೆಮ್ಮೆಯ ಕ್ಷಣಗಳಿವು.. ಧನ್ಯವಾದಗಳು ಮತ್ತು ಇದನ್ನು ಸಾಧ್ಯವಾಗಿಸಿದ ಎಲ್ಲರಿಗೂ .. ವಿಶಾಲ ವಿಶ್ವದ ಇನ್ನಷ್ಟು ವಿಸ್ಮಯಗಳನ್ನು ಅರಿಯಲು ....ಸಂಭ್ರಮಿಸಲು .. ಇದು ದಾರಿಯಾಗಲಿ" ಎಂದು ಟ್ವಿಟ್ಟರ್‌ನಲ್ಲಿ ಹೇಳಿದ್ದಾರೆ. ಆ.20ರಂದು ಟ್ವೀಟ್ ಮಾಡಿದ್ದ ಪ್ರಕಾಶ್ ರಾಜ್, "ತಾಜಾ ಸುದ್ದಿ– ಚಂದ್ರಯಾನದಿಂದ ಈಗಷ್ಟೇ ಬಂದ ಮೊದಲ ದೃಶ್ಯ" ಎಂದು 'ಕೇರಳ ಚಾಯ್ ವಾಲಾ'ನ ಕಾರ್ಟೂನ್ ಅನ್ನು ಹಂಚಿಕೊಂಡಿದ್ದರು. ಇದು ಚಂದ್ರಯಾನ ಯೋಜನೆ ಮತ್ತು ಪ್ರಧಾನಿ ಮೋದಿ ಅವರನ್ನು ಅಣಕಿಸುವ ಕೀಳು ಅಭಿರುಚಿ ಎಂಬ ಟೀಕೆ ವ್ಯಕ್ತವಾಗಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾವೇರಿ ನೀರು ಹಂಚಿಕೆಯಲ್ಲಿ ಸಂಕಷ್ಟ ಸೂತ್ರ ಅಳವಡಿಕೆಗೆ ಪ್ರಧಾನಿ ಮೋದಿ ಮೊರೆ

●ಸರ್ವ ಪಕ್ಷಗಳ ನಾಯಕರ ಸಭೆಯಲ್ಲಿ ನಿರ್ಧಾರ ●ಹಾಗೆಯೇ ರಾಜ್ಯದ ಇನ್ನಿತರೆ ಜಲ ವಿವಾದಗಳಿಗೂ ಪರಿಹಾರ ಕಲ್ಪಿಸುವಂತೆ ಪ್ರಧಾನಿ ಬಳಿ ನಿಯೋಗ ಹೋಗಿ ಕೋರಲು ತೀರ್ಮಾನ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸರ್ವಪಕ್ಷಗಳ ನಾಯಕರು, ಸಂಸದರು, ಕಾನೂನು ಮತ್ತು ನೀರಾವರಿ ತಜ್ಞರು ಹಾಗೂ ಹಿರಿಯ ಅಧಿಕಾರಿಗಳ ಸಭೆ ನಡೆಯಿತು. ಚಿತ್ರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಡಿ.ವಿ.ಸದಾನಂದಗೌಡ, ವೀರಪ್ಪ ಮೊಯ್ಲಿ, ಜಗದೀಶ್ ಶೆಟ್ಟರ್ ಇನ್ನಿತರರನ್ನು ಕಾಣಬಹುದು.

ಬೆಂಗಳೂರು,ಆ.23(ಕೆಎಂಶಿ)– ಕಾವೇರಿ ನದಿ ನೀರು ಹಂಚಿಕೆಗೆ ಸಂಕಷ್ಟ ಸೂತ್ರ ಅಳವಡಿಕೆ ಸೇರಿದಂತೆ ರಾಜ್ಯದ ಇನ್ನಿತರೆ ಜಲವಿವಾದಗಳಿಗೂ ಪರಿಹಾರ ಕಲ್ಪಿಸುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಭೇಟಿ ಮಾಡಿ ಮನವಿ ಸಲ್ಲಿಸಲು ಇಂದಿಲ್ಲಿ ಸಭೆ ಸೇರಿದ್ದ ಸರ್ವಪಕ್ಷಗಳ ನಾಯಕರು ಒಮ್ಮತದ ತೀರ್ಮಾನ ಕೈಗೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರ್ವಪಕ್ಷಗಳ ನಾಯಕರು, ಸಂಸದರು, ಕಾನೂನು ಮತ್ತು ನೀರಾವರಿ ತಜ್ಞರು ಹಾಗೂ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸಂಕಷ್ಟ ಸನ್ನಿವೇಶದಲ್ಲಿ ಕಾವೇರಿ ನದಿ ಪಾತ್ರದಿಂದ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ ಎಂಬ ಕೂಗು ಕೇಳಿಬಂದ ಹಿನ್ನೆಲೆಯಲ್ಲಿ ಸರ್ಕಾರ ಸಭೆ ನಡೆಸಿ ಎಲ್ಲರ ಅಭಿಪ್ರಾಯ ಸಂಗ್ರಹಿಸಿ ಕೆಲವು ತೀರ್ಮಾನಗಳನ್ನು ಕೈಗೊಂಡಿದೆ.

ಮೇಕೆದಾಟು, ಕಾವೇರಿ, ಮಹದಾಯಿ, ಕೃಷ್ಣಾ ಸಮಸ್ಯೆಗಳ ಕುರಿತು ಪ್ರಧಾನಿ, ಕೇಂದ್ರ ಜಲಶಕ್ತಿ, ಅರಣ್ಯ ಮತ್ತು ಪರಿಸರ ಸಚಿವರುಗಳನ್ನು ಭೇಟಿ ಮಾಡಿ ವಾಸ್ತವ ಸಂಗತಿ ತಿಳಿಸಿ ಪರಿಹಾರ ಕಲ್ಪಿಸುವಂತೆ ಕೋರುವ ನಿರ್ಧಾರ ಮಾಡಲಾಗಿದೆ.

ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಮುಖ್ಯಮಂತ್ರಿಗಳು, ಸಂಸದರು, ಶಾಸಕರು ಹಾಗೂ ಮುಖಂಡರು ಇದಕ್ಕೆ ಸಹಮತ ವ್ಯಕ್ತಪಡಿಸಿ ಕೇಂದ್ರದ ಬಳಿಗೆ ನಿಯೋಗ ತೆರಳಲು ನಿರ್ಧರಿಸಿದ್ದಾರೆ.

ರಾಜ್ಯದ ನೆಲ–ಜಲಕ್ಕೆ ಹೋರಾಟ: ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದ ನೆಲ, ಜಲ, ಗಡಿ, ಭಾಷೆ ವಿಚಾರದಲ್ಲಿ ರಾಜಕೀಯವಿಲ್ಲದೆ ಹೋರಾಟ ನಡೆಸಲು ಒಮ್ಮತದ ತೀರ್ಮಾನ ಕೈಗೊಂಡಿದ್ದೇವೆ. ರಾಜ್ಯದ ಹಿತ ಕಾಪಾಡಲು ನಾವು ಎಂದಿಗೂ ಬದ್ಧರಾಗಿರುತ್ತೇವೆ. ಕಾನೂನಿಗೆ ಗೌರವ ಕೊಡುವ ಉದ್ದೇಶದಿಂದ ನಮ್ಮ ರೈತರಿಗೆ ಅನ್ಯಾಯವಾಗದಂತೆ ತಮಿಳುನಾಡಿಗೆ ನೀರು ಹರಿಸಿರುವುದನ್ನು ಸಭೆಯ ಗಮನಕ್ಕೆ ತಂದಿದ್ದೇನೆ.

ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ತಮಿಳುನಾಡಿಗೆ ಆಗಸ್ಟ್ ಅಂತ್ಯದವರೆಗೂ ಪ್ರತಿನಿತ್ಯ 15 ಸಾವಿರ ಕ್ಯುಸೆಕ್ ನೀರು ಬಿಡಲು ಆದೇಶ ಮಾಡಿತ್ತು. ಆದರೆ, ನಾವು ಇಷ್ಟು ಪ್ರಮಾಣದ ನೀರು ಹರಿಸಲು ಸಾಧ್ಯವಿಲ್ಲ ಎಂದು ಪ್ರತಿನಿತ್ಯ 10 ಸಾವಿರ ಕ್ಯುಸೆಕ್ ನೀರು ಹರಿಸಲಾಗಿದೆ. ರೈತರ ಬೆಳೆ ಹಾಗೂ ಕುಡಿಯುವ ನೀರಿಗೆ ಧಕ್ಕೆಯಾಗದಂತೆ ನೋಡಿಕೊಂಡು ತಮಿಳುನಾಡಿಗೆ ನೀರು ಬಿಡಲಾಗಿದೆ. ರಾಜ್ಯದ ಹಿತ ಕಾಪಾಡಲು ನಾವು ಎಂದಿಗೂ ಬದ್ಧರಾಗಿರುತ್ತೇವೆ. ಐದಾರು ವರ್ಷಗಳಿಗೊಮ್ಮೆ ಮಳೆಯ ಕೊರತೆಯಿಂದಾಗಿ ತಮಿಳುನಾಡಿಗೆ ಕಾವೇರಿ ನೀರು ಬಿಡಲು ಸಂಕಷ್ಟ ಎದುರಾಗುತ್ತದೆ.

ಈ ಕುರಿತು ಸಂಕಷ್ಟ ನೀರು ಹಂಚಿಕೆ ಸೂತ್ರ ನಿರ್ದಿಷ್ಟಪಡಿಸಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ವಕೀಲರು ಸಮರ್ಥವಾಗಿ ವಾದ ಮಂಡಿಸಬೇಕು. ಇದಕ್ಕೆ ಸರ್ಕಾರ ಎಲ್ಲ ಅಗತ್ಯ ಬೆಂಬಲ ನೀಡಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ಸಂಕಷ್ಟ ಸೂತ್ರದ ಹಂಚಿಕೆ ಕುರಿತು ತೀರ್ಮಾನ ಆಗಲೇಬೇಕು. ಇಂತಹ ಸಂಕಷ್ಟದ ಸಮಯದಲ್ಲಿ 67 ಟಿಎಂಸಿ ನೀರು ಸಂಗ್ರಹಿಸುವ ಸಾಮರ್ಥ್ಯದ ಮೇಕೆದಾಟು ಸಮತೋಲನಾ ಜಲಾಶಯ ನಿರ್ಮಿಸಿದರೆ, ಅವರಿಗೆ ನೀರು ಬಿಡಲು ಅನುಕೂಲವಾಗುತ್ತದೆ. ಈ ಯೋಜನೆಗೆ ತಮಿಳುನಾಡು ವಿನಾಕಾರಣ ವಿರೋಧಿಸುತ್ತಿದೆ. ಈ ಯೋಜನೆಗೆ ಕೇಂದ್ರ ಅನುಮತಿಸಿದರೆ ಸಂಕಷ್ಟದ ಸಂದರ್ಭದಲ್ಲಿ ಉಭಯ ರಾಜ್ಯಗಳಿಗೆ ಅನುಕೂಲವಾಗಲಿದೆ ಎಂಬುದನ್ನು ಸಭೆಯಲ್ಲೂ ತೀರ್ಮಾನಿಸಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಕಾವೇರಿ ವಿವಾದ ಹಳೆಯದು. ಸರ್ವೋಚ್ಚ ನ್ಯಾಯಾಲಯ ನಮಗೆ ತೀರ್ಪು ಕೊಟ್ಟ ನಂತರ 2018ರಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ರಚನೆಯಾಗಿದೆ. ಕಾವೇರಿ ನೀರು ನಿಯಂತ್ರಣಾ ಸಮಿತಿ ಸ್ಥಾಪನೆಯಾಗಿದ್ದು, ಅನೇಕ ಸಭೆಗಳನ್ನು ಮಾಡಿದ್ದಾರೆ. ಕಾವೇರಿ ಪ್ರಾಧಿಕಾರ 22 ಸಭೆ ಹಾಗೂ ನಿಯಂತ್ರಣಾ ಸಮಿತಿ 84 ಸಭೆ ನಡೆಸಿದೆ. ಈ ಸಮಿತಿಗಳಾದ ಮೇಲೆ, ರಾಜ್ಯದಲ್ಲಿ ಸಂಕಷ್ಟದ ದಿನಗಳು ಎದುರಾಗಿವೆ. ಆಗ ನಾವು ನಿಯಂತ್ರಣಾ ಸಮಿತಿ, ಪ್ರಾಧಿಕಾರದಲ್ಲಿ ಚರ್ಚಿಸಿ, ಅದರ ತೀರ್ಮಾನದಂತೆ ನಡೆದುಕೊಂಡ ಅನೇಕ ನಿದರ್ಶನಗಳಿವೆ. ಕಾವೇರಿ ನಿಯಂತ್ರಣಾ ಸಮಿತಿ ಮತ್ತು ಪ್ರಾಧಿಕಾರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಅಧಿಕಾರಿಗಳು ಸಂಕಷ್ಟದ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ ಎಂಬುದನ್ನು ಸಭೆಗೆ ತಿಳಿಸಿದ್ದೇನೆ. ಈ ವರ್ಷ ಮಳೆ ಕಡಿಮೆ ಆಯಿತು. ಜೂನ್ ಹಾಗೂ ಆಗಸ್ಟ್‌ನಲ್ಲಿ ಮಳೆ ಕೊರತೆಯಾಗಿದೆ. ಇಲ್ಲಿವರೆಗೆ ನೀರು ಬಿಡಬೇಕಾಗಿದ್ದಿದ್ದು 86.38 ಟಿಎಂಸಿ. ಆದರೆ 20ನೇ ತಾರೀಖಿನವರೆಗೆ ನೀರು ಬಿಟ್ಟಿರುವುದು 24 ಟಿಎಂಸಿ.

ವಾಸ್ತವವನ್ನು ಪ್ರಾಧಿಕಾರದ ಮುಂದೆ ಬಿಡಿಸಿಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಮಳೆ ಕೊರತೆಯಿಂದಾಗಿ ಬೆಳೆಗಳಿಗೆ ನೀರು ಬಿಟ್ಟಿಲ್ಲ. ಕುಡಿಯುವ ನೀರಿಗೆ ನೀರು ಬೇಕಾಗುತ್ತದೆ ಎಂದು ವಿವರಿಸಲಾಗಿದೆ.

ಆ.25ರಂದು ಈ ಪ್ರಕರಣ ಸುಪ್ರೀಂ ಕೋರ್ಟಿನ ವಿಶೇಷ ಪೀಠದ ಮುಂದೆ ವಿಚಾರಣೆಗೆ ಬರಲಿದ್ದು, ಈ ವಿಷಯದಲ್ಲಿ ವಕೀಲರು ಸಮರ್ಥವಾಗಿ ವಾದ ಮಾಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿ, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಮೊದಲಾದವರು ರಾಜ್ಯದ ಕಾನೂನು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ರೈತರ ಹಿತ ರಕ್ಷಣೆಗೆ ಸರ್ಕಾರ ದೊಂದಿಗೆ ಇರುವುದಾಗಿ ಬೆಂಬಲ ವ್ಯಕ್ತಪಡಿಸಿದರು. ಹಾಗೂ ಸಂಕಷ್ಟ ಸೂತ್ರದಡಿ ನೀರು ಹಂಚಿಕೆ ಸೂತ್ರವನ್ನು ಇನ್ನಷ್ಟು ನಿರ್ದಿಷ್ಟಪಡಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಮಹದಾಯಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕಳಸಾ ಮತ್ತು ಭಂಡೂರಿ ಯೋಜನೆಗೆ ಅರಣ್ಯ ಮತ್ತು ಪರಿಸರ ಇಲಾಖೆಗಳ ತೀರುವಳಿ ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ತೀರುವಳಿ ಪಡೆಯಲೂ ಅರ್ಜಿ ಸಲ್ಲಿಸಲಾಗಿದೆ. ಆದರೆ ಗೋವಾ ಸರ್ಕಾರ ಈ ಕುರಿತು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಈ ಕುರಿತು ಹೆಚ್ಚಿನ ಗಮನ ಹರಿಸುವಂತೆಯೂ ಸಲಹೆ ನೀಡಿದರು. ವಕೀಲರ ತಂಡ ಹಿಂದಿನ ಅನುಭವಗಳನ್ನು ಬಳಸಿಕೊಂಡು, ರಾಜ್ಯದ ಹಿತದೃಷ್ಟಿಯಿಂದ ಸಮರ್ಥವಾಗಿ ವಾದ ಮಂಡಿಸುವ ಬಗ್ಗೆಯೂ ಸಲಹೆ ನೀಡಿದರು.

ತಮಿಳ್ನಾಡು ಸುಪ್ರೀಂಕೋರ್ಟ್ ಮೊರೆ ಹೋದಾಗ ರಾಜ್ಯ ನೀರು ಬಿಡದೆ ತಕರಾರು ಅರ್ಜಿ ಸಲ್ಲಿಸಬೇಕಿತ್ತು

ರಾಜ್ಯ ಸರ್ಕಾರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಾನೂನು ಪಾಠ

ಬೆಂಗಳೂರು, ಆ.23(ಕೆಎಂಶಿ)–ನೆರೆ ರಾಜ್ಯವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಕ್ಷಣ ರಾಜ್ಯ ಸರ್ಕಾರ ನೀರು ಹರಿಸುವ ನಿರ್ಧಾರ ಕೈಗೊಳ್ಳುವ ಬದಲು ತಮಿಳುನಾಡು ಅರ್ಜಿಗೆ ಪ್ರತಿಯಾಗಿ ಕೂಡಲೇ ತಕರಾರು ಅರ್ಜಿ ಸಲ್ಲಿಸಬೇಕಿತ್ತು. ಈ ವಿಷಯದಲ್ಲಿ ಸರ್ಕಾರದಿಂದ ಲೋಪವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನೇರ ಮಾತುಗಳಲ್ಲಿ ಹೇಳಿದರು.

ಕಾವೇರಿ ವಿಷಯಕ್ಕೆ ಸಂಬಂಧಿಸಿ ವಿಧಾನಸಭೆ ಸಮ್ಮೇಳನ ಸಭಾಂಗಣದಲ್ಲಿ ಕರೆಯಲಾಗಿದ್ದ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದ ಅವರು, ನಮ್ಮ ನೆಲ, ಜಲ, ಭಾಷೆ ರಕ್ಷಣೆ ಹಾಗೂ ನಮ್ಮ ನೀರಿನ ಹಕ್ಕು, ರೈತರ ಪ್ರಶ್ನೆ ಬಂದಾಗ ಪ್ರತಿಪಕ್ಷಗಳು ಮಾತನಾಡದೆ ಮೌನವಾಗಿರಲು ಸಾಧ್ಯವಿಲ್ಲ ಎಂದರು.

ರಾಜ್ಯದ ನೆಲ, ಜಲ, ಭಾಷೆ ವಿಚಾರದಲ್ಲಿ ಪ್ರತಿಪಕ್ಷಗಳು ಪ್ರಶ್ನೆ ಮಾಡಿದರೆ, ಅದನ್ನು ರಾಜಕೀಯ ಎಂದು ಭಾವಿಸುವುದು ತಪ್ಪು. ನೀರನ್ನು ಹರಿಸುವ ಮೊದಲೇ ಸರ್ವಪಕ್ಷ ಸಭೆ ಕರೆದಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಈಗ ನೀವು ತಮಿಳುನಾಡಿಗೆ ನೀರು ಹರಿಸುತ್ತಿದ್ದೀರಿ. ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಅದಕ್ಕೆ ಈಗ ಏನು ಸಮಜಾಯಿಷಿ ನೀಡುತ್ತೀರಿ ಎಂದು ಸಭೆಯಲ್ಲಿ ಅವರು ಬೇಸರ ವ್ಯಕ್ತಪಡಿಸಿದರು.

ಪ್ರತಿಪಕ್ಷಗಳನ್ನು ರಾಜಕೀಯ ಮಾಡಬೇಡಿ ಎಂದು ಹೇಳುತ್ತೀರಿ, ಆದರೆ ಇಂಥ ಸೂಕ್ಷ್ಮ ವಿಷಯಗಳಲ್ಲಿ ನಿಮ್ಮ ಜವಾಬ್ದಾರಿ ಏನಿದೆ? ಎಂದು ಮತ್ತೆ ಮತ್ತೆ ಖಾರವಾಗಿ ಪ್ರಶ್ನಿಸಿದರು. ನೆಲ ಜಲ ಭಾಷೆ ವಿಷಯದಲ್ಲಿ ರಾಜಕೀಯದ ಅಗತ್ಯ ಇಲ್ಲ. ನಾವೆಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು. ಆದರೆ, ಸರ್ಕಾರವು ಹೊಣೆಗಾರಿಕೆಯಿಂದ ವರ್ತಿಸಬೇಕು ಎಂದರು.

ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಮ್ಮ ಅಧಿಕಾರಿಗಳು ಉತ್ತಮ ರೀತಿಯಲ್ಲಿ ರಾಜ್ಯದ ಪರ ಅಭಿಪ್ರಾಯ ತಿಳಿಸಿದ್ದಾರೆ. ಜಲ ಸಂಕಷ್ಟದ ಬಗ್ಗೆ ವಿವರಿಸಿದ್ದಾರೆ. ಆದರೆ, ಅಲ್ಲಿ ತಮಿಳುನಾಡು ಅಧಿಕಾರಿಗಳು ಪಟ್ಟು ಹಿಡಿದು ಸಭೆಯಿಂದ ಹೊರ ನಡೆದಿದ್ದಾರೆ. ಆದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ತಮಿಳುನಾಡು ಅರ್ಜಿ ಹಾಕಿದಾಗ ನಾವು ಅಷ್ಟೇ ವೇಗದಿಂದ ಆಕ್ಷೇಪಣಾ ಅರ್ಜಿ ಸಲ್ಲಿಸಬೇಕಿತ್ತು ಎಂದು ಪ್ರತಿಪಾದಿಸಿದರು.

> ನೀರು ಬೇಕಾದರೆ ರೈತರೇ ನ್ಯಾಯಾಲಯಕ್ಕೆ ಹೋಗಲಿ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಅವರು ಹೇಳಿಕೆ ನೀಡಿದ್ದಾರೆ. ಇಂಥ ಹೇಳಿಕೆ ಸರಿ ಅಲ್ಲ. ರೈತರೇ ನ್ಯಾಯಾಲಯಕ್ಕೆ ಹೋಗುವುದಾದರೆ ಸರ್ಕಾರ ಏತಕ್ಕೆ ಬೇಕು? ಇಷ್ಟೆಲ್ಲಾ ವ್ಯವಸ್ಥೆ ಅಗತ್ಯ ಏನಿದೆ? ಈ ಬಗ್ಗೆ ತಪ್ಪು ತಿಳಿಯುವ ಅಗತ್ಯ ಇಲ್ಲ.
> **–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ**

ದೇವೇಗೌಡರು ಸೇರಿದಂತೆ ಇನ್ನೂ ಹಲವರು ಮುಖ್ಯಮಂತ್ರಿಗಳಾಗಿದ್ದಾಗ ಇಂಥ ಪರಿಸ್ಥಿತಿ ಎದುರಾದಾಗ ಅದನ್ನು ಹೇಗೆ ಎದುರಿಸಲಾಯಿತು ಎಂಬುದನ್ನು ಕಾನೂನು ತಜ್ಞರ ತಂಡದ ಮುಖ್ಯಸ್ಥ ಮೋಹನ್ ಕಾತರಕಿ ಅವರು ಈ ಸಭೆಯಲ್ಲಿಯೇ ಹೇಳಿದ್ದಾರೆ. ಅದೆಲ್ಲಾ ವಿಷಯಗಳನ್ನು ಈ ಸರ್ಕಾರ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಈ ಸಭೆಯಲ್ಲಿ ಏನೇ ವಾದ ಮಾಡಿದರೂ ಕಾವೇರಿ ಪ್ರಾಧಿಕಾರ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ಪರಿಣಾಮಕಾರಿ ವಾದ ಮಂಡಿಸಬೇಕು. ಅಲ್ಲದೆ, ಈ ದಿನ ಪತ್ರಿಕೆಯೊಂದರಲ್ಲಿ ಸಂಕಷ್ಟ ಸೂತ್ರದ ಬಗ್ಗೆ ನಮ್ಮ ಅಡ್ವೋಕೇಟ್ ಜನರಲ್ ಅವರು ಒಂದು ಹೇಳಿಕೆ ನೀಡಿದ್ದಾರೆ.

ಆ ಹೇಳಿಕೆ ಸರಿ ಇದೆಯಾ? ಆದರೆ, ಮೋಹನ್ ಕಾತರಕಿ ಅವರು ಇದಕ್ಕೆ ತದ್ವಿರುದ್ಧವಾದ ಮಾಹಿತಿಯನ್ನು ಈ ಸಭೆಗೆ ನೀಡಿದ್ದಾರೆ. ಹಾಗಾದರೆ, ಯಾರ ಮಾಹಿತಿ ಸರಿ ಇದೆ? ನನಗೆ ತಿಳಿದಿರುವ ಮಾಹಿತಿಯಂತೆ ಸಂಕಷ್ಟ ಸಮಯದಲ್ಲಿ ನೀರನ್ನು ಹಂಚಿಕೊಳ್ಳುವ ಬಗ್ಗೆ ಯಾವುದೇ ಸೂತ್ರ, ಪರಿಹಾರ ಇಲ್ಲ ಎಂದು ಕುಮಾರಸ್ವಾಮಿ ಅವರು ಹೇಳಿದರು.

ಪಾರ್ಟ್ ಟೈಂ ಜಾಬ್, ಕಮಿಷನ್ ಆಮಿಷ: ಇಬ್ಬರಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ಆ.23–ಪಾರ್ಟ್ ಟೈಂ ಜಾಬ್ ಹೆಸರಿನಲ್ಲಿ ವ್ಯಕ್ತಿಯೊಬ್ಬರಿಂದ 4.81 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮೈಸೂರಿನ ವಿಜಯನಗರ 2ನೇ ಹಂತದ ಹಂಪಿ ಸರ್ಕಲ್ ಬಳಿಯ ನಿವಾಸಿ ಓಂನಾಥ್ ವಿಜಯೇಂದ್ರ ಪೂಜಾರಿ(33) ಎಂಬುವರಿಗೆ ಪಾರ್ಟ್ ಟೈಂ ಜಾಬ್ ಬಗ್ಗೆ ಟೆಲಿಗ್ರಾಂ ಆ್ಯಪ್‌ನಲ್ಲಿ ಸಂದೇಶ ಬಂದಿದ್ದು, ಹಣ ಪಾವತಿಸಿ, ಟಾಸ್ಕ್ ಕಂಪ್ಲೀಟ್ ಮಾಡಿದರೆ ಕಮಿಷನ್ ನೀಡುವುದಾಗಿ ನಂಬಿಸಿ 4.81 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅರವಿಂದ ನಗರದ ಅಕೌಂಟೆಂಟ್ ವೈ.ಎನ್.ಸಿದ್ದೇಶ್ (29) ಎಂಬುವರಿಗೆ ಯೂ–ಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಮಾಡಿದರೆ ಕಮಿಷನ್ ನೀಡುವುದಾಗಿ ಟೆಲಿಗ್ರಾಂ ಆ್ಯಪ್‌ನಲ್ಲಿ ಸಂದೇಶ ಬಂದಿದೆ. ಮೊದಲಿಗೆ ಅವರ ಖಾತೆಗೆ 100 ರೂ. ಕಮಿಷನ್ ಹಣ ವರ್ಗಾವಣೆ ಮಾಡಿದ್ದು, ನಂತರ ಹಣ ಹೂಡಿಕೆ ಮಾಡಿದರೆ ಶೇ.40ರಿಂದ 50ರಷ್ಟು ಕಮಿಷನ್ ಕೊಡುವುದಾಗಿ ನಂಬಿಸಿ 18.62 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಎರಡೂ ಪ್ರಕರಣಗಳು ಮೈಸೂರು ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಹಾಲಿನ ವಾಹನ ಡಿಕ್ಕಿ; ಸ್ಕೂಟರ್ ಸವಾರ ಸಾವು



ಬಿಳಿಕೆರೆ, ಆ.23–ಸ್ಕೂಟರ್‌ಗೆ ಐಚರ್ ಹಾಲಿನ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ದುರಂತ ಬಿಳಿಕೆರೆ–ಕೆ.ಆರ್.ನಗರ ಜಂಕ್ಷನ್ ಬಳಿ ಮೈಸೂರು–ಹುಣಸೂರು ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ಹುಣಸೂರು ತಾಲೂಕು ಸೋಮನಹಳ್ಳಿ ನಿವಾಸಿ ಗಿರೀಶ (55) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜೆ.ಕೆ.ಟೈರ್ಸ್‌ನಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದರು. ಆ.21ರಂದು ಬೆಳಗ್ಗೆ ಹೋಂಡಾ ಆಕ್ಟೀವಾ (ಕೆಎ 09 ಹೆಚ್‌ಹೆಚ್ 1006)ದಲ್ಲಿ ಕೆಲಸಕ್ಕೆಂದು ಹೋಗುತ್ತಿದ್ದಾಗ ಇವರ ಸ್ಕೂಟರ್‌ಗೆ ಐಚರ್ ಹಾಲಿನ ವಾಹನ (ಕೆಎ 40–1334) ಡಿಕ್ಕಿ ಹೊಡೆದ ಪರಿಣಾಮ ಗಿರೀಶ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ನಂತರ ಹಾಲಿನ ವಾಹನದ ಚಾಲಕ ವಾಹನವನ್ನು ನಿಲ್ಲಿಸದೇ ಪರಾರಿಯಾಗಿದ್ದಾನೆ. ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲೆಕ್ಟ್ರಿಕಲ್ ಕಚೇರಿ ಬೀಗ ಮುರಿದು ನಗದು, ಚಿನ್ನಾಭರಣ ಕಳವು

ಮೈಸೂರು,ಆ.23–ಮೈಸೂರಿನ ಜಯನಗರ ಹತ್ತನೇ ಮುಖ್ಯ ರಸ್ತೆಯ 8ನೇ ಕ್ರಾಸ್‌ನಲ್ಲಿರುವ ಎಲೆಕ್ಟ್ರಿಕಲ್ ಕಚೇರಿಯ ಬೀಗ ಮುರಿದು, ನಗದು ಹಾಗೂ ಚಿನ್ನಾಭರಣ ಕಳವು ಮಾಡಲಾಗಿದೆ.

ಇಲ್ಲಿನ ಪಿ.ಎಸ್.ಎಲೆಕ್ಟ್ರಿಕಲ್ ಕಚೇರಿಯ ಬೀಗವನ್ನು ಆ.21ರಂದು ರಾತ್ರಿ ಮುರಿದು ಒಳ ನುಗ್ಗಿದ ಕಳ್ಳರು, 50 ಸಾವಿರ ರೂ. ನಗದು, ಎಲೆಕ್ಟ್ರಿಕಲ್ ವಸ್ತುಗಳನ್ನು ಕಳವು ಮಾಡಿದ್ದಲ್ಲದೇ, ಇದೇ ಕಚೇರಿಯ ಔಟ್ ಹೌಸ್‌ನಲ್ಲಿ ವಾಸವಿದ್ದ ಹುಚ್ಚಮ್ಮ ಎಂಬುವರ ಮನೆಯ ಬೀಗವನ್ನು ಮುರಿದು 12 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿದ್ದಾರೆ.

ಈ ಸಂಬಂಧ ಅಶೋಕಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ವರ್ತಕನ ಅಡ್ಡಗಟ್ಟಿ ಸುಲಿಗೆ

ಮೈಸೂರು, ಆ.23–ವರ್ತಕರೊಬ್ಬರನ್ನು ಅಡ್ಡಗಟ್ಟಿದ ಖದೀಮರು 5.50 ಲಕ್ಷ ರೂ. ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಲಕ್ಷ್ಮೀ ವಿಲಾಸ ರಸ್ತೆಯಲ್ಲಿ ನಡೆದಿದೆ. ಮೈಸೂರಿನ ಚಾಮರಾಜ ಮೊಹಲ್ಲಾ ಸೋನಾರ್ ರಸ್ತೆ ನಿವಾಸಿ ಸಂತೇಪೇಟೆ ವರ್ತಕ ಪಾರಸ್‌ಮಾಲ್ (34) ಹಣ ಕಳೆದುಕೊಂಡವರಾಗಿದ್ದು, ಆ.19ರಂದು ರಾತ್ರಿ 9.55ರಲ್ಲಿ ಸಂತೇಪೇಟೆಯಿಂದ 5.50 ಲಕ್ಷ ರೂ. ಗಳನ್ನು ಸೈಡ್ ಬ್ಯಾಗ್‌ನಲ್ಲಿಟ್ಟುಕೊಂಡು ಟಿವಿಎಸ್ ಎಕ್ಸೆಲ್ ಮೊಪೆಡ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ಲಕ್ಷ್ಮೀವಿಲಾಸ ರಸ್ತೆಯಲ್ಲಿ 2 ಸ್ಕೂಟರ್‌ಗಳಲ್ಲಿ ಬಂದ ನಾಲ್ವರು ಖದೀಮರು ಇವರ ಮೊಪೆಡ್ ಅನ್ನು ಅಡ್ಡಗಟ್ಟಿ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ನಗದು, ಚಿನ್ನಾಭರಣ ಕಳವು

ಹೆಚ್.ಡಿ.ಕೋಟೆ, ಆ.23–ಹೆಚ್.ಡಿ. ಕೋಟೆ ತಾಲೂಕು ಹಳ್ಳದ ಮನುಗನಹಳ್ಳಿಯಲ್ಲಿ ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಲಾಗಿದೆ. ರೈತ ಸೋಮರಾಜೇಗೌಡ (65) ನಗದು, ಚಿನ್ನಾಭರಣ ಕಳೆದು ಕೊಂಡವರಾಗಿದ್ದು, ಆ.21ರಂದು ಸಂಜೆ 4 ಗಂಟೆ ಸುಮಾರಲ್ಲಿ ಅವರ ತಾಯಿ ಚೆಲುವಮ್ಮ, ಮನೆ ಬೀಗ ಹಾಕಿಕೊಂಡು ಬಿಳಿಕೆರೆಯಲ್ಲಿರುವ ಮತ್ತೋರ್ವ ಪುತ್ರ ಕಾಳೇಗೌಡರ ಮನೆಗೆ ಹೋಗಿದ್ದು, ಮರುದಿನ ಬೆಳಗ್ಗೆ ವಾಪಸ್ ಬಂದಾಗ ಮನೆ ಬೀಗ ಮುರಿದು 15 ಸಾವಿರ ನಗದು, 22 ಗ್ರಾಂ ತೂಕದ ಚಿನ್ನದ ಕಾಸಿನ ಸರ ಕಳವು ಮಾಡಿರುವುದು ಬೆಳಕಿಗೆ ಬಂದಿದೆ. ಹೆಚ್.ಡಿ. ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆ.27, ಕಾರ್ಡಿಯಾಲಜಿಕಲ್ ಸೊಸೈಟಿ ಮೈಸೂರು ವಿಭಾಗದ ಬೆಳ್ಳಿ ಹಬ್ಬ



ಮೈಸೂರು,ಆ.23(ಜಿಎ)– ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ವಿಭಾಗದ ಬೆಳ್ಳಿಹಬ್ಬದ ಸಮಾರಂಭ ಆ.27ರಂದು ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಡಾ.ಜೆ.ವೀನು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥ ಡಾ.ಟಿ.ಆರ್.ರಘು, ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ರಾಜ್ಯ ಶಾಖೆ ಅಧ್ಯಕ್ಷ ಡಾ.ಬಿ.ಕೆ. ಮಹಾಲ, ಕಾರ್ಯಕಾರಿ ಸಮಿತಿ ಸದಸ್ಯ ಡಾ.ಟಿ.ಹೆಚ್.ನಟೇಶ್, ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆ ಹೃದ್ರೋಗ ತಜ್ಞ ಡಾ.ವಿವೇಕ್ ಜವಳಿ ಆಗಮಿಸಲಿದ್ದು, ಕಾರ್ಯಕ್ರಮದಲ್ಲಿ ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ವಿಭಾಗದ 12 ಮಂದಿ ಸಂಸ್ಥಾಪಕ ಸದಸ್ಯರು ಮತ್ತು 20ಕ್ಕೂ ಅಧಿಕ ಮಾಜಿ ಅಧ್ಯಕ್ಷರನ್ನು ಅಭಿನಂದಿಸಲಾಗುತ್ತದೆ. ಅಂದು ಬೆಳಗ್ಗೆ 9.30ರಿಂದ 1.30ರವರೆಗೂ ವಿವಿಧ ವೈದ್ಯಕೀಯ ಆವಿಷ್ಕಾರಗಳ ಬಗ್ಗೆ ತಜ್ಞ ವೈದ್ಯರು ಉಪನ್ಯಾಸ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಡಾ.ಎಸ್.ಹೇಮಾ, ಉಪಾಧ್ಯಕ್ಷೆ ಡಾ.ಡಿ. ಶಶಿರೇಖಾ ಉಪಸ್ಥಿತರಿದ್ದರು.

ಆ.28ರಂದು ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಆ.23– ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆಯಲ್ಲಿ ಆಗಸ್ಟ್ 28ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಆ.26, ಮೈಸೂರಲ್ಲಿ ಶ್ರೀಕೃಷ್ಣ ಸಂಧಾನ ಯಕ್ಷಗಾನ



ಮೈಸೂರು, ಆ.23(ಜಿಎ)– ನಗರದ ಭಕ್ತಿ ಗೌರವ ಗೀತಾ ಕೇಂದ್ರದ ವತಿಯಿಂದ ಆ.26ರಂದು ಶ್ರೀಕೃಷ್ಣ ಸಂಧಾನ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಕಾರ್ಯಕರ್ತ ಬಲರಾಂ ದಾಸ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ರಿಂದ ರಾತ್ರಿ 8.30ರವರೆಗೆ ನಗರದ ಕಲಾಮಂದಿರದಲ್ಲಿ ಕುಮಟಾದ ಯಕ್ಷಗಾನ ಸಂಶೋಧನಾ ಕೇಂದ್ರದ ವತಿಯಿಂದ ಶ್ರೀಕೃಷ್ಣ ಸಂಧಾನ ಯಕ್ಷಗಾನ ಪ್ರದರ್ಶನ ಆಯೋಜಿಸಲಾಗಿದೆ ಎಂದರು.

ಜಿ.ಎಲ್.ಹೆಗ್ಗಡೆ ಅವರ ನೇತೃತ್ವದಲ್ಲಿ ಯಕ್ಷಗಾನ ಪ್ರದರ್ಶನವಿದ್ದು, ಹಿಮ್ಮೇಳ ಕಲಾವಿದರಾಗಿ ಭಾಗವತರಾದ ಕೇಶವ ಹೆಗಡೆ, ಮದ್ದಳೆ ಶಂಕರ ಭಾಗವತ ಮತ್ತು ಚಂಡೆಯಲ್ಲಿ ಗಜಾನನ ಹೆಗಡೆ ಇರಲಿದ್ದಾರೆ. ಮುಮ್ಮೇಳದಲ್ಲಿ ಶ್ರೀ ಕೃಷ್ಣನ ಪಾತ್ರದಲ್ಲಿ ವಿನಾಯಕ ಹೆಗಡೆ, ಕೌರವ ಡಾ.ಜಿ.ಎಲ್.ಹೆಗಡೆ, ವಿದುರ ದಿವಾಕರ ಹೆಗಡೆ ಮತ್ತು ಕರ್ಣನಾಗಿ ವೆಂಕಟೇಶ್ ಕಾಣಿಸಿಕೊಳ್ಳಲಿದ್ದಾರೆ ಎಂದರು. ಭಕ್ತಿ ಗೌರವ ಗೀತಾ ಕೇಂದ್ರವು ಸಾಂಸ್ಕೃತಿಕ ಸಂಸ್ಥೆಯಾಗಿದ್ದು, ಮೈಸೂರಲ್ಲಿ ಕಳೆದ 3 ತಿಂಗಳಿನಿಂದ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇದರಿಂದ ನಮ್ಮ ಭಾರತೀಯ ಸಮೃದ್ಧ ಆಧ್ಯಾತ್ಮಕ ತತ್ವಗಳನ್ನು ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು ಮುಖ್ಯ ಗುರಿಯಾಗಿದೆ ಎಂದರು. ಗೋಷ್ಠಿಯಲ್ಲಿ ಗೌರಶೆಟ್ಟಿದಾಸ್, ಮದನ್ ತೋಟ, ವಿಶ್ವಾಸ್ ಪ್ರಭು ಉಪಸ್ಥಿತರಿದ್ದರು.

ಸೆ.1ರಿಂದ ರಂಗ ಶಿಕ್ಷಣ ತರಬೇತಿ ಕಾರ್ಯಾಗಾರ

ಮೈಸೂರು,ಆ.23–ರಂಗಾಯಣವು ಮೈಸೂರಿನ ಹವ್ಯಾಸಿ ಕಲಾವಿದರಿಗಾಗಿ ಸುಬ್ಬಯ್ಯ ನಾಯ್ಡು ಹಾಗೂ ಪದ್ಮಶ್ರೀ ನಾಗರತ್ನಮ್ಮ ಅವರ ಹೆಸರಿನಲ್ಲಿ ಸೆ.1ರಿಂದ ಅಲ್ಪಾವಧಿ ಅಭಿನಯ ತರಬೇತಿ ಶಿಬಿರ ಹಮ್ಮಿಕೊಂಡಿದೆ. 18ರಿಂದ 40 ವರ್ಷ ವಯೋಮಿತಿಯ ಆಸಕ್ತರಿಗೆ 45 ದಿನಗಳ ರಂಗ ಶಿಕ್ಷಣ ತರಬೇತಿ ನೀಡಲಾಗುವುದು. ತರಗತಿಗಳು ಪ್ರತಿದಿನ ಸಂಜೆ 5ರಿಂದ 8ರವರೆಗೆ ನಡೆಯಲಿದೆ. ಆಸಕ್ತರು ಆಧಾರ್ ಕಾರ್ಡ್, ದಾಖಲೆ ಮತ್ತು ಜಾತಿ ಪ್ರಮಾಣ ಪತ್ರದೊಂದಿಗೆ ಆ.29ರಂದು ಬೆಳಗ್ಗೆ 10 ಗಂಟೆಗೆ ರಂಗಾಯಣದಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ದೂ. 0821–2512639, ಮೊ. 9341493458 ಸಂಪರ್ಕಿಸಬಹುದು.

ಜೆಎಸ್‌ಎಸ್ ರೇಡಿಯೋದಲ್ಲಿ ಫೋನ್–ಇನ್

ಮೈಸೂರು,ಆ.23–ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಅವರೊಂದಿಗೆ 'ಕಾನೂನು ಮತ್ತು ಸುವ್ಯವಸ್ಥೆ' ಪಾಲನೆ ಕುರಿತಂತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಜೆಎಸ್‌ಎಸ್ ರೇಡಿಯೋ ವತಿಯಿಂದ ಆ.25 ಶುಕ್ರವಾರ ಬೆಳಗ್ಗೆ 11.30 ರಿಂದ 12.30ರವರೆಗೆ ಆಯೋಜಿಸ ಲಾಗಿದೆ. ಸಾರ್ವಜನಿಕರು ದೂರವಾಣಿ ಸಂಖ್ಯೆ: 829672591 ಮೂಲಕ ಪ್ರಶ್ನೆಗಳನ್ನು ಕೇಳಬಹುದು.

ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ

ಮೈಸೂರು,ಆ.23–ಮೈಸೂರಿನ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಆ.27ರಂದು ಬೆಳಗ್ಗೆ 9 ಗಂಟೆಗೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಂಡಿದೆ. ಸ್ಪರ್ಧೆಯ ವಿಷಯಗಳು ಕಾಲಾಪಾನಿ ಶಿಕ್ಷೆ, ಸ್ವಾತಂತ್ರ್ಯ ಹೋರಾಟದಲ್ಲಿ ಸಾವರ್ಕರ್ ಹಾಗೂ ಪತಿತ ಪಾವನ ಮಂದಿರ. ವಿಜೇತರಿಗೆ ಪ್ರಥಮ ಬಹುಮಾನ ರೂ. 10,000, ದ್ವಿತೀಯ ಬಹುಮಾನ ರೂ. 5000 ಹಾಗೂ ತೃತೀಯ ಬಹುಮಾನ ರೂ. 3000. ಮಾಹಿತಿಗೆ ಸಂಪರ್ಕ 9035410557, 8971201521, 8861228147

ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರು ನಿಲ್ಲಿಸಲು ಆಗ್ರಹಿಸಿ ಪ್ರತಿಭಟನೆ

ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರಿಂಗ್ ಕಚೇರಿಗೆ ಮುತ್ತಿಗೆ ಯತ್ನ



ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿರುವ ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಆ.23(ಪಿಎಂ)– ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಮೂಲಕ ರಾಜ್ಯ ಸರ್ಕಾರ ನಾಡಿನ ರೈತರಿಗೆ ದ್ರೋಹ ವೆಸಗಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಆಮ್ ಆದ್ಮಿ ಪಾರ್ಟಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತಲ್ಲದೆ, ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿರುವ ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಲಾಯಿತು.

ಗನ್‌ಹೌಸ್ ವೃತ್ತದಲ್ಲಿರುವ ಕುವೆಂಪು ಉದ್ಯಾನವನದಲ್ಲಿ ಸಭೆ ನಡೆಸಿದ ಪ್ರತಿಭಟನಾಕಾರರು, ಬಳಿಕ ಖಾಲಿ ಕೊಡ ಹಿಡಿದು ಪ್ರತಿಭಟನಾ ಮೆರವಣಿಗೆ ಮೂಲಕ ಕಾಡಾ ಕಚೇರಿ ಆವರಣ ತಲುಪಿದರು.

ಬಳಿಕ ಇಲ್ಲಿರುವ ಕಾವೇರಿ ನೀರಾವರಿ ನಿಗಮದ (ದಕ್ಷಿಣ ವಲಯ) ಮುಖ್ಯ ಇಂಜಿನಿಯರ್ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಕೂಡಲೇ ಎಚ್ಚೆತ್ತ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಾಕಾರರ ಮುತ್ತಿಗೆಯನ್ನು ವಿಫಲಗೊಳಿಸಿದರು. ಇದೇ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿಯೂ ನಡೆಯಿತು.

ಸ್ಥಳಕ್ಕೆ ಧಾವಿಸಿದ ನಿಗಮದ ಉಪ ಮುಖ್ಯ ಅಭಿಯಂತರ ರಂಗನಾಥ್, ಈಗಾಗಲೇ ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳಿಂದ ನೀರು ಬಿಡುವುದನ್ನು ಕಡಿಮೆ ಮಾಡಲಾಗಿದೆ. ನಿಮ್ಮ ಹೋರಾಟದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಪ್ರತಿಭಟನೆ ಕೈಬಿಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಪ್ರತಿಯಾಗಿ ಮಾತನಾಡಿದ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ತಮಿಳುನಾಡಿಗೆ ಕಬಿನಿ ಮತ್ತು ಕೆಆರ್‌ಎಸ್‌ನಿಂದ ನೀರು ಹರಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಭತ್ತ ಬೆಳೆಯಲು ನಮ್ಮ ಅಚ್ಚುಕಟ್ಟು ಪ್ರದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ನೀರು ಕೊಡಬೇಕು. ಇಲ್ಲವಾದರೆ ಜಲಾಶಯಗಳನ್ನೇ ರೈತರು ವಶಕ್ಕೆ ಪಡೆಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಇದಕ್ಕೂ ಮುನ್ನ ಕುವೆಂಪು ಉದ್ಯಾನವನದಲ್ಲಿ ನಡೆದ ಸಭೆಯಲ್ಲಿ ಹೋರಾಟದ ಬಗ್ಗೆ ಚರ್ಚೆ ನಡೆಸಲಾಯಿತು. ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕುರುಬೂರು ಶಾಂತಕುಮಾರ್, ಜಲಾಶಯಗಳಲ್ಲಿ ಇದ್ದ ನೀರನ್ನು ಖಾಲಿ ಮಾಡಿ, ಇದೀಗ ಸರ್ಕಾರ ಸರ್ವ ಪಕ್ಷದ ಸಭೆಯ ನಾಟಕವಾಡುತ್ತಿದೆ. ಸರ್ಕಾರಕ್ಕೆ ನಿಜವಾಗಲೂ ಕಾಳಜಿ ಇದ್ದರೆ ಈ ಭಾಗದ ರೈತರನ್ನು ಸಭೆಗೆ ಆಹ್ವಾನಿಸಬೇಕಿತ್ತು. ಆ ಮೂಲಕ ಸಮಸ್ಯೆ ಅರ್ಥ ಮಾಡಿಕೊಂಡು ಪರಿಹಾರ ಕಂಡುಕೊಳ್ಳುವುದು ಸರ್ಕಾರ ಕರ್ತವ್ಯ. ಸರ್ಕಾರ ಬೇಜವಾಬ್ದಾರಿಯಾಗಿ ನಡೆದುಕೊಳ್ಳುತ್ತಿದೆ ಎಂದು ಕಿಡಿಕಾರಿದರು. ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಮುಖಂಡರಾದ ಅತ್ತಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಬರಡನಪುರ ನಾಗರಾಜು, ಕಿರಗಸೂರು ಶಂಕರ್, ಆಮ್ ಆದ್ಮಿ ಪಾರ್ಟಿಯ ಮುಖಂಡರಾದ ಮಾಲವಿಕ ಗುಬ್ಬಿವಾಣಿ, ಧರ್ಮಶ್ರೀ, ವಿಶ್ವನಾಥ್ ಕುಲಕರ್ಣಿ, ಜಿ.ಎಸ್.ರಾಜೇಶ್ ಮತ್ತಿತರರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಲೂಟಿ ಪಕ್ಷಗಳ ಸಭೆಯೆಂದು ಟೀಕೆ

> "ರಾಜ್ಯ ಸರ್ಕಾರ ಇಂದು ಸರ್ವ ಪಕ್ಷಗಳ ಸಭೆ ನಡೆಸಿದೆ. ಇದಕ್ಕಿಂತಲೂ ಮುಖ್ಯವಾಗಿ ಸರ್ವ ಸಂಘಟನೆಗಳ ಸಭೆ ಕರೆದಿದ್ದರೆ ಅದಕ್ಕೊಂದು ಅರ್ಥ ಬರುತ್ತಿತ್ತು. ಏಕೆಂದರೆ ಅವರಿಗೆ ಸಮಸ್ಯೆಯ ಮೂಲ ಗೊತ್ತಿದೆ. ಜೊತೆಗೆ ಇಂದು ನಡೆಯುತ್ತಿರುವ ಸರ್ವ ಪಕ್ಷಗಳ ಸಭೆಯು ಪರಿಪೂರ್ಣವಲ್ಲ. ದುರಾಡಳಿತ ಮಾಡಿ, ರಾಜ್ಯ ಲೂಟಿ ಮಾಡಿದ ಮೂರು ಪಕ್ಷಗಳು ಸಭೆ ನಡೆಸುತ್ತಿವೆ.
> **– ಮುಖ್ಯಮಂತ್ರಿ ಚಂದ್ರು, ರಾಜ್ಯಾಧ್ಯಕ್ಷ, ಆಮ್ ಆದ್ಮಿ ಪಾರ್ಟಿ**

ತಮಿಳುನಾಡಿಗೆ ಕಾವೇರಿ ನೀರು; ಜಿಲ್ಲೆಯ ವಿವಿಧೆಡೆ ಪ್ರತಿಭಟನೆ

ನದಿಗೆ ಇಳಿದು ರೈತರ ಪ್ರತಿಭಟನೆ



ಶ್ರೀರಂಗಪಟ್ಟಣ, ಆ.23– ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಭೂಮಿ ತಾಯಿ ಹೋರಾಟ ಸಮಿತಿಯ ರೈತರು ಕಾವೇರಿ ನದಿಗೆ ಇಳಿದು ಪ್ರತಿಭಟನೆ ನಡೆಸಿದರು.

ಪಟ್ಟಣದ ಉತ್ತರ ಕಾವೇರಿ ನದಿಯ ಸ್ನಾನಘಟ್ಟ ಬಳಿ ರೈತ ಸಂಘ ಭೂಮಿ ತಾಯಿ ಹೋರಾಟ ಸಮಿತಿ ನೇತೃತ್ವದಲ್ಲಿ 30ಕ್ಕೂ ಹೆಚ್ಚು ರೈತರು ಕಾವೇರಿ ನದಿಗೆ ಇಳಿದು ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿಯ ಮುಖಂಡ ಕೆ.ಎಸ್. ನಂಜುಂಡೇಗೌಡ ಮಾತನಾಡಿ, ಕಾವೇರಿ ಕಣಿವೆ ಜಲಾಶಯಗಳಿಂದ ನೀರು ಬಿಡುವ ಮುನ್ನ ಎಚ್ಚೆತ್ತುಕೊಂಡು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗದ ಸರ್ಕಾರ, ಜಲಾಶಯ ಭರ್ತಿ ಇಲ್ಲದಿದ್ದರೂ ಏಕಾಏಕಿ ತಮಿಳುನಾಡಿಗೆ ನೀರು ಬಿಟ್ಟು, ಜಲಾಶಯಗಳನ್ನು ಬರಿದು ಮಾಡಿ, ಕುಡಿಯುವ ನೀರಿಗೂ ತತ್ವಾರ ತಂದು ಇದೀಗ ರೈತರ ಕಣ್ಣಿಗೆ ಮಣ್ಣೆರೆಚುವ ಕೆಲಸಕ್ಕೆ ಮುಂದಾಗಿದೆ. ಮಂಡ್ಯ ಜಿಲ್ಲೆಯ ಶಾಸಕರು, ಸಂಸದರು ಜಿಲ್ಲೆಯ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ದೂರಿದರು.

ಜಲಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ್, ರೈತರು ನ್ಯಾಯಾಲಯಕ್ಕೆ ಹೋಗಲಿ ಎಂದು ಉಡಾಫೆ ಆಗಿ ಮಾತನಾಡಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ರೈತರ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ, ಕೇಂದ್ರ ಸರ್ಕಾರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ಕಿಡಿಕಾರಿದರು.

ಇದಕ್ಕೂ ಮುನ್ನಾ ಪಟ್ಟಣದ ಅಂಬೇಡ್ಕರ್ ಪ್ರತಿಮೆಯಿಂದ ಕಾವೇರಿ ನದಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆಗಳ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೇಳಾಪುರ ಜಯರಾಮ, ಹನುಮಂತನಗರದ ಸ್ವಾಮಿ, ಹೊಸೂರಿನ ಶಿವರಾಜ್, ಹನಿಯಂಬಾಡಿ ನಾಗರಾಜ್, ಮಹದೇವಪುರ ಕೃಷ್ಣ, ಹೊಸ ಉಂಡವಾಡಿ ಮಹದೇವು, ಪುಟ್ಟೇಗೌಡ, ಪಾಲಹಳ್ಳಿ ರಾಮಚಂದ್ರ , ಮಹದೇವು, ಕೂಡ್ಲುಕುಪ್ಪೆ ಸ್ವಾಮಿಗೌಡ,ಪುಟ್ಟೇಗೌಡ, ಬಲ್ಲೇನಹಳ್ಳಿ ಕೃಷ್ಣೇಗೌಡ, ರಾಮಕೃಷ್ಣ, ಬಲ್ಲೇನಹಳ್ಳಿ ಮಹೇಶ್, ದರಸಗುಪ್ಪೆ ಮಹೇಶ, ಚಂದಗಾಲು ಶಿವರಾವ್, ಚಿಂದಗಿರಿ ಕೊಪ್ಪಲು ರಾಮಚಂದ್ರ ಇತರರಿದ್ದರು.

ಮಂಡ್ಯದಲ್ಲಿ ಕಿಸಾನ್ ಸಂಘ ಸತ್ಯಾಗ್ರಹ



ಮಂಡ್ಯ, ಆ.23– ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿಲ್ಲದ ಸಮಯದಲ್ಲಿ ನ್ಯಾಯಾಲಯದ ಮೊರೆ ಹೋಗಿ ತಮಿಳುನಾಡಿಗೆ ಮನವರಿಕೆ ಮಾಡುವುದನ್ನು ಬಿಟ್ಟು ಕಾವೇರಿ ನೀರು ಬಿಡುಗಡೆ ಮಾಡುತ್ತಿರುವ ಕ್ರಮ ಖಂಡಿಸಿ ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು ನಗರದ ಸರ್‌ಎಂವಿ ಪ್ರತಿಮೆ ಎದುರು ಉಪವಾಸ ಸತ್ಯಾಗ್ರಹ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿ ಜಮಾಯಿಸಿದ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಈ ಕೂಡಲೇ ನೀರು ನಿಲ್ಲಿಸುವಂತೆ ಒತ್ತಾಯಿಸಿದರು. ಮುಂಗಾರು ಮಳೆಯ ಕೊರತೆಯಿಂದ ಅಣೆಕಟ್ಟೆ ಭರ್ತಿಯಾಗದೇ ಸಂಕಷ್ಟದಲ್ಲಿರುವಾಗ ರಾಜ್ಯ ಸರ್ಕಾರ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಇಲ್ಲದಿದ್ದರೂ ನಿತ್ಯ 12ರಿಂದ 15 ಸಾವಿರ ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಸುತ್ತಿದ್ದು, ಇದುವರೆಗೆ 20 ಟಿಎಂಸಿ ನೀರನ್ನು ನೆರೆ ರಾಜ್ಯಕ್ಕೆ ಹರಿಸಿ ರಾಜ್ಯದ ರೈತರ ಬೆನ್ನಿಗೆ ಚೂರಿ ಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಧಿಕಾರದ ಅಧ್ಯಕ್ಷ ಎಸ್.ಮಸೂದ್ ಹುಸೇನ್ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ತಮಿಳುನಾಡಿಗೆ ನೀರು ಹರಿಸಲೇಬೇಕು ಎನ್ನುವ ಒತ್ತಡ ಹಾಕಲಿಲ್ಲ. ಕುಡಿಯುವ ನೀರಿನ ಆದ್ಯತೆ ನೋಡಿಕೊಂಡು ಹಾಗೂ ಒಳ ಹರಿವಿನ ಪ್ರಮಾಣ ಗಮನಿಸಿ ಕೆಳ ಭಾಗದ ರಾಜ್ಯಕ್ಕೆ ನೀರು ಹರಿಸುವ ಬಗ್ಗೆ ಕರ್ನಾಟಕವೇ ನಿರ್ಧರಿಸಲಿ ಎಂದು ಪ್ರಾಧಿಕಾರ ಹೇಳಿತ್ತು. ಆದರೆ ಜೂನ್ ಮತ್ತು ಜುಲೈ ಅವಧಿಯ ಬಾಕಿ 28.84 ಟಿಎಂಸಿ ನೀರನ್ನು ಕೂಡಲೇ ಹರಿಸುವಂತೆ ನಿರ್ದೇಶನ ನೀಡುವಂತೆ ತಮಿಳುನಾಡು ಸರ್ಕಾರ ಸುಪ್ರೀಂಗೆ ಅರ್ಜಿ ಸಲ್ಲಿಸಿದೆ. ತಮಿಳುನಾಡಿಗೆ ನೀರು ಹರಿಸಿದ್ದನ್ನು ಪ್ರಶ್ನಿಸಿದಾಗ ರೈತರು ಬೇಕಿದ್ದಲ್ಲಿ ಕೋರ್ಟ್‌ಗೆ ಹೋಗಲಿ ಎಂದು ಹೇಳಲು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು.

ಧರಣಿಯಲ್ಲಿ ಸಂಘದ ಅಧ್ಯಕ್ಷ ಹಾಡ್ಯ ರಮೇಶ್ ರಾಜು, ಪದಾಧಿಕಾರಿಗಳಾದ ಅಪ್ಪಾಜಣ್ಣ, ವೆಂಕಟೇಶ್, ಪುಟ್ಟಮ್ಮ, ಶ್ರೀಕಂಠ, ದಿವ್ಯ ನಂದೀಶ್, ರಾಜಶೇಖರ್, ಜೋಗಿಗೌಡ, ಪಾಪೇಗೌಡ ಇತರರಿದ್ದರು.

ಪಾಂಡವಪುರದಲ್ಲಿ ಹೆದ್ದಾರಿ ತಡೆ



ಪಾಂಡವಪುರ, ಆ.23– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು, ರೈತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ಬಿಜೆಪಿ ಮುಖಂಡ ಎಚ್.ಎನ್.ಮಂಜುನಾಥ್ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ರೈತರು ಶ್ರೀರಂಗಪಟ್ಟಣ–ಬೀದರ್ ಮುಖ್ಯರಸ್ತೆ ತಡೆದು ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ರಾಜ್ಯದ ರೈತರ ಹಿತ ಕಾಯಬೇಕಿರುವ ರಾಜ್ಯ ಸರಕಾರ ತಮಿಳುನಾಡಿನವರು ಕೇಳುವುದಕ್ಕೂ ಮುನ್ನವೇ ಕೆಆರ್‌ಎಸ್ ಡ್ಯಾಂನಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ಕ್ರಮ ಸರಿಯಲ್ಲ. ಕಾವೇರಿ ನೀರು ನಂಬಿಕೊಂಡು ಈ ಭಾಗದ ರೈತರು ಕಬ್ಬು, ಭತ್ತ ಸೇರಿದಂತೆ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆದಿದ್ದಾರೆ. ಇದೀಗ ನೀರು ಹರಿಸುತ್ತಿರುವುದರಿಂದ ರೈತರ ಆತಂಕ ಹೆಚ್ಚಾಗಿದೆ ಎಂದು ಹರಿಹಾಯ್ದರು.

ಕೆ.ಆರ್.ಎಸ್ ಅಣೆಕಟ್ಟೆಗೆ ನೀರು ತುಂಬುವಂತೆ ರೈತರು ದೇವರಲ್ಲಿ ಮಾಡಿದ ಪ್ರಾರ್ಥನೆಯಿಂದಾಗಿ ಅಲ್ಪಮಟ್ಟಿಗೆ ಮಳೆಯಾಗಿ ನೀರು ತುಂಬಿದೆ. ಆದರೆ, ರಾಜ್ಯ ಸರಕಾರ ಇರುವ ನೀರಿನಲ್ಲಿ ಈ ಭಾಗದ ರೈತರ ಬೆಳೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಉಳಿಸಿಕೊಳ್ಳುವುದನ್ನು ಬಿಟ್ಟು ತಮಿಳುನಾಡಿಗೆ ನೀರು ಬಿಟ್ಟಿರುವುದು ಸರಿಯಲ್ಲ. ರಾಜ್ಯ ಸರಕಾರ ಈ ಕೂಡಲೇ ತಮಿಳುನಾಡಿಗೆ ಹರಿದು ಹೋಗುತ್ತಿರುವ ನೀರನ್ನು ಸ್ಥಗಿತಗೊಳಿಸದಿದ್ದರೆ ರಾಜ್ಯ ಸರಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಎಚ್.ಎನ್. ಮಂಜುನಾಥ್, ಶ್ರೀನಿವಾಸ್ ನಾಯ್ಕ, ಸೀನಪ್ಪ, ಗಂಗಾಧರ್, ವೀರಭದ್ರಪ್ಪ, ಪುರಸಭೆ ಮಾಜಿ ಅಧ್ಯಕ್ಷ ಹೊನ್ನಗಿರಿಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

ನೀರು ನಿಲ್ಲಿಸುವಂತೆ ರೈತ ಹಿತರಕ್ಷಣಾ ಸಮಿತಿ ಒತ್ತಾಯ

ಮಂಡ್ಯ, ಆ.23– ಕಾವೇರಿ ಜಲಾಶಯಗಳಲ್ಲಿ ನೀರಿನ ಲಭ್ಯತೆ ಇಲ್ಲದಿರುವ ಸಮಯದಲ್ಲಿ ತಮಿಳುನಾಡಿಗೆ ನೀರು ಬಿಟ್ಟಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿರುವ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ತಕ್ಷಣ ನೀರು ನಿಲ್ಲಿಸುವಂತೆ ಒತ್ತಾಯಿಸಿ ನಿರ್ಣಯ ಕೈಗೊಂಡಿತು.

ಬುಧವಾರ ನಗರದ ಗಾಂಧಿ ಭವನದಲ್ಲಿ ನಡೆದ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿತು. ಮಳೆಯ ಅಭಾವದಿಂದ ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹ ಕೊರತೆ ಇರುವ ಕಾಲದಲ್ಲಿ ನೀರಿನ ಹಂಚಿಕೆ ಕುರಿತು ರೂಪಿಸಿರುವ ಸಂಕಷ್ಟ ಸೂತ್ರದಲ್ಲಿ ಸ್ಪಷ್ಟತೆ, ನಿಖರತೆಯಿಲ್ಲದ ಕಾರಣ ಪ್ರಸ್ತುತ ಸುಪ್ರೀಂಕೋರ್ಟಿನ ಪೀಠದ ಮುಂದೆ ಅರ್ಥಪೂರ್ಣವಾಗಿ ಅನುಷ್ಠಾನವಾಗುವ ಸಂಕಷ್ಟ ಸೂತ್ರವನ್ನು ರೂಪಿಸುವಂತೆ ಸರ್ಕಾರಕ್ಕೆ ಸಮಿತಿ ಆಗ್ರಹಪೂರ್ವಕವಾಗಿ ಒತ್ತಾಯಿಸುವ ನಿರ್ಣಯ ಕೈಗೊಂಡಿತು.

ಕಾವೇರಿ ಜಲಾನಯನ ಪ್ರದೇಶವನ್ನು ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಸೂಕ್ತ ಪರಿಹಾರ ನೀಡಲು ಮುಂದಾಗಬೇಕು ಎಂದು ನಿರ್ಣಯಿಸಿತು. ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಮುಂದಾಗದಿದ್ದಲ್ಲಿ ಪಕ್ಷಾತೀತವಾಗಿ ಹೋರಾಟವನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಹಿತರಕ್ಷಣಾ ಸಮಿತಿಯ ಮುಖಂಡರಾದ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಮುಖಂಡರಾದ ಕೆ.ಎಸ್. ನಂಜುಂಡೇಗೌಡ, ಸುನಂದಾ ಜಯರಾಂ, ಮಲ್ಲನಾಯಕನಕಟ್ಟೆ ಬೋರೇಗೌಡ, ಬೇಕ್ರಿ ರಮೇಶ್, ಪ್ರಶಾಂತ್‌ಬಾಬು ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಂಡ್ಯ ಯೂತ್ ಗ್ರೂಪ್‌ನಿಂದ ಕಾಲ್ನಡಿಗೆ ಜಾಥಾ



ಮಂಡ್ಯ, ಆ.23– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಮಂಡ್ಯ ಯೂತ್ ಗ್ರೂಪ್ ಕಾಲ್ನಡಿಗೆ ಜಾಥಾ ನಡೆಸಿತು. ಯೂತ್ ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ನೇತೃತ್ವದಲ್ಲಿ ಪದಾಧಿಕಾರಿಗಳು ನಗರದ ವಿವಿಧ ರಸ್ತೆಗಳಲ್ಲಿ ಕಾಲ್ನಡಿಗೆ ಜಾಥಾ ನಡೆಸಿದರು. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಲಿದೆ ಎಂಬ ಮುನ್ನೆಚ್ಚರಿಕೆಯಾಗಿ ಜನರಿಗೆ ನೀರು ವಿತರಣೆ ಮಾಡುವ ಮೂಲಕ ಮನವರಿಕೆ ಮಾಡಿಕೊಟ್ಟರು. ಜಾಥಾದಲ್ಲಿ ಹೋರಾಟಗಾರರಾದ ಡಾ.ಯಾಶಿಕಾ, ಪ್ರವೀಣ್, ದರ್ಶನ್, ನವೀನ್, ವಿನಯ್, ಸೀನಪ್ಪ, ಪ್ರಶಾಂತ್, ಮಂಜು, ಯೋಗಿ ಗುಪ್ತ, ನರೇಂದ್ರ, ಹರೀಶ್‌ಕುಮಾರ್, ನಂಜುಂಡ, ವಿನೋದ್, ನಂದಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಆಕಸ್ಮಿಕವಾಗಿ ಕೆರೆಗೆ ಬಿದ್ದು ಯುವಕ ಸಾವು

ಮದ್ದೂರು, ಆ.23– ಯುವಕನೋರ್ವ ಆಕಸ್ಮಿಕವಾಗಿ ಕೆರೆಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲೂಕಿನ ನಿಡಘಟ್ಟ ಗ್ರಾಮದಲ್ಲಿ ಜರುಗಿದೆ. ರಾಮನಗರ ತಾಲೂಕಿನ



ನಿವಾಸಿ ರಾಮು (25) ಮೃತಪಟ್ಟ ಯುವಕನಾಗಿದ್ದು, ಈತ ಕಳೆದ ಮೂರು ದಿನಗಳ ಹಿಂದೆ ಸ್ನೇಹಿತರ ಜತೆಗೂಡಿ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಹೆದ್ದಾರಿ ಬದಿಯಿರುವ ನಿಡಘಟ್ಟ ಗ್ರಾಮದ ಕೆರೆಯಲ್ಲಿ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಸಂಬಂಧಿಕರು ಪ್ರಕರಣ ದಾಖಲು ಮಾಡಿದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಮತ್ತು ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದು ಬುಧವಾರ ಬೆಳಗ್ಗೆ ಕೆರೆಯಲ್ಲಿ ಯುವಕನ ಶವ ಪತ್ತೆಯಾಗಿ ತಾಲೂಕು ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದೆ.

ಅಪರಿಚಿತ ವ್ಯಕ್ತಿ ಹತ್ಯೆ

ಶ್ರೀರಂಗಪಟ್ಟಣ, ಆ.23– ತಾಲೂಕಿನ ಕೆಆರ್‌ಎಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಯೋರ್ವನನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ.

ಹೊಸ ಉಂಡವಾಡಿ ಗ್ರಾಮದ ಇಲವಾಲ ರಸ್ತೆಯ ಎಡಭಾಗದ ಹೊಲದಲ್ಲಿನ ಒಂಟಿ ಮರದ ಕೆಳಗೆ ಸುಮಾರು 30 ರಿಂದ 35 ವರ್ಷ ವ್ಯಕ್ತಿಯ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದೆ. ಇಂದು ಬೆಳಗ್ಗೆ 11.30 ರಲ್ಲಿ ದನ ಮೇಯಿಸುವ ವ್ಯಕ್ತಿ ನೀಡಿದ ಮಾಹಿತಿ ಮೇರೆಗೆ ಕೆ.ಆರ್.ಸಾಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸ್ಥಳದಲ್ಲಿ ಮದ್ಯದ ಪ್ಯಾಕೆಟ್‌ಗಳು ದೊರಕಿದ್ದು, ಇಬ್ಬರು ಅಥವಾ ಮೂವರು ಸ್ಥಳದಲ್ಲಿರಬಹುದೆಂದು ಶಂಕೆ ವ್ಯಕ್ತಪಡಿಸಲಾಗಿದೆ. ಸ್ಥಳಕ್ಕೆ ಡಿವೈಎಸ್ಪಿ ಮುರಳಿ, ಕೆಆರ್‌ಎಸ್ ಠಾಣೆ ವೃತ್ತ ನಿರೀಕ್ಷಕ ಪುನೀತ್, ಪಿ.ಎಸ್ಸೈ ಬಸವರಾಜು ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ. ಈ ಕುರಿತು ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆಯಾದ ವ್ಯಕ್ತಿಯ ಬಲಗೈನಲ್ಲಿ ದೇವರ ದಾರ ಕಟ್ಟಿದ್ದು, ಜೆ.ಬಿ ಎಂಬ ಹೆಸರಿನ ಹಚ್ಚೆ ಮತ್ತು ಎಡಗೈ ಮೇಲೆ ಅವ್ವ ಎಂದು ಹಚ್ಚೆ ಹಾಕಲಾಗಿದೆ. ಈತನ ಬಗ್ಗೆ ಮಾಹಿತಿ ಇರುವವರು ದೂ.08236–200600, 9480804856 ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಚಿರತೆ ದಾಳಿಗೆ ಹಸು ಬಲಿ

ಕೆ.ಆರ್.ಪೇಟೆ, ಆ.23– ತಾಲೂಕಿನ ಬೊಮ್ಮೇನಹಳ್ಳಿ ಗ್ರಾಮದಲ್ಲಿ ಹಸುವಿನ ಮೇಲೆ ಚಿರತೆ ದಾಳಿ ನಡೆಸಿ ತಿಂದು ಹಾಕಿರುವ ಘಟನೆ ಬುಧವಾರ ಬೆಳಗಿನ ಜಾವ ನಡೆದಿದೆ.

ಗ್ರಾಮದ ರೈತ ಬಿ.ಕೆ.ಪುಟ್ಟರಾಜು ಅವರಿಗೆ ಸೇರಿದ ಸುಮಾರು 50 ಸಾವಿರ ಬೆಲೆ ಬಾಳುವ ಹಸು ಚಿರತೆ ದಾಳಿಯಿಂದ ಮೃತಪಟ್ಟಿದೆ. ಗ್ರಾಪಂ ಸದಸ್ಯ ಬಿ.ಸಿ.ಹರ್ಷ ಮಾತನಾಡಿ, ಬೊಮ್ಮೇನಹಳ್ಳಿ, ಲಕ್ಷ್ಮೀಪುರ, ಹರಿಹರಪುರ ಸುತ್ತಮುತ್ತ ಚಿರತೆಗಳ ಹಾವಳಿ ಹೆಚ್ಚಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಬೋನ್ ಇಟ್ಟು ಚಿರತೆ ಹಿಡಿಯುವ ಮೂಲಕ ಈ ಭಾಗದ ರೈತರಲ್ಲಿನ ಆತಂಕವನ್ನು ದೂರಮಾಡಬೇಕು ಎಂದು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ತಾಲೂಕು ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಹೆಚ್.ಎಸ್. ದೇವರಾಜು, ವೆಂಕಟೇಶ್, ತಾಲೂಕು ಅರಣ್ಯಾಧಿಕಾರಿ ಗಂಗಾಧರ್, ಸಹಾಯಕ ಅರಣ್ಯಾಧಿಕಾರಿ ರಾಘವೇಂದ್ರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಚಂದ್ರಯಾನ–3' ಸಕ್ಸಸ್: ಇಸ್ರೋ ಸಾಧನೆಗೆ ರಾಷ್ಟ್ರಪತಿ, ಅಮಿತ್ ಶಾ, ಯೋಗಿ, ರಾಹುಲ್ ಗಾಂಧಿ ಅಭಿನಂದನೆ






ನವದೆಹಲಿ: ಚಂದ್ರಯಾನ–3 ಚಂದ್ರನಲ್ಲಿ ಯಶಸ್ವಿ ಲ್ಯಾಂಡಿಂಗ್ ಆಗಿದ್ದು, ಇಸ್ರೋ ವಿಜ್ಞಾನಿಗಳ ಪರಿಶ್ರಮಕ್ಕೆ ಮಹತ್ವದ ಫಲ ಸಿಕ್ಕಿದೆ. ಈ ಸಾಧನೆಗೆ ಇಡೀ ಭಾರತವೇ ಅಭಿನಂದನೆ ಸಲ್ಲಿಸುತ್ತಿದ್ದು, **ರಾಷ್ಟ್ರಪತಿ ದ್ರೌಪದಿ ಮುರ್ಮು** ಅವರು ಚಂದ್ರಯಾನ–3 ಚಂದ್ರನಲ್ಲಿ ಯಶಸ್ವಿ ಲ್ಯಾಂಡಿಂಗ್‌ನೊಂದಿಗೆ, ನಮ್ಮ ವಿಜ್ಞಾನಿಗಳು ಇತಿಹಾಸವನ್ನು ನಿರ್ಮಿಸಿದ್ದಾರೆ. ಮಾತ್ರವಲ್ಲದೆ ಭೌಗೋಳಿಕ ಕಲ್ಪನೆಯನ್ನು ಮರುರೂಪಿಸಿದ್ದಾರೆ. ಇದು ನಿಜವಾಗಿಯೂ ಮಹತ್ವದ ಸಾಧನೆಯಾಗಿದೆ ಎಂದು ಟ್ವೀಟ್ ಮೂಲಕ ಖುಷಿ ಹಂಚಿಕೊಂಡಿದ್ದಾರೆ.

ಅಭಿನಂದನೆ ತಿಳಿಸಿದ ಕೇಂದ್ರ ಗೃಹ ಸಚಿವ: ಚಂದ್ರಯಾನ–3 ಯಶಸ್ಸಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿನಂದನೆ ತಿಳಿಸಿದ್ದಾರೆ. ಚಂದ್ರಯಾನ–3 ಯಶಸ್ಸಿನೊಂದಿಗೆ ಭಾರತವು ಚಂದ್ರನ ದಕ್ಷಿಣ ಧ್ರುವವನ್ನು ಮುಟ್ಟಿದ ಮೊದಲ ರಾಷ್ಟ್ರವಾಗಿದೆ ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿ ಅಭಿನಂದನೆ: ಇಂದಿನ ಪ್ರವರ್ತಕ ಸಾಧನೆಗಾಗಿ ಇಸ್ರೋ ತಂಡಕ್ಕೆ ಅಭಿನಂದನೆಗಳು. ನಮ್ಮ ವೈಜ್ಞಾನಿಕ ಸಮುದಾಯದ ದಶಕಗಳ ಪ್ರಚಂಡ ಚತುರತೆ ಮತ್ತು ಕಠಿಣ ಪರಿಶ್ರಮದ ಫಲವಾಗಿ ಚಂದ್ರಯಾನ–3 ಚಂದ್ರನ ದಕ್ಷಿಣ ಧ್ರುವದಲ್ಲಿ ಯಶಸ್ವಿ ಲ್ಯಾಂಡಿಂಗ್ ಆಗಿದೆ. ಇದು ಯುವ ಕನಸುಗಾರರಿಗೆ ಸ್ಫೂರ್ತಿ ನೀಡುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವಿಟರ್ ಮೂಲಕ ಅಭಿನಂದನೆಯನ್ನು ತಿಳಿಸಿದ್ದಾರೆ.

ಯುಪಿ ಸಿಎಂ ಯೋಗಿ ಆದಿತ್ಯನಾಥ್ ಅಭಿನಂದನೆ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಇಸ್ರೋ ಸಾಧನೆಗೆ ಅಭಿನಂದನೆ ತಿಳಿಸಿದ್ದಾರೆ. ಚಂದ್ರಯಾನ ಯಶಸ್ವಿ ಸಾಫ್ಟ್ ಲ್ಯಾಂಡಿಂಗ್ ನವ ಭಾರತದ ಸಾಮರ್ಥ್ಯಗಳು ಮತ್ತು ಶಕ್ತಿಯ ಪ್ರಬಲ ಪ್ರದರ್ಶನವಾಗಿದೆ ಎಂದು ಹೇಳಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ ಅಭಿನಂದನೆ: ಭಾರತ ಮಾಡಿದ ಸಾಧನೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟ್ವೀಟ್ ಮೂಲಕ ಅಭಿನಂದನೆಯನ್ನು ತಿಳಿಸಿದ್ದಾರೆ. ಚಂದ್ರಯಾನ–3ರ ಯಶಸ್ಸು ಪ್ರತಿಯೊಬ್ಬ ಭಾರತೀಯನ ಸಾಮೂಹಿಕ ಯಶಸ್ಸು. 140 ಕೋಟಿ ಆಕಾಂಕ್ಷೆಗಳನ್ನು ಹೊಂದಿರುವ ಸಂಭ್ರಮದ ರಾಷ್ಟ್ರವು ತನ್ನ ಆರು ದಶಕಗಳ ಸುದೀರ್ಘ ಬಾಹ್ಯಾಕಾಶ ಸೇವೆಯಲ್ಲಿ ಇಂದು ಮತ್ತೊಂದು ಸಾಧನೆಗೆ ಸಾಕ್ಷಿಯಾಗಿದೆ. ನಮ್ಮ ವಿಜ್ಞಾನಿಗಳು, ಬಾಹ್ಯಾಕಾಶ ಇಂಜಿನಿಯರ್‌ಗಳು, ಸಂಶೋಧಕರು ಮತ್ತು ಈ ಕಾರ್ಯಾಚರಣೆಯನ್ನು ಭಾರತಕ್ಕೆ ವಿಜಯವಾಗಿಸುವಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರದ್ದು ಗಮನಾರ್ಹ ಶ್ರಮ, ಅಪ್ರತಿಮ ಜಾಣ್ಮೆ ಮತ್ತು ಅಚಲವಾದ ಸಮರ್ಪಣೆಗೆ ನಾವು ಋಣಿಯಾಗಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಇದು ಹೆಮ್ಮೆಯ ಕ್ಷಣ: ಚಂದ್ರಯಾನದ ಯಶಸ್ಸಿಗೆ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಟ್ವೀಟ್ ಮೂಲಕ ಅಭಿನಂದಿಸಿದ್ದು, ದಕ್ಷಿಣ ಧ್ರುವದಲ್ಲಿ ಮೊದಲ ಬಾರಿಗೆ #Chandrayan3 ಕಾಲಿರಿಸುವ ಮೂಲಕ ಭಾರತವು ಮತ್ತೊಮ್ಮೆ ಸುಪ್ರೀಂ ಎಂದು ಸಾಬೀತುಪಡಿಸಿದೆ. ಇಸ್ರೋ ಮತ್ತು ಎಲ್ಲಾ ದೇಶವಾಸಿಗಳಿಗೆ ಅಭಿನಂದನೆಗಳು. ಚಂದ್ರನ ಮೇಲೆ ಹೆಜ್ಜೆ ಗುರುತುಗಳಿರುವಾಗ ಆಕಾಶಕ್ಕೆ ಮಿತಿಯಿಲ್ಲ. ಇದು ಹೆಮ್ಮೆಯ ಕ್ಷಣ..ಜೈ ಹಿಂದ್ ಎಂದಿದ್ದಾರೆ.

ವೈಜ್ಞಾನಿಕ ಆವಿಷ್ಕಾರದಲ್ಲಿ ಹೊಸ ಮಾರ್ಗಗಳಿಗೆ ನಾಂದಿ: ಚಂದ್ರಯಾನ ಯಶಸ್ಸಿನ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಕೂಡ ಅಭಿನಂದನೆ ತಿಳಿಸಿದ್ದು, "ನಮ್ಮ ಮಹಾನ್ ರಾಷ್ಟ್ರದ ಪ್ರಜೆಯಾಗಿ ಅಪಾರ ಹೆಮ್ಮೆಯಿಂದ ನಾನು ಇಂದು ಚಂದ್ರನ ಮೇಲೆ ಚಂದ್ರಯಾನ–3 ರ ಗಮನಾರ್ಹ ಲ್ಯಾಂಡಿಂಗ್ ಅನ್ನು ನೋಡಿದೆ. ಇದು ಹೆಚ್ಚು ಮಹತ್ವದ್ದಾಗಿದೆ, ಏಕೆಂದರೆ ಚಂದ್ರನ ದಕ್ಷಿಣ ಧ್ರುವದಲ್ಲಿ ಚಂದ್ರನ ಇಳಿಯುವಿಕೆಯನ್ನು ಸಾಧಿಸಿದ ಏಕೈಕ ರಾಷ್ಟ್ರ ಭಾರತವಾಗಿದೆ. ಇದು ವೈಜ್ಞಾನಿಕ ಸಂಶೋಧನೆ ಮತ್ತು ಆವಿಷ್ಕಾರದಲ್ಲಿ ಹೊಸ ಮಾರ್ಗಗಳಿಗೆ ನಾಂದಿ ಹಾಡುತ್ತದೆ. ಇದು ರಾಷ್ಟ್ರದ ಮೆರವಣಿಗೆಯಲ್ಲಿ ಒಂದು ಮೈಲಿಗಲ್ಲು. ಈ ಐತಿಹಾಸಿಕ ಸಾಧನೆಗಾಗಿ ಇಸ್ರೋ ತಂಡ ಮತ್ತು ವೈಜ್ಞಾನಿಕ ಸಮುದಾಯಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಅವರು ಇಡೀ ರಾಷ್ಟ್ರವನ್ನು ಹೆಮ್ಮೆಪಡುವಂತೆ ಮಾಡಿದ್ದಾರೆ ಎಂದು ಕೊಂಡಾಡಿದ್ದಾರೆ.

ನಮ್ಮ ನಿರ್ಧಾರ ದೃಢವಾಗಿದ್ದರೆ ಮತ್ತೊಬ್ಬರ ಸಲಹೆ ಅಗತ್ಯವಿಲ್ಲ

ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅಭಿಮತ



ಮೈಸೂರು,ಆ.23(ಸಿಎನ್)–ಒಮ್ಮೆ ಮನಸ್ಸಿಗೆ ವಿಷದ ಬೀಜ ನಾಟಿದರೆ, ಅದು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತದೆ ಎಂದರೆ ಅದಕ್ಕೆ ದಶರಥ ಹೆಂಡತಿ ಅವರು ಕೈಕೇಯಿ ಪುರಾಣದಲ್ಲಿ ಸಿಗುವ ಉದಾಹರಣೆ ಆಗಿದ್ದಾರೆ. ಹಾಗಾಗಿ ನಮ್ಮ ನಿಲುವು ಸ್ಪಷ್ಟವಾಗಿರಬೇಕು. ನಮ್ಮ ನಿರ್ಧಾರ ದೃಢವಾಗಿದ್ದರೆ ಮತ್ತೊಬ್ಬರ ಸಲಹೆ ನಮಗೆ ಅಗತ್ಯವಿರುವುದಿಲ್ಲ ಎಂದು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ 36ನೇ ಚಾತುರ್ಮಾಸ್ಯ ಸಂಕಲ್ಪವಾಗಿ ಬುಧವಾರ ಆಯೋಜಿಸಲಾಗಿದ್ದ 'ಶ್ರೀಮದ್ರಾಮಾಯಣ' ಅಯೋಧ್ಯಾಕಾಂಡ ಪ್ರವಚನ ವೇಳೆ ಅವರು ಮಾತನಾಡಿದರು.

ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಕಲವು ಸನ್ನದ್ಧವಾಗಿದ್ದ ಸಂದರ್ಭ ಕೈಕೇಯಿ, ದಶರಥನ ಬಳಿ ಬಂದು ಭರತನಿಗೆ ಪಟ್ಟ ಕಟ್ಟಲು ಹೇಳಿದಾಗ ನಡೆದ ಸುದೀರ್ಘ ಸನ್ನಿವೇಶವನ್ನು ವಿವರಿಸುತ್ತಾ, ಅಂತಃಪುರದಲ್ಲಿ ದಶರಥ ಮಹಾರಾಜ ಚಿಂತಾಕ್ರಾಂತನಾಗಿ ಕೈಕೇಯಿ ಬಳಿ ಪರಿಪರಿಯಾಗಿ ಬೇಡಿಕೊಂಡರೂ ಅವಳು ತನ್ನ ನಿರ್ಧಾರದಿಂದ ಹೊರಬರಲಿಲ್ಲ.

ದುಃಖಿಕ್ಕೀಡಾದ ದಶರಥ ಅವನ ಕೋಣೆಯಲ್ಲಿ ಇರುಳಿನೊಂದಿಗೆ ಮಾತನಾಡುತ್ತಾ, 'ಏ ಇರುಳೆ ನೀನು ಹೋಗಬೇಡ ರಾತ್ರಿ ಕಳೆದರೆ ಮತ್ತೆ ಹಗಲು ಆವರಿಸುತ್ತದೆ. ಬೆಳಗ್ಗೆಯಾದರೆ ಶ್ರೀರಾಮ ಪಟ್ಟಾಭಿಷೇಕಕ್ಕೆ ವಿಘ್ನ ಎಂದರೆ ನಂಬಲಾಗುತ್ತಿಲ್ಲ. ರಾತ್ರಿ ಹೀಗೆ ಇರಲಿ ಮುಂದೆ ಹೋಗಬೇಡ' ಎಂದು ನಿವೇದಿಸುತ್ತಾನೆ.

ಬಳಿಕ ಕೈಕೇಯಿ ಬಳಿ ಮಾತನಾಡುತ್ತಾ, 'ನೀನು ಕೂಡ ಒಳ್ಳೆಯವಳೇ ನನ್ನ ಮೇಲೆ ದಯೆ ತೋರು. ಕ್ಷತ್ರಿಯನ ಮಾತು ಸುಳ್ಳು ಎಂದು ಬಿಂಬಿತವಾಗುತ್ತದೆ. ನೀನು ಅದಕ್ಕೆ ಅವಕಾಶ ಮಾಡಿಕೊಡಬೇಡ' ಎಂದು ಅಂಗಲಾಚುತ್ತಾರೆ. ಆ ಮಾತಿಗೆ ಉತ್ತರಿಸಿದ ಕೈಕೇಯಿ, ನೀವು ಅಂದು ಕೊಟ್ಟ ಮಾತಿಗೆ ತಪ್ಪಿದರೆ ಏನನ್ನಬೇಕು ಎಂದು ಇಡೀ ರಾತ್ರಿ ಉಪದೇಶ ಮಾಡುತ್ತಾ, ದಶರಥನ ಕೋಪಕ್ಕೆ ಗುರಿಯಾಗುತ್ತಾಳೆ.

ತನ್ನ ಒಡಲಲ್ಲಿದ್ದ ಕಿಚ್ಚನ್ನು ಹೊರಹಾಕಿದ ದಶರಥರು, 'ಕಾಯ,ವಾಚ, ಮನಸ ನಿನ್ನನ್ನು ನಾನು ವರಿಸಿದ್ದೆ. ಆದರೆ ನಿನ್ನ ಮಾತಿನಿಂದ ನಾನು ಹತನಾಗಿದ್ದೇನೆ. ಹಾಗಾಗಿ ರಾಮನ ಪಟ್ಟಾಭಿಷೇಕಕ್ಕೆ ಅಡ್ಡಿಯಾಗದಂತೆ ಈಗಿಂದೀಗಲೇ ನಿನ್ನನ್ನು ಹಾಗೂ ಭರತನನ್ನು ಪರಿತ್ಯಾಗ ಮಾಡುತ್ತಿದ್ದಾನೆ. ರಾಮನಿಗೆ ಪಟ್ಟ ಬೇಡ ಎಂದರೆ, ನಾನು ಸತ್ತಾಗ ನೀನು ಜಲದರ್ಪಣ ಮಾಡಬೇಡ. ನೀನು ಹೀನ ಜನ್ಮ ತಾಳುತ್ತಿಯಾ' ಎಂದು ಶಾಪ ಹಾಕಿದರು.

ಇಡೀ ರಾತ್ರಿ ಚರ್ಚೆ ಬಳಿಕ ಕತ್ತಲು ಸರಿದು ಬೆಳಗಾಯಿತು. ಬೆಳಗ್ಗೆಯೇ ಅರಮನೆ ಕಡೆಗೆ ವಸಿಷ್ಠ ಮಹರ್ಷಿಗಳು ಬಂದಿದ್ದಾರೆ. ಊರಿನ ಸಿದ್ಧತೆ, ಅಲಂಕಾರಗಳನ್ನು ನೋಡಿ ಹೊಗಳುತ್ತಿದ್ದಾರೆ.

ಅಲ್ಲಿಂದ ಅಂತಃಪುರದ ಬಳಿ ಬಂದ ವಸಿಷ್ಠರು, ದಶರಥನ ಸಾರಥಿ ಸುಮಂತ್ರನನ್ನು ಕರೆದು ದಶರಥರಿಗೆ ನಾವು ಬಂದ ಸುದ್ದಿ ತಿಳಿಸಿ, ಪಟ್ಟಾಭಿಷೇಕದ ಸಿದ್ಧತೆ ಆಗಿದೆ, ಎಲ್ಲರನ್ನು ಕರೆದು ತಾ ಎಂದು ಹೇಳಿ ಕಳುಹಿಸಿದರು.

ಸುಮಂತ್ರ ರಾಜನ ಬಳಿ ಬಂದು ಸುಪ್ರಭಾತ ಹಾಡಿ, ಸಮಯ ಮೀರಿಹೋಗುತ್ತಿದೆ, ವಸಿಷ್ಠರು ಬಂದಿದ್ದಾರೆ. ಬೇಗನೇ ಹೊರಟು ಬಾ ಎಂದಾಗ, ದಶರಥ ಮತ್ತಷ್ಟು ಚಿಂತಿತರಾಗಿ ಹೇಳುತ್ತಾ, ನಿನ್ನ ಮಾತಿನಿಂದ ಇನ್ನೂ ಬೇಸರವಾಗುತ್ತಿದೆ. ಆಗಲಿ ರಾಮನನ್ನು ನೋಡಬೇಕು ಈಗಲೇ ಕರೆತಾ ಎಂದು ಸುಮಂತ್ರನಿಗೆ ಆದೇಶಿಸುತ್ತಾರೆ. ಅಲ್ಲಿಂದ ರಾಮನ ಮನೆಗೆ ಬಂದ ಸುಮಂತ್ರ, ದಶರಥರು ನಿಮ್ಮನ್ನು ಕಾಣಬೇಕು ಎಂದು ಕರೆದಿದ್ದಾರೆ. ತುರ್ತಾಗಿ ಹೊರಟು ಬಾ ಎಂದಾಗ, ಶ್ರೀರಾಮನು ಸೀತೆಯನ್ನು ಕರೆದು, ತಂದೆಯವರು ಕರೆದಿದ್ದಾರೆ, ಹೋಗಿ ಬರುತ್ತೇನೆ. ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಎಂದು ಹೇಳಿ ಅಲ್ಲಿಂದ ಹೊರಡುತ್ತಾರೆ. ಶ್ರೀರಾಮನು ಅಲ್ಲಿಂದ ದಶರಥರನ್ನು ಕಾಣಲು ಹೊರಟರು ಎಂದು ಪ್ರವಚನ ಅಂತ್ಯಗೊಳಿಸಿದರು.

ಪ್ರವಚನ ಬಳಿಕ ಖ್ಯಾತ ಭರತನಾಟ್ಯ ಕಲಾವಿದರಾದ ಡಾ.ಕಿಶೋರಿ ಹಂಪಿಹೋಳಿ, ಕಿಶೋರ್ ಹಂಪಿಹೋಳಿ ದಂಪತಿಗಳ ತಂಡದಿಂದ ಭರತನಾಟ್ಯ ಪ್ರದರ್ಶನ ನೆರವೇರಿತು.



"ಭಾರತೀಯ ಬಾಹ್ಯಾಕಾಶ ಸಂಸ್ಥೆ(ಇಸ್ರೋ) ಐತಿಹಾಸಿಕ ಚಂದ್ರಯಾನ ಮಿಷನ್–3 ಯಶಸ್ವಿಯಾಗುತ್ತಿದ್ದಂತೆ ಕೃಷ್ಣಧಾಮದಲ್ಲಿ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಶ್ರೀಗಳ ಪ್ರವಚನಕ್ಕೂ ಮುನ್ನ ಭಾರತದ ವಿಜ್ಞಾನಿಗಳ ಸಾಧನೆಯನ್ನು ಕೊಂಡಾಡಿದ ಅವರು, ಭಾರತವು ಆಧ್ಯಾತ್ಮಿಕ ದೇಶವಾಗಿದೆ. ಹಾಗಾಗಿಯೇ ಚಂದ್ರಯಾನ–3 ಉಡಾವಣೆ ವೇಳೆ ತಿರುಪತಿ ತಿಮ್ಮಪ್ಪನ ಸ್ಮರಿಸಿ ಪೂಜೆ ಸಲ್ಲಿಸಿ ಉಡಾವಣೆ ಮಾಡಲಾಗಿತ್ತು. ಎಲ್ಲಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಮುಗಿಸಿದ ವಿಕ್ರಮ ಲ್ಯಾಂಡರ್ ಇಂದು(ಬುಧವಾರ)ಸಂಜೆ 6.14ಕ್ಕೆ ಯಶಸ್ವಿಯಾಗಿ ಚಂದ್ರನ ಮೇಲ್ಮೈ ಮೇಲೆ ಹೆಜ್ಜೆ ಇಟ್ಟಿದೆ. ಕೋಟ್ಯಂತರ ಭಾರತೀಯರ ಹೃದಯ ಚಂದ್ರನಲ್ಲಿ ಮಿಡಿಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇಸ್ರೋಗೆ ಸಿದ್ದರಾಮಯ್ಯ, ಡಿಕೆಶಿ ಅಭಿನಂದನೆ



ಸಿದ್ದರಾಮಯ್ಯ

ಬೆಂಗಳೂರು: ಭಾರತ ಹೊಸ ಇತಿಹಾಸ ನಿರ್ಮಿಸಿದೆ. ಶಶಿಯ ರಹಸ್ಯ ಭೇದಿಸಲು 40 ದಿನದ ಹಿಂದೆ ನಭಕ್ಕೆ ಚಿಮ್ಮಿದ್ದ ಭಾರತದ ಚಂದ್ರಯಾನ–3 ನೌಕೆ ಚಂದಿರನ ದಕ್ಷಿಣ ಧ್ರುವದಲ್ಲಿ ಇಳಿದು ಜೈ ಹಿಂದ್ ಎಂದಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವ ಕುಮಾರ್ ಇಸ್ರೋಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಸಿಎಂ, ಚಂದ್ರಯಾನ–3ರ ವಿಕ್ರಂ ಲ್ಯಾಂಡರ್ ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿಯುವ ಐತಿಹಾಸಿಕ ಕ್ಷಣಗಳನ್ನು ಕಣ್ತುಂಬಿಕೊಂಡೆ. ವಿಜ್ಞಾನಿಗಳ ದಶಕಗಳ ಪರಿಶ್ರಮವು ನನ್ನಂತಹ ಕೋಟ್ಯಂತರ ಭಾರತೀಯರ ಕನಸನ್ನು ನನಸಾಗಿಸಿದೆ. ಚಂದ್ರನ ಮೇಲೆ ಭಾರತದ ಪತಾಕೆ ಹಾರಿಸಿ ದೇಶವಾಸಿಗಳು ಹೆಮ್ಮೆಪಡುವಂತೆ ಮಾಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ ಧನ್ಯವಾದಗಳು ಎಂದು ಬರೆದುಕೊಂಡಿದ್ದಾರೆ.

ಡಿಕೆಶಿ ಅಭಿನಂದನೆ: ಇಡೀ ದೇಶವೇ ನಿರೀಕ್ಷೆ ಹೊಂದಿದ್ದ ಚಂದ್ರಯಾನ–3 ಯೋಜನೆ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಈ ಯೋಜನೆಗಾಗಿ ಶ್ರಮಿಸಿದ ಇಸ್ರೋ ಸಂಸ್ಥೆಯ ಎಲ್ಲ ವಿಜ್ಞಾನಿಗಳು ಹಾಗೂ ಸಿಬ್ಬಂದಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೃದಯಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ. ವಿಕ್ರಂ ಲ್ಯಾಂಡರ್ ಚಂದ್ರನ ಮೇಲೆ ಕಾಲಿಟ್ಟಿದೆ. ಆ ಮೂಲಕ ಚಂದ್ರಗ್ರಹದ ಮೇಲೆ ಭಾರತದ ಹೆಗ್ಗುರುತು ಮೂಡಿದೆ. ಇದಕ್ಕಾಗಿ ಅವಿರತ ಶ್ರಮಿಸಿದ ಇಸ್ರೋ ಸಂಸ್ಥೆಗೆ ಶುಭಾಶಯಗಳು. ಇಸ್ರೋ ಸಂಸ್ಥೆ ಈವರೆಗೂ ಮೂರು ಚಂದ್ರಯಾನ ಯೋಜನೆ ರೂಪಿಸಿರುವುದು ದೊಡ್ಡ ಸಾಧನೆಯೇ ಸರಿ. ಇಸ್ರೋದ ಮಹತ್ವಾಕಾಂಕ್ಷಿ ಯೋಜನೆ ಚಂದ್ರಯಾನ–3 ಯಶಸ್ವಿಯಾಗಿರುವುದು ಇಡೀ ದೇಶವೇ ಹೆಮ್ಮೆಪಡುವ ವಿಚಾರ. ಈ ಯೋಜನೆ ಯಶಸ್ಸಿನ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತೊಂದು ಮೈಲಿಗಲ್ಲು ಸಾಧಿಸಿದೆ ಎಂದು ಶಿವಕುಮಾರ್ ಕೊಂಡಾಡಿದ್ದಾರೆ.

1960ರ ದಶಕದಲ್ಲೇ ದೇಶದ ರಾಕೆಟ್ ಮ್ಯಾನ್ ವಿಕ್ರಂ ಸಾರಾಭಾಯಿ, ಮಾಜಿ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಅವರ ದೂರದೃಷ್ಟಿ ಇಸ್ರೋ ಸಂಸ್ಥೆಗೆ ಬುನಾದಿ ಹಾಕಿತ್ತು. ಅಂದು ಅವರು ಬಿತ್ತಿದ ಬೀಜ ಇದು ವಿಶ್ವದಲ್ಲೇ ಬಾಹ್ಯಾಕಾಶ ಕ್ಷೇತ್ರದಲ್ಲಿ ದೊಡ್ಡ ಹೆಮ್ಮರವಾಗಿ ಬೆಳೆದಿದೆ ಎಂದು ಶಿವಕುಮಾರ್ ಅವರು ತಮ್ಮ ಶುಭ ಸಂದೇಶದಲ್ಲಿ ತಿಳಿಸಿದ್ದಾರೆ.



ಚಂದ್ರಯಾನ–3 ಯಶಸ್ವಿ ಲ್ಯಾಂಡಿಂಗ್ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಸಂಜೆ ಪೀಣ್ಯಾದ ಇಸ್ರೋ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ, ವಿಜ್ಞಾನಿಗಳನ್ನು ಅಭಿನಂದಿಸಿದರು. ಅಲ್ಲದೆ, ಕೆಲಕಾಲ ಇಸ್ರೋ ವಿಜ್ಞಾನಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಚಂದ್ರಯಾನ ಸಾಫ್ಟ್ ಲ್ಯಾಂಡಿಗ್‌ಗಾಗಿ ಅಯ್ಯಪ್ಪಸ್ವಾಮಿ ಮೊರೆಹೋಗಿದ್ದ ಇಸ್ರೋ ಅಧ್ಯಕ್ಷ ಸೋಮನಾಥ್

ಬೆಂಗಳೂರು: ಚಂದ್ರಯಾನ ಸಕ್ಸಸ್‌ಗಾಗಿ ದೇಶಾದ್ಯಂತ ಜನ ಪೂಜೆ ಸಲ್ಲಿಸುತ್ತಿದ್ದರು. ಅಂತೆಯೇ ಇದೀಗ ಇಸ್ರೋ ಅಧ್ಯಕ್ಷರು ಕೂಡ ಅಯ್ಯಪ್ಪ ಸ್ವಾಮಿ ದೇವರ ಮೊರೆ ಹೋಗಿದ್ದರು. ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಮಂಗಳವಾರ ಸಂಜೆ ಬೆಂಗಳೂರಿನ ಜಾಲಹಳ್ಳಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ಸಂಜೆ 5:30ರ ವೇಳೆಗೆ ಚಂದ್ರಯಾನ ಯಶಸ್ಸಿಗಾಗಿ ವಿಶೇಷ ಪೂಜೆ ಸಲ್ಲಿಸಿದ್ದರು. ಇವರೊಂದಿಗೆ ಇತರೆ ವಿಜ್ಞಾನಿಗಳು ಸಹಾ ಪೂಜೆ ಸಲ್ಲಿಕೆ ಮಾಡಿದ್ದು, ಚಂದ್ರಯಾನ ಯಶಸ್ವಿಯಾಗಲಿ ಎಂದು ಪ್ರಾರ್ಥಿಸಿದ್ದರು.


ಮೈಸೂರು ಮಿತ್ರ

ಆ.27ರಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ; ಪತ್ರಿಕಾ ದಿನಾಚರಣೆ

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ



ಎಂ. ವಿನೋದ್ | ಡಿ.ಜೆ. ವಿಜಯ್ | ಪಿ. ಶಿಲ್ಪಾ | ಎಸ್.ಆರ್.ಮಧುಸೂದನ್ | ಎಸ್.ಪುನೀತ್



ಕೆ.ಬಿ. ಗಣಪತಿ



ಗಾಯತ್ರಿ ವಿ.ರಾಜ್ | ಶಿವಮೂರ್ತಿ | ಎಂ.ಎಸ್.ಬಸವಣ್ಣ | ದಾಸೇಗೌಡ



ಬಿ. ರಾಘವೇಂದ್ರ | ಎಲ್. ಸತೀಶ್ | ಎಂ.ಆರ್. ಸುಬ್ರಮಣ್ಯ | ಕೆ. ಕುಮಾರ್

ಮೈಸೂರು, ಆ.23– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆ.27 ರಂದು ಬೆಳಗ್ಗೆ 11 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಏರ್ಪಡಿಸಲಾಗಿದೆ.

ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸಲಿದ್ದು, ಕಾರ್ಯಕ್ರಮ ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನವನ್ನು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನೆರವೇರಿಸುವರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಪ್ರತಿಭಾ ಪುರಸ್ಕಾರ ಮಾಡುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಜೆಎಸ್ಎಸ್ ಮಾಧ್ಯಮ ಸಂಸ್ಥೆ ಅಧ್ಯಕ್ಷ ಶ್ರೀಹರಿ ದ್ವಾರಕಾನಾಥ್ ಭಾಗವಹಿಸಲಿದ್ದು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ವಾರ್ಷಿಕ ಪ್ರಶಸ್ತಿ ಪುರಸ್ಕೃತರು: ವರ್ಷದ ಕನ್ನಡ ವರದಿ (ನಗರ)–ಎಂ.ವಿನೋದ್ (ವರದಿಗಾರ, ಪ್ರಜಾಸತ್ಯ), **ವರ್ಷದ ಕನ್ನಡ ವರದಿ (ಗ್ರಾಮಾಂತರ)**–ಡಿ.ಜೆ.ವಿಜಯ್ ದೊಡ್ಡಕೊಪ್ಪಲು (ವರದಿಗಾರ, ಕನ್ನಡಿಗರ ಪ್ರಜಾನುಡಿ, ಸಾಲಿಗ್ರಾಮ), **ವರ್ಷದ ಇಂಗ್ಲಿಷ್ ವರದಿ**–ಪಿ.ಶಿಲ್ಪಾ (ಸೀನಿಯರ್ ಪ್ರಿನ್ಸಿಪಲ್ ಕರೆಸ್ಪಾಂಡೆಂಟ್, ಡೆಕ್ಕನ್ ಹೆರಾಲ್ಡ್), **ವರ್ಷದ ಅತ್ಯುತ್ತಮ ಛಾಯಾಚಿತ್ರ**–ಎಸ್.ಆರ್. ಮಧುಸೂದನ್ (ಛಾಯಾಗ್ರಾಹಕ, ಟೈಮ್ಸ್ ಆಫ್ ಇಂಡಿಯಾ), **ವರ್ಷದ ಅತ್ಯುತ್ತಮ ವಿದ್ಯುನ್ಮಾನ ವರದಿ**–ಎಸ್.ಪುನೀತ್ (ಬ್ಯೂರೋ ಮುಖ್ಯಸ್ಥ, ಟಿವಿ5, ಮೈಸೂರು).

ಅಭಿನಂದಿತರು: ಜೀವಮಾನ ಸಾಧನೆ–ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ, ಗಾಯತ್ರಿ ವಿ.ರಾಜ್, ಸೀನಿಯರ್ ಕರೆಸ್ಪಾಂಡೆಂಟ್, ಡೆಕ್ಕನ್ ಹೆರಾಲ್ಡ್, **ವರ್ಷದ ಹಿರಿಯ ಉಪಸಂಪಾದಕ**–ಶಿವಮೂರ್ತಿ ಜುಪ್ತಿಮಠ, ಹಿರಿಯ ಸಹಾಯಕ ಸಂಪಾದಕ, ವಿಜಯ ಕರ್ನಾಟಕ, **ಹಿರಿಯ ಛಾಯಾಗ್ರಾಹಕ**–ಎಂ.ಎಸ್.ಬಸವಣ್ಣ, ಛಾಯಾಗ್ರಾಹಕ, ಕನ್ನಡಪ್ರಭ, **ವರ್ಷದ ಗ್ರಾಮಾಂತರ ಪತ್ರಕರ್ತ** –ದಾಸೇಗೌಡ, ವರದಿಗಾರ, ಆಂದೋಲನ, ಸರಗೂರು ತಾ., **ವರ್ಷದ ಹಿರಿಯ ವರದಿಗಾರ ದೃಶ್ಯ ಮಾಧ್ಯಮ** –ಬಿ.ರಾಘವೇಂದ್ರ, ಬ್ಯೂರೋ ಮುಖ್ಯಸ್ಥ ಬಿಟಿವಿ, ಮೈಸೂರು, **ವರ್ಷದ ಹಿರಿಯ ಕ್ಯಾಮರಾಮನ್ ದೃಶ್ಯ ಮಾಧ್ಯಮ** –ಎಲ್.ಸತೀಶ್, ಕ್ಯಾಮರಾಮನ್, ಇಂಡಿಯನ್ ಟಿವಿ, **ವರ್ಷದ ಹಿರಿಯ ಪತ್ರಿಕಾ ವಿತರಕ** –ಎಂ.ಆರ್.ಸುಬ್ರಹ್ಮಣ್ಯ (ಪೇಪರ್ ಸುಬ್ಬಣ್ಣ), **ಮುದ್ರಣ ವಿಭಾಗ (ಪ್ರಿಂಟಿಂಗ್ ಪ್ರೆಸ್)**– ಕೆ.ಕುಮಾರ್ (ಮೈಸೂರು ಮಿತ್ರ).

ಸೆ.2ರಿಂದ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಶತೋತ್ತರ–ಸುವರ್ಣ–ರಜತ ಮಹೋತ್ಸವ

ಮೈಸೂರು,ಆ.23(ಪಿಎಂ)– ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಶತೋತ್ತರ–ಸುವರ್ಣ–ರಜತ ಮಹೋತ್ಸವ 2023 ಅನ್ನು ಸೆ.2ರಿಂದ 4ರವರೆಗೆ ಮೂರು ದಿನಗಳ ಕಾಲ ಮೈಸೂರಿನ ಕಲಾಮಂದಿರ ದಲ್ಲಿ ಆಯೋಜಿಸಲಾಗಿದೆ ಎಂದು ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ.ನರ ಹರಿಬಾಬು ತಿಳಿಸಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸಂಸ್ಥೆಯ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1854ರಲ್ಲಿ ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆಯಾಗಿ ಸದ್ವಿದ್ಯಾ ಸಂಸ್ಥೆ ಪ್ರಾರಂಭವಾಗಿದ್ದು, ಇದೀಗ 169 ವರ್ಷಗಳು ತುಂಬಿವೆ. 1973ರಲ್ಲಿ ಸಂಸ್ಥೆಯ ಪ್ರೌಢಶಾಲೆ ಪ್ರಾರಂಭವಾಯಿತು. ಅದಕ್ಕೀಗ 50 ವರ್ಷಗಳು ತುಂಬಿವೆ. ಹಾಗೆಯೇ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜು 1999ರಲ್ಲಿ ಪ್ರಾರಂಭವಾಗಿದ್ದು, ಅದೀಗ 25ನೇ ವರ್ಷಕ್ಕೆ ಕಾಲಿಟ್ಟಿದೆ ಎಂದರು.

ಹಾಗಾಗಿ ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆಯ ಶತೋತ್ತರ, ಸದ್ವಿದ್ಯಾ ಪ್ರೌಢಶಾಲೆಯ ಸುವರ್ಣ ಮಹೋತ್ಸವ ಹಾಗೂ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವ ಒಳಗೊಂಡಂತೆ ಒಟ್ಟಾಗಿ 'ಶತೋತ್ತರ–ಸುವರ್ಣ–ರಜತ ಮಹೋತ್ಸವ' ಶೀರ್ಷಿಕೆಯಡಿ ಸಮಾರಂಭ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಸೆ.2ರಂದು ಬೆಳಗ್ಗೆ 10ಕ್ಕೆ ಲೇಖಕಿಯೂ ಆದ ಚಿಂತಕಿ ಡಾ.ವೀಣಾ ಬನ್ನಂಜೆ ಮಹೋತ್ಸವದ ಉದ್ಘಾಟನೆ ನೆರವೇರಿಸಲಿದ್ದಾರೆ. ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಪ್ರೊ.ವಿ.ಕೆ.ಗೋಪಾಲಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸ್ಥೆಗಳ ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ ಉಪಸ್ಥಿತರಿರಲಿದ್ದಾರೆ. ಮಹೋತ್ಸವದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಹಳೇ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಸೆ.3ರಂದು ಬೆಳಗ್ಗೆ 10ಕ್ಕೆ 'ಸುರದ್ರುಮ' ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಎನ್ಆರ್ ಗ್ರೂಪ್ ಅಧ್ಯಕ್ಷ ಆರ್. ಗುರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ದೇಶಕಿ ಸಿಂಧು ಬಿ.ರೂಪೇಶ್ ಪಾಲ್ಗೊಳ್ಳಲಿದ್ದಾರೆ.

ಸೆ.4ರಂದು ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಸಂಸ್ಥಾನ ಮಠದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ತಿಳಿಸಿದರು.

ಆ.27ರಂದು ವೀಣಾ ವಾದನ: ಮಹೋತ್ಸವದ ಅಂಗವಾಗಿ ಆ.27ರಂದು ಸಂಜೆ 6ಕ್ಕೆ ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಟಿ.ಪಿ.ಕೈಲಾಸಂ ರಂಗ ಮಂಟಪದಲ್ಲಿ ವಿದುಷಿ ಡಾ.ಜಯಂತಿ ಕುಮರೇಶ್ ಅವರಿಂದ ವೀಣಾ ವಾದನ ಕಾರ್ಯಕ್ರಮ ಆಯೋಜಿಸಲಾಗಿದೆ. ವಿದ್ವಾನ್ ಕುಮರೇಶ್ (ವಯೊಲಿನ್), ವಿದ್ವಾನ್ ಅರ್ಜುನ್ ಕುಮಾರ್ (ಮೃದಂಗ) ಹಾಗೂ ವಿದ್ವಾನ್ ಗುರುಪ್ರಸನ್ನ (ಖಂಜಿರ) ಪಕ್ಕವಾದ್ಯದ ಸಹಕಾರ ನೀಡಲಿದ್ದಾರೆ ಎಂದು ಹೇಳಿದರು.

ಅವಿಸ್ಮರಣೀಯ: ಸ್ವಾಮಿ ವಿವೇಕಾನಂದರು ಅಮೇರಿಕದ ಚಿಕಾಗೋ ಸಮ್ಮೇಳನಕ್ಕೆ ಹೋಗುವ ಮೊದಲು ಸಂಸ್ಥೆಗೆ ಭೇಟಿ ನೀಡಿ, ಪ್ರವಚನ ನೀಡಿದ್ದರು. ತಾತಯ್ಯನವರು ಹಲವು ವರ್ಷಗಳು ಸಂಸ್ಥೆ ಅಧ್ಯಕ್ಷರಾಗಿ ಮುನ್ನಡೆಸಿದ್ದರು. ಇದಲ್ಲದೆ ಖ್ಯಾತ ಸಾಹಿತಿಗಳಾದ ಸಂಸ, ಟಿ.ಪಿ.ಕೈಲಾಸಂ ಸೇರಿದಂತೆ ಹಲವು ಮಹನೀಯರು ಇಲ್ಲಿ ವಾಸ್ತವ್ಯ ಹೂಡಿ ಸಾಹಿತ್ಯದ ಗಂಗೆಯನ್ನು ಹರಿಸಿರುವುದು ಮತ್ತೊಂದು ವಿಶೇಷ. ಪ್ರಸ್ತುತ ಸಂಸ್ಥೆಯಲ್ಲಿ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಂಸ್ಥೆ ಕಾರ್ಯದರ್ಶಿಯಾಗಿದ್ದ ಪ್ರೊ.ಕೆ.ವಿ.ಅರ್ಕನಾಥ್ ಅವಧಿಯಲ್ಲಿ ಸಂಸ್ಥೆಯು ಶೈಕ್ಷಣಿಕವಾಗಿ ವೇಗವಾಗಿ ಬೆಳೆಯಿತು ಎಂದು ಸ್ಮರಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಸಿ.ಆರ್. ನಾಗರಾಜ್, ಆಡಳಿತ ಮಂಡಳಿ ಸದಸ್ಯ ಎಂ.ಡಿ.ಗೋಪಿನಾಥ್, ಸಂಸ್ಥೆಯ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ವೈ.ಆರ್.ರಮೇಶ್, ಪ್ರೌಢಶಾಲೆ ಮುಖ್ಯ ಶಿಕ್ಷಕ ರಾಮಚಂದ್ರ ಭಟ್, ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆ ಮುಖ್ಯ ಶಿಕ್ಷಕಿ ಸುಬ್ಬಮ್ಮ ಗೋಷ್ಠಿಯಲ್ಲಿದ್ದರು.



ಮೈಸೂರಿನ ಸದ್ವಿದ್ಯಾ ಶಿಕ್ಷಣ ಸಂಸ್ಥೆಯಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ.ನರಹರಿಬಾಬು (ಎಡದಿಂದ 4ನೇಯವರು) ಮಾತನಾಡಿದರು. ಎಡದಿಂದ, ಸದ್ವಿದ್ಯಾ ಪ್ರೌಢಶಾಲೆ ಮುಖ್ಯ ಶಿಕ್ಷಕ ರಾಮಚಂದ್ರ ಭಟ್, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ವೈ.ಆರ್.ರಮೇಶ್, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎಂ.ಡಿ.ಗೋಪಿನಾಥ್, ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆ ಮುಖ್ಯ ಶಿಕ್ಷಕಿ ಸುಬ್ಬಮ್ಮ ಅವರನ್ನು ಚಿತ್ರದಲ್ಲಿ ಕಾಣಬಹುದು.

ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಸಾಧನೆಗೆ ಶುಭಾಶಯ




ಮೈಸೂರು, ಆ. 23– ಪ್ರಪಂಚದ ಇತಿಹಾಸದಲ್ಲಿಯೇ ಹೊಸ ಇತಿಹಾಸವನ್ನು ಬರೆಯಲು ಹೊರಟಿರುವ ಇಸ್ರೋದ ವಿಜ್ಞಾನಿಗಳ ಸಾಧನೆಗೆ ಶುಭಾಶಯಗಳನ್ನು ಹೇಳುವ ವಿನೂತನ ಕಾರ್ಯಕ್ರಮ ಸುಪ್ರೀಮ್ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸುಪ್ರೀಮ್ ಶಾಲೆಯ ಭವಿಷ್ಯದ ವಿಜ್ಞಾನಿಗಳು ಸ್ವಪ್ರಯತ್ನದಿಂದ ತಯಾರಿಸಿದ ಕೃತಕ ಉಪಗ್ರಹಗಳನ್ನು ಉಡಾಯಿಸುವುದರ ಮೂಲಕ ಚಂದ್ರಯಾನ–3 ಹೊಸ ಭಾಷ್ಯ ಬರೆದರು. ಶಾಲೆಯ ಸಂಸ್ಥಾಪನಾ ಅಧ್ಯಕ್ಷ ಡಾ.ಎಂ.ಎಲ್. ರವೀಂದ್ರಸ್ವಾಮಿ ದೊಡ್ಮನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿಶ್ವಗುರು ಸ್ಥಾನದಲ್ಲಿ ಭಾರತವಿರುವುದನ್ನು ಕೊಂಡಾಡಿದರು. ಪ್ರಪಂಚದಲ್ಲಿರುವ 226 ದೇಶಗಳ ಪೈಕಿ 'ಭಾರತ ಶಾಲಿವಾಹನ ಶಕೆಯಲ್ಲಿ ವಿಕ್ರಮ ಶಕೆ ಬರೆಯಲಿರುವ ವಿಕ್ರಮ್ ಲ್ಯಾಂಡರ್ ಅನ್ನು' ಚಂದ್ರನ ಮೇಲಕ್ಕೇರಿಸುತ್ತಿರುವುದು ಭಾರತದ ಇತಿಹಾಸದಲ್ಲಿ "ಸುವರ್ಣಾಕ್ಷರದಲ್ಲಿ" ಬರೆದಿಡುವ ದಿನವಾಗಿದೆ ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲರು, ಉಪ ಪ್ರಾಂಶುಪಾಲರು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿ ಚಂದ್ರಯಾನ–3 ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಶೈಕ್ಷಣಿಕ ಯಶಸ್ಸಿಗೆ ಪ್ರಯತ್ನ, ಭಗವಂತನ ಅನುಗ್ರಹ ಎರಡೂ ಮುಖ್ಯ

ಉಡುಪಿ ಪೇಜಾವರ ಶ್ರೀ ವಿಶ್ವ ಪ್ರಸನ್ನತೀರ್ಥ ಸ್ವಾಮಿಗಳ ಹಿತನುಡಿ



ಮೈಸೂರು, ಆ. 23– ಒಂದು ಪಕ್ಷಿಯ ಯಶಸ್ವಿ ಹಾರಾಟಕ್ಕೆ ಎರಡು ರೆಕ್ಕೆಗಳು ಹೇಗೆ ಮುಖ್ಯವೋ ಹಾಗೆ ಶೈಕ್ಷಣಿಕ ಯಶಸ್ಸಿಗೆ ಭಗವಂತನ ಅನುಗ್ರಹ ಮತ್ತು ಪ್ರಯತ್ನ ಅಷ್ಟೇ ಮುಖ್ಯ ಹಾಗೂ ಪ್ರಾರಂಭದಿಂದಲೇ ಅಭ್ಯಾಸ ಮಾಡುತ್ತಾ ಒಳ್ಳೆಯ ವಿದ್ಯೆ ಸಂಪಾದನೆಯನ್ನು ಮಾಡಬೇಕು ಎಂದು ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮಿಗಳು ತಿಳಿಸಿದರು.

ಮೈಸೂರಿನ ಹರಿ ವಿದ್ಯಾಲಯದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಶ್ರೀಗಳು ವಿದ್ಯಾರ್ಥಿಗಳಿಗೆ ಆಶೀರ್ವಚನವನ್ನು ನೀಡಿದರು. ವಿದ್ಯಾರ್ಥಿಗಳ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಪೂಜ್ಯ ಶ್ರೀಗಳು ಸೂಕ್ತ ಉತ್ತರವನ್ನು ನೀಡಿದರು. ಈ ಸಂದರ್ಭದಲ್ಲಿ ಹರಿ ವಿದ್ಯಾಲಯದ ಕಾರ್ಯದರ್ಶಿ ಶ್ರೀನಿವಾಸ ಹೊಸಮನೆ, ಪ್ರಾಂಶುಪಾಲರಾದ ಡಾ.ಎನ್.ಭಾರತಿ ಶಂಕರ್, ವಿದ್ಯಾರ್ಥಿಗಳು, ಶಿಕ್ಷಕರು ಹಾಜರಿದ್ದರು.

ನಾಡಿ ಪರೀಕ್ಷೆ ಕಾರ್ಯಕ್ರಮ

ಮೈಸೂರು, ಆ. 23– ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಆ. 28 ಮತ್ತು 29 ರಂದು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ನಾಡಿ ಪರೀಕ್ಷೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9845723350 ಸಂಪರ್ಕಿಸಬಹುದು.



ಮೈಸೂರು ನಗರದ ಹಾಪ್‌ಕಾಮ್ಸ್ ಕಚೇರಿಯಲ್ಲಿ ವರ್ಗಾವಣೆಯಾದ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೆ.ರುದ್ರೇಶ್ ಹಾಗೂ ಅವರ ಸ್ಥಾನಕ್ಕೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿರುವ ಎಸ್. ಮಂಜುನಾಥ್ ಅಂಗಡಿ ಅವರನ್ನು ಹಾಪ್‌ಕಾಮ್ಸ್ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ಉಪಾಧ್ಯಕ್ಷ ಆರ್. ಸರ್ವೇಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಉಪನಿಬಂಧಕರಾದ ಮಂಜುನಾಥ್ ಸಿಂಗ್, ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕರಾದ ಎಂ.ಆರ್. ಚೇತನ್, ನಿರ್ದೇಶಕ ಹೊಸಹುಂಡಿ ರಘು, ಬಿ.ಪಿ. ಬೋರೇಗೌಡ, ಸೂರ್ಯಕುಮಾರ್, ಬಿ.ಎನ್.ಪ್ರಭುಸ್ವಾಮಿ, ಟಿ.ರಾಮೇಗೌಡ, ಎಸ್.ಆರ್.ಶ್ರೀನಿವಾಸ್, ವೈ.ಜಿ. ಮಹೇಂದ್ರ, ಬಿ. ಪದ್ಮನಾಭ, ಮಹದೇವ ಜೆ., ಕೆ.ಸುಜಾತ, ನಳಿನಿ ಎಸ್.ಜಿ, ಹೆಚ್.ಎಸ್. ಚಂದ್ರೇಗೌಡ, ವ್ಯವಸ್ಥಾಪಕ ಸುರೇಂದ್ರ ಉಪಸ್ಥಿತರಿದ್ದರು.



ಮೈಸೂರು ಜಿಲ್ಲೆಯ ಪರಿಶಿಷ್ಟ ವರ್ಗಗಳ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಎಂ.ಕೆ. ಮಲ್ಲೇಶ್ ಅವರನ್ನು ತಾಲೂಕು ಕಲ್ಯಾಣಾಧಿಕಾರಿ ಮೊಹಮ್ಮದ್ ಶಫೀರ್, ಸಿದ್ದೇಗೌಡ, ಹನುಮಂತರಾಯಪ್ಪ, ಭರತ್ ಹಾಗೂ ಕಚೇರಿ ಸಿಬ್ಬಂದಿ ಅಭಿನಂದಿಸಿದರು.

ನವದೆಹಲಿ ನಾಟಕೋತ್ಸವದಲ್ಲಿ 'ಕೃಷ್ಣೇಗೌಡರ ಆನೆ' ನಾಟಕ ಪ್ರದರ್ಶನ

ಮೈಸೂರು, ಆ. 23– ಪ್ರಖ್ಯಾತ ಲೇಖಕರಾದ ಪೂರ್ಣಚಂದ್ರ ತೇಜಸ್ವಿ ಅವರ ರಚನೆಯ 'ಕೃಷ್ಣೇಗೌಡರ ಆನೆ' ನಾಟಕ ಸೆ. 23 ರಂದು ನವದೆಹಲಿಯ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಳ್ಳಲಿದೆ. ಮಂಡ್ಯ ರಮೇಶ್ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿರುವ ಈ ನಾಟಕದ ರಂಗರೂಪ ಶಶಿಕಾಂತ ಯಡಹಳ್ಳಿ ಹಾಗೂ ವಿನ್ಯಾಸ ನಟನ ರಂಗಶಾಲೆಯ ಪ್ರಾಂಶುಪಾಲ ಮೇಘ ಸಮೀರ ಅವರದ್ದು. ಕಲಾವಿದ ಚೇತನ್ ಸಿಂಗಾನಲ್ಲೂರು ಅವರ ಸಾಂಗತ್ಯದಲ್ಲಿ ನಟನದ 20 ಕಲಾವಿದರ ತಂಡ ಪ್ರದರ್ಶನ ನೀಡಲು ನವದೆಹಲಿಗೆ ತೆರಳಲಿದೆ. ಹೆಚ್ಚಿನ ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ಗ್ರಾಮೀಣ ಪ್ರದೇಶದ ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕಿದೆ

ದೈಹಿಕ ಶಿಕ್ಷಣಾಧಿಕಾರಿ ಡಾ.ಪಿ.ಎನ್.ಗಣೇಶ್ ಕುಮಾರ್ ಅಭಿಮತ



ಮೈಸೂರು, ಆ.23–ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಥ ಕ್ರೀಡಾ ಬಾಲಪ್ರತಿಭೆಗಳಿದ್ದು, ಅವರ ಪ್ರತಿಭೆಯನ್ನು ಹೊರತೆಗೆಯಲು ಅಗತ್ಯವಿರುವ ಸೂಕ್ತ ವಾತಾವರಣ ಕಲ್ಪಿಸಿ, ಪ್ರೋತ್ಸಾಹಿಸಿದರೆ ಅವರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಬಲ್ಲರು ಎಂದು ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಡಾ.ಪಿ.ಎನ್. ಗಣೇಶ್ ಕುಮಾರ್ ಅಭಿಪ್ರಾಯಪಟ್ಟರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮೈಸೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ವರುಣಾದಲ್ಲಿ ನಡೆದ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಹಿರಿಯ ಪ್ರಾಥಮಿಕ ಶಾಲೆಗಳ ಹೋಬಳಿ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಗರ ವ್ಯಾಪ್ತಿಯ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗಿಂತ, ಗ್ರಾಮೀಣ ಪ್ರದೇಶಗಳಲ್ಲಿ ಓದುವ ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯ ಅಧಿಕವಿರುತ್ತದೆ. ಆದರೆ, ಈ ವಿದ್ಯಾರ್ಥಿಗಳಿಗೆ ಕ್ರೀಡಾಂಗಣ ಮತ್ತು ಕ್ರೀಡಾ ಸಾಮಗ್ರಿಗಳ ಕೊರತೆಯಿದೆ. ಈ ಅಗತ್ಯ ಸೌಲಭ್ಯಗಳ ಜೊತೆಗೆ ಸೂಕ್ತ ಮಾರ್ಗದರ್ಶನ ದೊರೆತರೆ, ಅವರು ಉತ್ತಮ ಸಾಧನೆ ಮಾಡಬಲ್ಲರು ಎಂದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ. ಸತೀಶ್ ಜವರೇಗೌಡ ಮಾತನಾಡಿ, ಪಠ್ಯದ ಕಲಿಕೆ ಮನೋವಿಕಾಸಕ್ಕೆ ತಳಹದಿ ಹಾಕಿದರೆ, ಕ್ರೀಡಾ ಚಟುವಟಿಕೆಗಳು ದೈಹಿಕ ವಿಕಾಸಕ್ಕೆ ನೆರವಾಗುತ್ತವೆ. ಶಾಲಾ ಕಲಿಕೆಯನ್ನು ಉಲ್ಲಾಸದಾಯಕಗೊಳಿಸುತ್ತವೆ. ಆದ್ದರಿಂದ, ವಿದ್ಯಾರ್ಥಿಗಳು ಕ್ರೀಡಾಸಕ್ತಿ ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಸಮಾರಂಭದಲ್ಲಿ ಶಿಕ್ಷಣ ಸಂಯೋಜಕ ಶಿವಕುಮಾರ್ ಆರಾಧ್ಯ, ಅಹಿಂದ ಮುಖಂಡ ಜವರಪ್ಪ, ಬನಶಂಕರಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸೋಮಣ್ಣ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಖಜಾಂಚಿ ಮಹದೇವ್, ತಾಲೂಕು ಸಂಘದ ಅಧ್ಯಕ್ಷ ರಘು ಮಾತನಾಡಿದರು.

ವಲಯದ ಸಂಪನ್ಮೂಲ ವ್ಯಕ್ತಿಗಳಾದ ಎಸ್. ದೀಪು, ಮಹದೇವಸ್ವಾಮಿ, ಹೆಚ್.ಎಸ್. ಶಿಲ್ಪ, ಶಿಕ್ಷಕರ ಸಂಘದ ನಿರ್ದೇಶಕರಾದ ಅನಿಲ್‌ಕುಮಾರ್, ಶಿವಪ್ಪ, ಬಿ.ಐ.ಆರ್.ಟಿ. ಸಿದ್ದಲಿಂಗಮೂರ್ತಿ ಮತ್ತಿತರರು ಉಪಸ್ಥಿತರಿದ್ದರು. ವರುಣಾ ಹೋಬಳಿ ಮಟ್ಟದ ಕ್ರೀಡಾಕೂಟದ ಸಂಘಟನೆಯ ಜವಾಬ್ದಾರಿಯನ್ನು ಬನಶಂಕರಿ ವಿದ್ಯಾ ಸಂಸ್ಥೆ ವಹಿಸಿಕೊಂಡಿತ್ತು.

ಪ್ರಾಥಮಿಕ ಶಾಲಾ ವಿಭಾಗದ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ವೈಯಕ್ತಿಕ ಮತ್ತು ಗುಂಪು ಆಟೋಟ ಸ್ಪರ್ಧೆಗಳು ಯಶಸ್ವಿಯಾಗಿ ಜರುಗಿದವು. ವಿಜೇತರಿಗೆ ಪ್ರಮಾಣ ಪತ್ರ ಮತ್ತು ಪದಕಗಳನ್ನು ವಿತರಿಸಲಾಯಿತು.

ಆ. 28, 'ಭವಿಷ್ಯನಿಧಿ ನಿಮ್ಮ ಹತ್ತಿರ' ಜಿಲ್ಲಾ ವ್ಯಾಪ್ತಿ ಕಾರ್ಯಕ್ರಮ

ಮೈಸೂರು, ಆ. 23– ಕಾರ್ಮಿಕ ಭವಿಷ್ಯನಿಧಿ ಸಂಘಟನೆ, ಮೈಸೂರು ಪ್ರಾದೇಶಿಕ ಕಚೇರಿ ವತಿಯಿಂದ 'ಭವಿಷ್ಯ ನಿಧಿ ನಿಮ್ಮ ಹತ್ತಿರ' 2.0 ಅಡಿಯಲ್ಲಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮವನ್ನು ಆ. 28 (ಸೋಮವಾರ) ಬೆಳಗ್ಗೆ 9ರಿಂದ ತಾಲೂಕು ಪಂಚಾಯತ್, ಹಾಸನ–ಮೈಸೂರು ರಸ್ತೆ, ಕೆ.ಆರ್. ನಗರ, ಮೈಸೂರು ಜಿಲ್ಲೆ ಹಾಗೂ ಟಿಎಪಿಸಿಎಂಎಸ್ ಲಿಮಿಟೆಡ್, ಬಿ.ಎಂ. ರಸ್ತೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಮತ್ತು ಹಳೆಯ ಕೆಡಿಪಿ ಆಡಿಟೋರಿಯಂ, ಡಿಸಿ ಕಚೇರಿ, ಚಾಮರಾಜನಗರ ಜಿಲ್ಲೆ ಇಲ್ಲಿ ಹಮ್ಮಿಕೊಳ್ಳಲಾಗಿದೆ. ಪಿಎಫ್ ಸದಸ್ಯರು, ಪಿಂಚಣಿದಾರರು, ಉದ್ಯೋಗದಾತರು ಈ ಸಭೆಗೆ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಿ, ಪರಿಹಾರ ಕಂಡುಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸಾರ್ವಜನಿಕ ಸಂಪರ್ಕ ಅಧಿಕಾರಿ, ದೂ. 0821–2599200/222 ಮೂಲಕ ಸಂಪರ್ಕಿಸಬಹುದು. ಇಲ್ಲವೇ ಕ್ಷೇತ್ರೀಯ ಭವಿಷ್ಯ ನಿಧಿ ಕಚೇರಿ, ಮೈಸೂರಿನ ಸಾಮಾಜಿಕ ಮಾಧ್ಯಮ ವೇದಿಕೆಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಆಧುನಿಕ ಜೀವನ ಪದ್ಧತಿಯಿಂದ ಬುಡಕಟ್ಟು ಸಮುದಾಯದ ಮೇಲೆ ಪರಿಣಾಮ



ಮೈಸೂರು, ಆ.23(ಎಸ್‌ಪಿಎನ್)– ಅಭಿವೃದ್ಧಿ, ತಂತ್ರಜ್ಞಾನ, ಆಧುನಿಕ ಜೀವನ ಪದ್ಧತಿ ಎಂಬ ಪದಗಳಿಂದ ಬುಡಕಟ್ಟು ಸಮುದಾಯದ ಸಂಸ್ಕೃತಿ, ಜೀವನ ಶೈಲಿ ದುಬಾರಿಯಾಗುತ್ತಿದೆ ಎಂದು ಪ್ರೊ.ಕೆ.ಎಂ. ಮೇತ್ರಿ ಬೇಸರ ಹೊರಹಾಕಿದರು.

ಮೈಸೂರು ಹೊರವಲಯದಲ್ಲಿರುವ ರಾಜರಾಜೇಶ್ವರಿ ನಗರದ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಕಚೇರಿ ಆವರಣದಲ್ಲಿ ಆಯೋಜಿಸಿದ್ದ 'ಭಾರತದಲ್ಲಿ ಬುಡಕಟ್ಟು ಪರಿವರ್ತನೆ, ಸಮಸ್ಯೆಗಳು ಹಾಗೂ ಸವಾಲುಗಳು ಕುರಿತಾದ ಎರಡು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಬುಡಕಟ್ಟು ಜನರು ಆಧುನಿಕ ಜೀವನ ಪದ್ಧತಿಯನ್ನು ಒಪ್ಪಿಕೊಂಡ ಪರಿಣಾಮ ತಮ್ಮತನವನ್ನು ಕಳೆದುಕೊಂಡು ಪರಿವರ್ತನೆಯಾಗಿರುವ ಸಂಸ್ಕೃತಿ ಒಪ್ಪಿಕೊಳ್ಳುತ್ತಿದ್ದಾರೆ. ಹಾಗಾಗಿ ಸಣ್ಣ ಸಮುದಾಯಗಳ ಬದುಕು ಮತ್ತು ಸಂಸ್ಕೃತಿ ರಕ್ಷಣೆಗೆ ಧ್ವನಿಯುಳ್ಳ ಸಮುದಾಯಗಳು ಬರಬೇಕಾಗಿದೆ ಎಂದರು.

ಪ್ರಸ್ತುತ ಮೀಸಲಾತಿ ವ್ಯವಸ್ಥೆಯಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಅಸಾಧ್ಯ ಎಂದ ಅವರು, ಸರ್ಕಾರ ಅವರನ್ನು ಸಾಲಮುಕ್ತರನ್ನಾಗಿ ಮಾಡಿ, ಮುಖ್ಯವಾಹಿನಿಗೆ ತರುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಸಂಸ್ಕೃತಿ ಚಿಂತಕ ಡಾ.ಜಯರಾಜನ್ ಮಾತನಾಡಿ, ಕೇರಳದಲ್ಲಿ ಮಾವಿದನ್ ಬುಡಕಟ್ಟು ಸಮಾಜದ ಭಾಷೆ ನಶಿಸಿ ಹೋಗಿದೆ. ಈಗಿನ ಯುವಕರಿಗೆ ಆ ಭಾಷೆಯ ಬಗ್ಗೆ ತಿಳಿವಳಿಕೆಯೇ ಇಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಬುಡಕಟ್ಟು ಸಮುದಾಯದ ಬದುಕು, ಸಂಸ್ಕೃತಿ, ಉಪಭಾಷೆಗಳು ನಶಿಸುತ್ತವೆ. ಹಾಗಾಗಿ ರಾಜ್ಯ ಸರ್ಕಾರ ರಕ್ಷಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಪ್ರೊ.ಎಚ್.ಕೆ.ಭಟ್ ಮಾತನಾಡಿ, ರಾಜ್ಯ ಬುಡಕಟ್ಟು ಸಂಶೋಧನಾ ಅಧ್ಯಯನ ಸಂಸ್ಥೆಯ ಅಧ್ಯಯನಗಳನ್ನು ಅಚ್ಚುಕಟ್ಟಾಗಿ ನಡೆಸಬೇಕು. ಎಲ್ಲ ಬುಡಕಟ್ಟು ಸಮುದಾಯಗಳ ಏಳಿಗೆಗೆ ಸಹಕಾರಿಯಾಗುವಂತಹ ಕೆಲಸ ಕೈಗೆತ್ತಿಕೊಳ್ಳಬೇಕು. ಈ ಕ್ಷೇತ್ರದ ತಜ್ಞರು ಸಂಶೋಧನೆ ಕುರಿತು ವಿಮರ್ಶೆಗೊಳಪಡಿಸಿ, ಇವರ ಗಂಭೀರ ಸಮಸ್ಯೆಗಳಿಗೆ ತಾರ್ಕಿಕ ಅಂತ್ಯ ಕಾಣುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಎಲ್.ಶ್ರೀನಿವಾಸ ಮಾತನಾಡಿ, ಭಾರತದಲ್ಲಿ ಬುಡಕಟ್ಟು ಪರಿವರ್ತನೆ, ಸಮಸ್ಯೆಗಳು ಹಾಗೂ ಸವಾಲುಗಳು ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಯಶಸ್ವಿಯಾಗಿದ್ದು, ಈ ವಿಚಾರ ಸಂಕಿರಣದಲ್ಲಿ ಒಟ್ಟು 10 ಗೋಷ್ಠಿಗಳು ನಡೆದಿವೆ. 65 ಸಂಶೋಧನಾ ವರದಿಗಳು ಮಂಡನೆಯಾಗಿವೆ.

ಮಹಾರಾಷ್ಟ್ರ, ಕೇರಳ, ದೆಹಲಿ, ತೆಲಂಗಾಣ, ಹೈದರಾಬಾದ್, ಅಸ್ಸಾಂ ಹಾಗೂ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ ಬಂದಿದ್ದ ಸಂಶೋಧಕರು, ಬುಡಕಟ್ಟು ಸಮುದಾಯದ ಸಂಶೋಧನಾ ತಜ್ಞರು, ಅರಣ್ಯ ಹಕ್ಕು ಕಾಯ್ದೆ, ಬುಡಕಟ್ಟು ಶಿಕ್ಷಣ ಪಾರಂಪರಿಕ ಗಿಡಮೂಲಿಕೆ, ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಯೋಜನೆ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪ್ರಬಂಧಗಳ ಮಂಡಿಸಿ ಚರ್ಚಿಸಿದರು. ವೇದಿಕೆಯಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕ ಬಿ.ಎಸ್. ಪ್ರಭಾ ಅರಸ್, ಸಂಶೋಧನಾಧಿಕಾರಿ ಸಿ. ಶಿವಕುಮಾರ್, ಡಾ. ಮೋಹನ್‌ಕುಮಾರ್ ಇದ್ದರು.

ಮೈಸೂರು ಮಿತ್ರ ಗುರುವಾರ 24 ಆಗಸ್ಟ್ 2023

ಏಡಿ ಹಿಡಿಯಲೋದ ಬಾಲಕ ಜಲಸಮಾಧಿ

ಹಾರಂಗಿ ಎಡದಂಡೆ ನಾಲೆಯಲ್ಲಿ ಪ್ರತಿಭಾವಂತನ ದುರಂತ ಅಂತ್ಯ



ಅನಿತ್



ಮಡಿಕೇರಿ/ಕುಶಾಲನಗರ, ಆ.23– ಶಾಲಾ ವಿದ್ಯಾರ್ಥಿಯೋರ್ವ ಏಡಿ ಹಿಡಿಯಲು ಹೋಗಿ ಕಾಲು ಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ಕುಶಾಲನಗರ ತಾಲೂಕಿನ ಹಾರಂಗಿ ಎಡದಂಡೆ ನಾಲೆಯಲ್ಲಿ ನಡೆದಿದೆ.

ಕುಶಾಲನಗರ ಬ್ಯಾಡಗೊಟ್ಟದಲ್ಲಿರುವ ದಿಡ್ಡಳ್ಳಿ ನಿರಾಶ್ರಿತರ ಕೇಂದ್ರ ನಿವಾಸಿ ಅಣ್ಣಪ್ಪ ಹಾಗೂ ರಾಣಿ ದಂಪತಿ ಪುತ್ರ, ಸದ್ಗುರು ಅಪ್ಪಯ್ಯ ಸ್ವಾಮಿ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಅನಿತ್(14) ನಾಲೆಯಲ್ಲಿ ಮುಳುಗಿ ಮೃತಪಟ್ಟ ಬಾಲಕ.

ಘಟನೆ ವಿವರ: ಬುಧವಾರ ಬೆಳಗ್ಗೆ 8:30ರ ಸಮಯದಲ್ಲಿ ಬ್ಯಾಡಗೊಟ್ಟದಲ್ಲಿರುವ ದಿಡ್ಡಳ್ಳಿ ನಿರಾಶ್ರಿತರ ಕೇಂದ್ರ ಬಳಿಯಿಂದ ಸ್ನೇಹಿತರೊಂದಿಗೆ ಶಾಲೆಗೆ ಹೋಗುತ್ತಿದ್ದ ಸಂದರ್ಭ ಹಾರಂಗಿ ನಾಲೆಯಲ್ಲಿ ಏಡಿಯೊಂದು ಅನಿತ್‌ಗೆ ಕಾಣಿಸಿಕೊಂಡಿದೆ. ಏಡಿಯನ್ನು ಕಂಡ ಅನಿತ್ ತಮ್ಮ ಗೆಳೆಯರಿಗೆ ಏಡಿ ಹಿಡಿದುಕೊಂಡು ಬರುವುದಾಗಿಯೂ, ತನಗಾಗಿ ಸ್ವಲ್ಪ ಸಮಯ ಕಾಯುವಂತೆ ಹೇಳಿ ನಾಲೆ ಸಮೀಪವೇ ಶಾಲಾ ಬ್ಯಾಗ್ ಇಟ್ಟು ನಾಲೆ ಕಡೆ ಹೋಗಿದ್ದಾನೆ. ಈ ವೇಳೆ ಆಕಸ್ಮಿಕವಾಗಿ ಆಯತಪ್ಪಿ ನಾಲೆಗೆ ಬಿದ್ದು, ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ. ಆತನನ್ನು ರಕ್ಷಿಸಲು ಸ್ನೇಹಿತರು ನಾಲೆಗೆ ಇಳಿದರೂ ಯಾವುದೇ ಪ್ರಯೋಜನವಾಗಿಲ್ಲ.

ಶೋಧ ಕಾರ್ಯ: ಅನಿತ್ ಜೊತೆಯಲ್ಲಿದ್ದ ಶಾಲಾ ಬಾಲಕರು ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದಾರೆ. ಬಳಿಕ ಹಾರಂಗಿ ಜಲಾಶಯದ ಅಧಿಕಾರಿಗಳನ್ನು ಸಂಪರ್ಕಿಸಿ ನಾಲೆಗೆ ಬಿಟ್ಟಿರುವ ನೀರನ್ನು ಸ್ಥಗಿತಗೊಳಿಸುವಂತೆ ಮನವಿ ಮಾಡಿದರು. ಈ ಹಿನ್ನೆಲೆಯಲ್ಲಿ ನಾಲೆಗೆ ಹರಿಸಲಾಗುತ್ತಿದ್ದ ನೀರನ್ನು 1 ಗಂಟೆ ಕಾಲ ಸ್ಥಗಿತಗೊಳಿಸಲಾಯಿತು. ಬಳಿಕ ನೀರಿನಲ್ಲಿ ಕೊಚ್ಚಿ ಹೋಗಿರುವ ಬಾಲಕನಿಗಾಗಿ ಅಗ್ನಿಶಾಮಕ ದಳದ ಸಿಬ್ಬಂದಿಗಳು ಮತ್ತು ದುಬಾರೆ ರಿವರ್ ರ್‍ಯಾಫ್ಟರ್‌ಗಳು ಶೋಧ ಕಾರ್ಯ ನಡೆಸಿದರು. ಅನಿತ್ ಕಾಲು ಜಾರಿ ಬಿದ್ದ 100 ಮೀಟರ್ ದೂರದಲ್ಲಿ ಆತನ ಮೃತದೇಹವನ್ನು ಪತ್ತೆ ಹಚ್ಚಿ ಮೇಲೆತ್ತಲಾಯಿತು. ಈ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕಾಗಮಿಸಿ ಮಹಜರು ನಡೆಸಿದರು. ಬಳಿಕ ಮೃತದೇಹವನ್ನು ಕುಶಾಲನಗರದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಪ್ರತಿಭಾವಂತ ವಿದ್ಯಾರ್ಥಿ: ಮೃತ ಬಾಲಕ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, ನೃತ್ಯ ತರಬೇತಿಯಲ್ಲೂ ಹೆಸರು ಮಾಡಿದ್ದ. ಇತ್ತೀಚೆಗೆ ಚೆನ್ನೈನಲ್ಲಿ ನಡೆದ ನ್ಯಾಷನಲ್ ಲೆವೆಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಭಾಗವಹಿಸಿದ್ದು, ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಥೈಲ್ಯಾಂಡ್‌ನಲ್ಲಿ ನಡೆಯಲ್ಲಿರುವ ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ಗೂ ಭಾರತ ತಂಡದಿಂದಲೂ ಭಾಗವಹಿಸಲು ಸಿದ್ಧತೆ ನಡೆಸುತ್ತಿದ್ದ ಎಂದು ಹೇಳಲಾಗಿದೆ.

ಶಾಸಕರಿಂದ ಸಾಂತ್ವನ: ದುರ್ಘಟನೆಯ ವಿಷಯ ಅರಿತ ಮಡಿಕೇರಿ ಶಾಸಕ ಡಾ.ಮಂಥರ್‌ಗೌಡ ಅವರು ಸರಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಇದೇ ಸಂದರ್ಭ ಬಾಲಕನ ಕುಟುಂಬಕ್ಕೆ ಶವ ಸಂಸ್ಕಾರ ನಡೆಸಲು ವೈಯಕ್ತಿಕವಾಗಿ ನೆರವು ನೀಡಿದರು. ಹಾರಂಗಿ ಜಲಾಶಯದ ಅಧಿಕಾರಿಗಳನ್ನು ಸಂಪರ್ಕಿಸಿದ ಶಾಸಕ ಡಾ.ಮಂಥರ್ ಗೌಡ, ಬಡ ಕುಟುಂಬಕ್ಕೆ ನೆರವು ನೀಡುವಂತೆ ಹೇಳಿದರು.

ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ಮೋಹನ್ ರಾಜ್ ಹಾಗೂ ಸಿಬ್ಬಂದಿ ವರ್ಗ, ಹಾರಂಗಿ ನೀರಾವರಿ ನಿಗಮದ ಅಧಿಕಾರಿಗಳು, ಅಗ್ನಿಶಾಮಕ ದಳದ ಸಿಬ್ಬಂದಿಗಳು, ಸದ್ಗುರು ಅಪ್ಪಯ್ಯ ಸ್ವಾಮಿ ಪ್ರೌಢ ಶಾಲೆಯ ಆಡಳಿತ ಮಂಡಳಿ, ಶಿಕ್ಷಕ ವೃಂದ, ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ್, ಕೂಡಿಗೆ ಗ್ರಾಪಂ ಅಧ್ಯಕ್ಷ ಕೆ.ಟಿ ಗಿರೀಶ್ ಕುಮಾರ್ ಉಪಸ್ಥಿತರಿದ್ದರು.

ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವ ನಟಿ ಹರ್ಷಿಕಾ ಪೂಣಚ್ಚ, ನಟ ಭುವನ್ ಪೊನ್ನಣ್ಣ

ಅದ್ದೂರಿಯಾಗಿ ಶೃಂಗಾರಗೊಂಡಿರುವ ಅಮ್ಮತ್ತಿಯ ಕೊಡವ ಸಮಾಜ





ಮಡಿಕೇರಿ, ಆ.23– ಸ್ಯಾಂಡಲ್ ವುಡ್ ನಟ ಮಡಿಕೇರಿಯ ಉಳ್ಳಿಯಡ ಭುವನ್ ಪೊನ್ನಣ್ಣ ಮತ್ತು ನಟಿ ಅಮ್ಮತ್ತಿಯ ಉದ್ದಪಂಡ ಹರ್ಷಿಕಾ ಪೂಣಚ್ಚ ಅವರುಗಳು ನಾಳೆ (ಗುರುವಾರ) ವೈವಾಹಿಕ ಜೀವನಕ್ಕೆ ಕಾಲಿಡುತ್ತಿದ್ದಾರೆ. ಈ ನಟ–ನಟಿಯ ವಿವಾಹ ಸಮಾರಂಭ ಅಮ್ಮತ್ತಿ ಕೊಡವ ಸಮಾಜದಲ್ಲಿ ನಡೆಯುತ್ತಿದ್ದು, ಕೊಡವ ಸಮಾಜವನ್ನು ಅದ್ದೂರಿಯಾಗಿ ಶೃಂಗರಿಸಲಾಗಿದೆ.

ಮಡಿಕೇರಿ ನಿವಾಸಿ ಬ್ರಹ್ಮಗಿರಿ ಕೊಡವ ವಾರ ಪತ್ರಿಕೆಯ ಸಂಪಾದಕರಾದ ಉಳ್ಳಿಯಡ ಪೂವಯ್ಯ ಮತ್ತು ಡಾಟಿ ದಂಪತಿ ಪುತ್ರರಾಗಿರುವ ಭುವನ್ ಪೊನ್ನಣ್ಣ, ಅಮ್ಮತ್ತಿ ನಿವಾಸಿ ಉದ್ದಪಂಡ ದಿ.ಪೂಣಚ್ಚ ಮತ್ತು ಶಾಂಭವಿ ದಂಪತಿ ಪುತ್ರಿ ಹರ್ಷಿಕಾ ಪೂಣಚ್ಚ ಅವರನ್ನು ವಿವಾಹವಾಗುತ್ತಿದ್ದಾರೆ. ನವ ದಂಪತಿಯ ವಿವಾಹ ಘಳಿಗೆಗೆ ಸ್ಯಾಂಡಲ್ ವುಡ್ ತಾರೆಯರು ಸಾಕ್ಷಿಯಾಗಲಿದ್ದಾರೆ. ಕೊಡಗಿನ ಶ್ರೀಮಂತ ಪದ್ಧತಿ, ಪರಂಪರೆ ಮತ್ತು ಕೊಡವ ಸಮುದಾಯದ ಸಂಪ್ರದಾಯದಂತೆ ಮದುವೆ ಕಾರ್ಯ ಶಾಸ್ತ್ರೋಕ್ತವಾಗಿ ನಡೆಯಲಿದೆ.

ಅಂದಾಜು 3 ಸಾವಿರ ಮಂದಿ ಮದುವೆಗೆ ಆಗಮಿಸಿ ವಧುವರನಿಗೆ ಆಶೀರ್ವದಿಸಲಿದ್ದು, ಕೊಡಗಿನ ವಿಶೇಷ ಭೋಜನವನ್ನು ಮದುವೆಗಾಗಿ ತಯಾರು ಮಾಡಲಾಗುತ್ತಿದೆ. ಮಡಿಕೇರಿಯ ಗಿರೀಶ್ ಮತ್ತವರ ತಂಡಕ್ಕೆ ಮದುವೆಗೆ ಬೇಕಾದ ಉಪಹಾರ, ಮಧ್ಯಾಹ್ನದ ಊಟೋಪಚಾರ ಸಹಿತ ತಿಂಡಿ, ತಿನಿಸುಗಳ ಜವಾಬ್ದಾರಿ ವಹಿಸಲಾಗಿದೆ. ವಿವಿಧ ಬಗೆಯ ಮಾಂಸಹಾರಿ ಹಾಗೂ ಸಸ್ಯಹಾರಿ ಖಾದ್ಯಗಳ ತಯಾರಿಕೆಯಲ್ಲಿ ಬಾಣಸಿಗರು ತೊಡಗಿಕೊಂಡಿದ್ದಾರೆ.

ಕೊಡವ ಕೂಟಾಳಿಯಡ ಕೂಟಕ್ಕೆ ಪದಾಧಿಕಾರಿಗಳ ಆಯ್ಕೆ





ಚಂಗುಲಂಡ ಸೂರಜ್ ಶರತ್ ಸೋಮಣ್ಣ

ಗೋಣಿಕೊಪ್ಪ ಆ.23– ಕೊಡವ ಕೂಟಾಳಿಯಡ ಕೂಟದ ಅಧ್ಯಕ್ಷರಾಗಿ ಚಂಗುಲಂಡ ಸೂರಜ್, ಕಾರ್ಯದರ್ಶಿಯಾಗಿ ಚೆಟ್ರೋಳಿರ ಶರತ್ ಸೋಮಣ್ಣ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಕಾಂಗೀರ ಸಂತೋಷ್ ದೇವಯ್ಯ, ಸಹ ಕಾರ್ಯದರ್ಶಿಯಾಗಿ ನೂರೆರ ಸರಿತ ಅರುಣ್, ಖಜಾಂಚಿಯಾಗಿ ಕಬ್ಬಚ್ಚಿರ ರಶ್ಮಿ ಕಾರ್ಯಪ್ಪ, ನಿರ್ದೇಶಕರಾಗಿ ಬಾಳೆಯಡ ದಿವ್ಯ ಮಂದಪ್ಪ, ಅಮ್ಮಾಟಂಡ ಚೇತನ್, ಕರ್ತುರರನ್ನು ಪೆಮ್ಮಯ್ಯ, ಕಾಳಮಂಡ ರಾಬಿನ್, ಬೊಜ್ಜಂಗಡ ಚೆಂಗಪ್ಪ ಆಯ್ಕೆಯಾದರು. ನಾಪೋಕ್ಲು ಪುನಶ್ಚೇತನ ಚಾರಿಟೇಬಲ್ ಟ್ರಸ್ಟ್ ಸಭಾಂಗಣದಲ್ಲಿ ಸಂಘಟನೆಯ ಸ್ಥಾಪಕ ಅಧ್ಯಕ್ಷೆ ಚಿಮ್ಮಚಿರ ಪವಿತ ರಜನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಈ ಸಂದರ್ಭ ಗೌರವ ಸಲಹೆಗಾರರಾದ ಚೊಟ್ಟಂಡ ಪ್ರಭು ಸೋಮಯ್ಯ, ಸದಸ್ಯರಾದ ಕೊಟ್ಟಂಗಡ ಕವಿತ ವಾಸುದೇವ ಇದ್ದರು.

ಉದ್ಯೋಗ ಖಾತ್ರಿ ಯೋಜನೆ ಜಿಲ್ಲೆಯಲ್ಲಿ ಕುಂಠಿತ

ಜಿಪಂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚೆ



ಮಡಿಕೇರಿ, ಆ.23– ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಸಾಮರ್ಥ್ಯ ಸೌಧದಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯು ಜಿಪಂ ಸಿಇಒ ವರ್ಣಿತ್ ನೇಗಿರವರ ನೇತೃತ್ವದಲ್ಲಿ ನಡೆಯಿತು.

ಉದ್ಯೋಗ ಖಾತ್ರಿ ಯೋಜನೆಯಡಿ ಜಿಲ್ಲೆಯಲ್ಲಿ ಪ್ರಗತಿ ಕುಂಠಿತಗೊಂಡಿದ್ದು ತ್ವರಿತವಾಗಿ ಪ್ರಗತಿ ಸಾಧಿಸಿ, ಗ್ರಾಮ ಪಂಚಾಯಿತಿಗಳಲ್ಲಿ ಶೂನ್ಯ ಮಾನವ ದಿನಗಳ ಸೃಜನೆಯಾಗದಂತೆ ಕ್ರಮ ವಹಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಭಾರತ್ ನಿರ್ಮಾಣ್ ಸೇವಾ ಕೇಂದ್ರ, NRLM WORK SHED ಕಾಮಗಾರಿಗಳನ್ನು ಆರ್ಥಿಕ ವರ್ಷದಲ್ಲೇ ಪೂರ್ಣಗೊಳಿಸಲು ತಿಳಿಸಿದರು. ಸ್ವಚ್ಛ ಭಾರತ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಲ್ಲಿ ಕಸವನ್ನು ವ್ಯವಸ್ಥಿತವಾಗಿ ನಿರ್ವಹಿಸಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಜಿ.ಪಂ. ಸಿಇಒ ಅವರು ಹೇಳಿದರು.

ವಸತಿ ಯೋಜನೆಯಡಿ ತಾಲೂಕಿನಲ್ಲಿ ಮಳೆಗೆ ಹಾನಿಯಾದ ಮನೆಗಳ ಕುರಿತು ಮಾಹಿತಿ ಪಡೆದು ಪ್ರಗತಿ ಸಾಧಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ವರ್ಣಿತ್ ನೇಗಿ ಅವರು ಸೂಚಿಸಿದರು. ಜಿಪಂ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಕಾಲಮಿತಿ ಒಳಗೆ ಗ್ರಾಮ ಪಂಚಾಯಿತಿಗಳಲ್ಲಿ ಪ್ರಗತಿ ಸಾಧಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿರಾಜಪೇಟೆ ತಾ.ಪಂ.ಇಒ ಕೆ.ಸಿ. ಅಪ್ಪಣ್ಣ, ವಿರಾಜಪೇಟೆ/ ಪೊನ್ನಂಪೇಟೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ನರೇಗಾ ತಾಂತ್ರಿಕ ಸಿಬ್ಬಂದಿಗಳು ಹಾಗೂ ತಾ.ಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು, ಯುವಕರು ದುಶ್ಚಟದಿಂದ ದೂರವಿದ್ದು, ಉತ್ತಮ ಪ್ರಜೆಗಳಾಗಬೇಕು



ವಿರಾಜಪೇಟೆ, ಆ.23– ವಿದ್ಯಾರ್ಥಿ ಜೀವನ ಮಹತ್ವವಾದದ್ದು, ಪೋಷಕರು ಮತ್ತು ಶಿಕ್ಷಕರು ಕಲಿಸಿರುವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರೊಂದಿಗೆ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಂತಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಂತೋಷ ಕೊಠಾರಿ ಹೇಳಿದರು.

ತಾಲೂಕು ಕಾನೂನು ಸೇವೆಗಳ ಸಮಿತಿ ವಿರಾಜಪೇಟೆ ವಕೀಲರ ಸಂಘ ಮತ್ತು ಸರಕಾರಿ ಪದವಿಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ "ವಿಶ್ವ ಯುವ ದಿನಾಚರಣೆ ಮತ್ತು ಮಾದಕ ವ್ಯಸನದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಸರ್ಕಾರಿ ಶಾಲೆಯಲ್ಲಿ ಉತ್ತಮ ಶಿಕ್ಷಣ ಸಿಗಲ್ಲ ಅನ್ನೋದು ಸುಳ್ಳು. ನಾವೆಲ್ಲ ಸರಕಾರಿ ಶಾಲೆಯಲ್ಲಿಯೇ ಕಲಿತು ಬಂದವರು. ವಿದ್ಯಾರ್ಥಿ ಜೀವನದಲ್ಲಿ ಶ್ರದ್ಧೆಯಿಂದ ಕಲಿತು ಗುರಿ ಮುಟ್ಟುವಂತಾಗಬೇಕು. ನಮ್ಮಿಂದ ಈ ಸಮಾಜಕ್ಕೆ ಏನಾದರು ಕೊಡುಗೆ ನೀಡಬೇಕೆಂಬ ಮನಸ್ಸು ಇರಬೇಕು. ದುಶ್ಚಟಗಳನ್ನು ದೂರಮಾಡಿ ಜೀವನದಲ್ಲಿ ಉತ್ತಮ ಗುಣಗಳನ್ನು ಅಳವಡಿಸಿಕೊಂಡು ದೇಶದ ಉತ್ತಮ ಪ್ರಜೆಗಳಾಗಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ ಮಾತನಾಡಿ, ಕೊಡಗು ಜಿಲ್ಲೆ ಭಾರತ ದೇಶದ ಹಾಕಿ ತಂಡಕ್ಕೆ 57 ಹಾಕಿ ಆಟಗಾರರನ್ನು ನೀಡಿದೆ. ಇತ್ತೀಚೆಗೆ ಕೊಡಗಿನಲ್ಲಿ ಗಾಂಜಾ ಹಾವಳಿ ಹೆಚ್ಚಾಗುತ್ತಿರುವುದು ಬೇಸರ ತಂದಿದೆ. ವಿದ್ಯಾರ್ಥಿಗಳು, ಯುವಕರು ದೇಶದ ಶಕ್ತಿ. ಇಂಥವರು ಮಾದಕ ವಸ್ತುಗಳ ಬಗ್ಗೆ ಎಚ್ಚರದಿಂದಿರಬೇಕು. ಚಂಚಲ ಮನಸ್ಸು ಬೇಡ, ದೃಢ ಸಂಕಲ್ಪದಿಂದ ಭವಿಷ್ಯದ ಗುರಿ ಮುಟ್ಟುವಂತಾಗಬೇಕು. ಮಕ್ಕಳು ವಿದ್ಯಾವಂತರಾಗಲಿ ಎಂದು ಪೋಷಕರು ಶಾಲೆಗೆ ಕಳಿಸುತ್ತಾರೆ ಅದನ್ನು ಅರಿತುಕೊಂಡು ಶಿಕ್ಷರಿಗೂ ಮತ್ತು ಪೋಷಕರಿಗೂ ಗೌರವ ತರುವಂತಾಗಬೇಕು ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎನ್.ಕೆ.ಜೋತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ವಿದ್ಯಾರ್ಥಿಗಳು ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳಿಗೆ ತಂದೆ–ತಾಯಿ ಮೊದಲಗುರು ನಂತರ ಶಿಕ್ಷಕರು. ಪ್ರತಿಯೊಬ್ಬರು ಹಿರಿಯರಿಗೆ ಗೌರವ ನೀಡುವಂತಾಗಬೇಕು ಎಂದರು.

ಅಪರ ಸಿವಿಲ್ ನ್ಯಾಯಾಧೀಶರಾದ ಪ್ರದೀಪ್ ಪೊತದಾರ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಉಪನ್ಯಾಸಕರಾದ ಪವಿತ್ರ ಕುಮಾರಿ ಸ್ವಾಗತಿಸಿದರು, ಪಿ.ಎ. ಸುಜಾತ ನಿರೂಪಿಸಿದರೆ, ವಿನೋದ್ ಕುಮಾರ್ ವಂದಿಸಿದರು. ವಿದ್ಯಾರ್ಥಿಗಳಿಂದ ಗೀತ ಗಾಯನ ನಡೆಯಿತು.

ಚಂದ್ರಯಾನ–3 ಯಶಸ್ವಿ; ವಿಜ್ಞಾನಿಗಳಿಗೆ ಅಭಿನಂದನೆ



ಚಾಮರಾಜನಗರ, ಆ.23– ಚಂದ್ರಯಾನ 3 ಯಶಸ್ವಿಯಾದ ಹಿನ್ನೆಲೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಎಲ್ಲ ವಿಜ್ಞಾನಿಗಳಿಗೆ ಹಾಗೂ ಭಾರತ ಸರ್ಕಾರಕ್ಕೆ ವಿಶೇಷ ಗೌರವ ಅಭಿನಂದನೆಗಳನ್ನು ಜೈ ಹಿಂದ್ ಪ್ರತಿಷ್ಠಾನದ ಅಧ್ಯಕ್ಷರು ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತರಾದ ಸುರೇಶ್ ಎನ್ ಋಗ್ವೇದಿ ತಿಳಿಸಿದ್ದಾರೆ.

ಅವರು ಜೈಹಿಂದ್ ಪ್ರತಿಷ್ಠಾನ ಮತ್ತು ಋಗ್ವೇದಿ ಯೂತ್ ಕ್ಲಬ್ ವತಿಯಿಂದ ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ, ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಮತ್ತು ಪ್ರಾರ್ಥನೆ ನೆರವೇರಿಸಿದರು.

ಭಾರತೀಯ ವೈಜ್ಞಾನಿಕ ಶಕ್ತಿ ಹಾಗೂ ಬೌದ್ಧಿಕತೆಯ ತಾಂತ್ರಿಕತೆಯ ಮಹಾ ಸಂಭ್ರಮ ಇದಾಗಿದ್ದು ಇದೇ ಭಾರತೀಯರಿಗೆ ಆನಂದ ಮತ್ತು ಪರಮಾನಂದವನ್ನು ಉಂಟುಮಾಡಿದೆ. ಇಡೀ ವಿಶ್ವಕ್ಕೆ ಐತಿಹಾಸಿಕ ಸಾಧನೆಯ ಮಹತ್ವ ಇದಾಗಿದ್ದು ಇಸ್ರೋ ಸಂಸ್ಥೆಯ ಎಲ್ಲ ವಿಜ್ಞಾನಿಗಳಿಗೆ ವಿಶೇಷವಾಗಿ ಗೌರವವನ್ನು, ಕೋಟಿ ಕೋಟಿ ನಮನಗಳನ್ನು ಸಲ್ಲಿಸಲಾಯಿತು.

ಅಭಿನಂದನ ಕಾರ್ಯಕ್ರಮದಲ್ಲಿ ಮುಖಂಡ ಸುರೇಶ್ ಗೌಡ, ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ರೂಪೇಶ್, ರವಿಚಂದ್ರಪ್ರಸಾದ್ ಬಿಕೆ ಆರಾಧ್ಯ ಸುರೇಶ್ ದೊಡ್ಡ ಮೋಳೆ, ಶ್ರಾವ್ಯ ಎಸ್ ಋಗ್ವೇದಿ ಮುಂತಾದವರು ಉಪಸ್ಥಿತರಿದ್ದರು.

ಈಜಲು ತೆರಳಿದ್ದ ಯುವಕ ಸಾವು

ಕೊಳ್ಳೇಗಾಲ, ಆ.23– ಗ್ರಾಮದೇವತೆ ಹಬ್ಬಕ್ಕೆ ನೆಂಟರ ಮನೆಗೆ ಆಗಮಿಸಿದ್ದ ಯುವಕ ಗೆಳೆಯರ ಜೊತೆ ಗುಂಡಾಲ್ ಜಲಾಶಯದಲ್ಲಿ ಈಜಲು ತೆರಳಿ, ಸುಳಿಯಲ್ಲಿ ಸಿಲುಕಿ ಸಾವಿಗೀಡಾಗಿರುವ ದುರಂತ ಬುಧವಾರ ಸಂಜೆ ನಡೆದಿದೆ.

ಉತ್ತಂಬಳ್ಳಿ ಗ್ರಾಮದ ಮಹೇಂದ್ರ (21) ಕೂಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಸಾವಿಗೀಡಾದ ಯುವಕ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು, ಅಗ್ನಿಶಾಮಕ ಸಿಬ್ಬಂದಿಗಳ ನೆರವಿನೊಂದಿಗೆ ಬುಧವಾರ ಸಂಜೆ ತನಕ ಶೋಧ ಕಾರ್ಯ ನಡೆಸಿದರು. ಸಂಜೆಯಾದ ಹಿನ್ನೆಲೆ ಶೋಧ ಕಾರ್ಯಾಚರಣೆಯನ್ನು ಗುರುವಾರ(ನಾಳೆಗೆ) ಮುಂದೂಡಲಾಗಿದೆ. ಕೃತ್ಯ ನದಿಯ ಸ್ಥಳದಲ್ಲಿ ಮೃತರ ಸಂಬಂಧಿಕರ ಆಕ್ರಂಧನ ಮುಗಿಲು ಮುಟ್ಟಿತು.

ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ

ಚಾಮರಾಜನಗರ, ಆ.23– ಅಪ್ರಾಪ್ತ ಬಾಲಕಿಯನ್ನು ಮದುವೆಯಾಗುತ್ತೇನೆಂದು ಪುಸಲಾಯಿಸಿ ಅಪಹರಿಸಿಕೊಂಡು ಹೋಗಿ ಲೈಂಗಿಕ ದೌರ್ಜನ್ಯ ನಡೆಸಿರುವ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವನಿಗೆ 20 ವರ್ಷಗಳ ಕಠಿಣ ಜೈಲು ಸಜೆ ವಿಧಿಸಿ ಮಕ್ಕಳ ಸ್ನೇಹಿ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ತಾಲೂಕಿನ ಗ್ರಾಮವೊಂದರ ನಾಗೇಂದ್ರ (23) ಶಿಕ್ಷೆಗೆ ಗುರಿಯಾದ ಅಪರಾಧಿ. ಈತ ತನ್ನ ಗ್ರಾಮದ 12 ವರ್ಷದ ಅಪ್ರಾಪ್ತೆಯನ್ನು ಮದುವೆಯಾಗುವುದಾಗಿ ಹೇಳಿ ಅಪಹರಿಸಿಕೊಂಡು ಹೋಗಿ, ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ 2021ರ ಸೆ. 13ರಂದು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಶೇಖರ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಮಕ್ಕಳ ಸ್ನೇಹಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ನಾಗೇಂದ್ರನಿಗೆ ಪೋಕ್ಸೋ ಕಾಯ್ದೆಯಡಿ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ನೊಂದ ಬಾಲಕಿಗೆ 4 ಲಕ್ಷ ರೂ. ಪರಿಹಾರವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ನೀಡಲು ನ್ಯಾಯಾಧೀಶರಾದ ಎ.ಸಿ. ನಿಶಾರಾಣಿ ಆದೇಶಿಸಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಬಿಳಿಗಿರಿರಂಗನಬೆಟ್ಟ ಪ್ರಕೃತಿ ಸೌಂದರ್ಯ ಸವಿಯುವವರಿಗೆ ನಿರಾಶೆ

ತೀರಾ ಹದಗೆಟ್ಟಿರುವ ಹೊಂಡರಬಾಳು– ಕೆ.ಗುಡಿ ರಸ್ತೆ





> ಬಿಳಿಗಿರಿ ರಂಗಪ್ಪನ ಬೆಟ್ಟದ ಮಾರ್ಗದ ಸೌಂದರ್ಯವನ್ನು ಸವಿಯಲೆಂದು ಕೆ.ಗುಡಿ ಮಾರ್ಗವಾಗಿ ಬೆಟ್ಟಕ್ಕೆ ತೆರಳಿದ್ದೇವು. ಆ ಪ್ರಕೃತಿ ಸೌಂದರ್ಯವನ್ನು ವರ್ಣಿಸಲು ಅಸಾಧ್ಯ. ಆದರೆ, ಈ ಮಾರ್ಗದ ರಸ್ತೆ ತುಂಬಾ ಹದಗೆಟ್ಟಿರುವುದು ಬೇಸರ ತಂದಿತ್ತು. ಸಂಬಂಧಪಟ್ಟವರು ಈ ಕೂಡಲೇ ರಸ್ತೆಯನ್ನು ಸರಿಪಡಿಸುವ ಮೂಲಕ ಭಕ್ತರಿಗೆ ಅನುಕೂಲ ಕಲ್ಪಿಸಬೇಕು. - ಪ್ರಮೋದ್ ಸಿ., ಪ್ರವಾಸಿಗ,

ಚಾಮರಾಜನಗರ, ಆ.23(ಎಸ್‌ಎಸ್)– ತಾಲೂಕಿನ ಹೊಂಡರಬಾಳು ಚೆಕ್‌ಪೋಸ್ಟ್‌ನಿಂದ ಕೆ.ಗುಡಿವರೆಗೆ ರಸ್ತೆ ತುಂಬಾ ಹದಗೆಟ್ಟಿದ್ದು, ಬಿಳಿಗಿರಿರಂಗನ ಬೆಟ್ಟದ ಪ್ರಕೃತಿ ಸೌಂದರ್ಯ ಸವಿಯಲು ಬಯಸುವ ಸಾರ್ವಜನಿಕರು ಪರಿತಪಿಸುವಂತಾಗಿದೆ.

ಚಾಮರಾಜನಗರದಿಂದ ಕೆ. ಗುಡಿ ಮಾರ್ಗವಾಗಿ ಬಿಳಿಗಿರಿರಂಗನ ಬೆಟ್ಟಕ್ಕೆ ಪ್ರತಿನಿತ್ಯ ನೂರಾರು ಜನರು ಓಡಾಡುತ್ತಾರೆ. ಹೊಂಡರಬಾಳು ಚೆಕ್‌ಪೋಸ್ಟ್‌ನಿಂದ ಬಿಳಿಗಿರಿ ರಂಗನಬೆಟ್ಟದವರೆಗಿನ ಪ್ರಕೃತಿ ಸೌಂದರ್ಯವನ್ನು ಸವಿಯಲೆಂದೆ ಬಹುತೇಕ ಜನರು ಈ ಮಾರ್ಗವಾಗಿ ಸಂಚರಿಸುತ್ತಾರೆ. ಆದರೆ, ಹೊಂಡರಬಾಳು ಚೆಕ್‌ಪೋಸ್ಟ್‌ನಿಂದ ಕೆ.ಗುಡಿವರೆಗಿನ ರಸ್ತೆ ತುಂಬಾ ಹದಗೆಟ್ಟಿದ್ದು, ಹಳ್ಳ–ಕೊಳ್ಳಗಳಿಂದ ರಸ್ತೆ ಕೂಡಿದೆ. ಇದರಿಂದ ಬೆಟ್ಟಕ್ಕೆ ಆಗಮಿಸುವ ಪ್ರವಾಸಿಗರು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಾ ಸಂಚರಿಸುತ್ತಿದ್ದಾರೆ.

ಈ ಮಾರ್ಗದಲ್ಲಿ ರಸ್ತೆಯ ಕೆಲವೆಡೆ ದೊಡ್ಡ ಗುಂಡಿಗಳು ನಿರ್ಮಾಣವಾಗಿದ್ದು, ಇದರಿಂದ ವಾಹನ ಸವಾರರು ಬಹಳ ಕಿರಿಕಿರಿ ಅನುಭವಿಸುತ್ತಿದ್ದಾರೆ. ಈ ಮಾರ್ಗದ ರಸ್ತೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಒಳಪಟ್ಟಿರುವುದರಿಂದ ರಸ್ತೆ ಅಗಲೀಕರಣಕ್ಕೆ ಅವಕಾಶ ಇಲ್ಲ. ಆದರೆ, ಇರುವ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಲು ಯಾವುದೇ ಅಡ್ಡಿ ಇಲ್ಲ. ಆದರೂ, ಸಹ ಇದನ್ನು ಸರಿಪಡಿಸುವತ್ತ ಯಾರೊಬ್ಬರು ಸಹ ಗಮನ ಹರಿಸದೇ ಇರುವುದು ವಿಪರ್ಯಸವಾಗಿದೆ.

ಬಿಳಿಗಿರಿ ರಂಗನಬೆಟ್ಟದ ಸೌಂದರ್ಯವನ್ನು ಸವಿಯಲು ರಾಜ್ಯದ ಮೂಲೆ ಮೂಲೆಗಳಿಂದ ಸೇರಿದಂತೆ ವಿದೇಶಗಳಿಂದಲೂ ಪ್ರವಾಸಿಗರು ಬರುತ್ತಾರೆ. ಇದರಲ್ಲಿ ಹಲವರು ಯಳಂದೂರು ಮಾರ್ಗವಾಗಿ ಬಿಳಿಗಿರಿ ರಂಗನಬೆಟ್ಟಕ್ಕೆ ತೆರಳುತ್ತಾರೆ. ಆದರೆ, ಬಹುತೇಕ ಹೆಚ್ಚಿನ ಪ್ರವಾಸಿಗರು ಚಾಮರಾಜನಗರದ ಕೆ.ಗುಡಿ ಮೂಲಕ ಬೆಟ್ಟಕ್ಕೆ ತೆರಳುತ್ತಾರೆ. ಕಾರಣ ಈ ಮಾರ್ಗದಲ್ಲಿ ಅರಣ್ಯ ಪ್ರದೇಶ ದಟ್ಟವಾಗಿದ್ದು, ಪ್ರಾಕೃತಿಕ ಸೌಂದರ್ಯ ಸವಿಯಲು ಇಷ್ಟಪಟ್ಟು ತೆರಳುತ್ತಾರೆ. ಆದರೆ, ಈ ರಸ್ತೆ ಸರಿಯಿಲ್ಲದ ಕಾರಣ ಪ್ರವಾಸಿಗರು ಬೇಸರದಿಂದಲೇ ಸಂಚಾರ ಮಾಡುತ್ತಿದ್ದಾರೆ. ಇನ್ನಾದರೂ ಹದಗೆಟ್ಟಿರುವ ರಸ್ತೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸರಿಪಡಿಸುವತ್ತಾ ಗಮನ ಹರಿಸುತ್ತಾರಾ ಕಾದು ನೋಡಬೇಕಿದೆ.

ರಸ್ತೆ ಅಪಘಾತದಲ್ಲಿ ಪಿಡಬ್ಲೂಡಿ ಸಹಾಯಕ ಇಂಜಿನಿಯರ್ ಸಾವು



ಚಾಮರಾಜನಗರ, ಆ.23– ನಗರದ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಹಾಯಕ ಇಂಜಿನಿಯರ್ ಮಧುಸೂದನ್ (40) ರಸ್ತೆ ಅಪಘಾತದಲ್ಲಿ ಬುಧವಾರ ಸಂಜೆ ಸಾವನ್ನಪ್ಪಿದ್ದಾರೆ.

ಚಾಮರಾಜನಗರದಿಂದ ಮೈಸೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ, ರಸ್ತೆಯಲ್ಲಿ ನಿಂತಿದ್ದ ಲಾರಿಯನ್ನು ಗಮನಿಸಿ ಬಲಕ್ಕೆ ಬೈಕ್ ತಿರುಗಿಸಿದಾಗ, ಹಿಂಬದಿಯಿಂದ ಬಂದ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ ತೀವ್ರಗಾಯಗೊಂಡು ತಕ್ಷಣ ಅವರನ್ನು ಮೈಸೂರು ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ.

ಮೃತ ಮಧುಸೂದನ್ ಅವರಿಗೆ ತಂದೆ–ತಾಯಿ, ಪತ್ನಿ, ಓರ್ವ ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ತಾಲೂಕಿನ ಸಂತೆಮರಹಳ್ಳಿ ಸಮೀಪದ ಹೆಗ್ಗವಾಡಿ ಗ್ರಾಮದಲ್ಲಿ ಗುರುವಾರ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಸರ್ಕಾರಿ ನೌಕರರ ಸಂಘದಿಂದ ನೂತನ ಶಾಸಕರಿಗೆ ಸನ್ಮಾನ



ಯಳಂದೂರು, ಆ.23– ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕೊಳ್ಳೆಗಾಲದ ನೂತನ ಶಾಸಕರಾಗಿ ಆಯ್ಕೆಯಾಗಿರುವ ಎ.ಆರ್. ಕೃಷ್ಣಮೂರ್ತಿ ಅವನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಯಳಂದೂರು ಶಾಖೆ ವತಿಯಿಂದ ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕರು, ಸರ್ಕಾರಿ ನೌಕರರ ಸಮಸ್ಯೆಗಳನ್ನು ಪರಿಹರಿಸಲು ಸದನದಲ್ಲಿ ಧ್ವನಿ ಎತ್ತುವೆ. ನಿಮ್ಮಗಳ ಜೊತೆ ನಾನು ಇರುವೆ ಯಳಂದೂರು ತಾಲೂಕಿನ ಅಭಿವೃದ್ಧಿಗೆ ಅಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ ಸರ್ಕಾರದಿಂದ ಪ್ರಾಮಾಣಿಕವಾಗಿ ಅನುದಾನ ತರುವೆ ನಾನು ಜನ ಸೇವಕನಾಗಿ ಕೆಲಸ ಮಾಡುವೆ ಎಂದು ಹೇಳಿದರು.

ತಾಲೂಕಿನ ಸರ್ಕಾರಿ ನೌಕರರ ಸಂಘದವರು ನನ್ನನ್ನು ಅಭಿನಂದಿಸಿರುವುದು ತುಂಬ ಖುಷಿ ಆಯಿತು. ನೌಕರರ ಸ್ನೇಹಿ ಶಾಸಕನಾಗಿ ಕರ್ತವ್ಯ ನಿರ್ವಹಿಸುವೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಮಂಜುನಾಥ್. ಸರ್ಕಾರಿ ನೌಕರರ ಭವನಕ್ಕೆ ಸುತ್ತುಗೋಡೆ ಶಿಕ್ಷಕರ ಭವನ ನಿರ್ಮಾಣಕ್ಕೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೇಶನ ಕೊಡಿಸಲು ಹಾಗೂ ನೂತನ ಪಿಂಚಣಿ ಯೋಜನೆ ರದ್ದು ಮಾಡಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಮಟ್ಟದಲ್ಲಿ ಒತ್ತಡ ಹೇರುವಂತೆ ಮತ್ತು ರಾಜ್ಯಮಟ್ಟದ ಕ್ರೀಡಕೂಟಕ್ಕೆ ಆಯ್ಕೆ ಆಗಿರುರುವ ತಾಲೂಕಿನ ಸರ್ಕಾರಿ ನೌಕರ ಕ್ರೀಡಾಪಟುಗಳಿಗೆ ಟ್ರಾಕ್ ಸೂಟ್ ವಿತರಿಸುವಂತೆ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಬಿಇಓ ಕಾಂತರಾಜ್, ಕಾರ್ಯದರ್ಶಿ ಮಹೇಶ, ಖಜಾಂಚಿ ರಮೇಶ, ರಾಜ್ಯ ಪರಿಷತ್ ಸದಸ್ಯ ಗೋವಿಂದ, ಉಪಾಧ್ಯಕ್ಷ ಬಸವರಾಜು, ನಂಜುಂಡ, ಸಿದ್ದರಾಜು, ಭಾರತಿ, ಸರಸ್ವತಿ, ಧನ ಲಕ್ಷ್ಮಿ, ಮಾನಸ ಶಿಕ್ಷಕರ ಸಂಘದ ಸೋಮಣ್ಣ, ನಾಗರಾಜು, ನಂಜುಂಡಸ್ವಾಮಿ, ಅನ್ವರ್ ಪಾಷ, ಪ್ರೌಢಶಾಲೆ ಶಿಕ್ಷಕ ಸಂಘದ ಮಹದೇವು, ದಿವಾಕರ್, ತೇಜಸ್ವಿನಿ, ಪ್ರದೀಪ್, ಗಿರೀಶ್, ಪ್ರಕಾಶ್, ಮಲ್ಲು ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರು ಭಾಗವಹಿಸಿದ್ದರು.

ಕಾಡುಪ್ರಾಣಿಗಳ ಹಾವಳಿ ತಪ್ಪಿಸಲು ಕ್ರಮಕೈಗೊಳ್ಳುವಂತೆ ಮಾಜಿ ಶಾಸಕ ಆಗ್ರಹ



ಹನೂರು, ಆ.23– ತಾಲೂಕು ವ್ಯಾಪ್ತಿಯಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಆಗುತ್ತಿರುವ ಅನಾಹುತವನ್ನು ತಪ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಮಾಜಿ ಶಾಸಕ ಆರ್.ನರೇಂದ್ರ ಆಗ್ರಹಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕ್ಷೇತ್ರ ವ್ಯಾಪ್ತಿಯ ಹಲವು ಕಡೆಗಳಲ್ಲಿ ಆನೆ ಸೇರಿದಂತೆ ಇತರೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಕಾಡುಪ್ರಾಣಿಗಳ ಹಾವಳಿ ತಪ್ಪಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗಬೇಕು. ಈ ಸಂಬಂಧ ಅರಣ್ಯ ಸಚಿವರೊಂದಿಗೆ ಮಾತನಾಡಿದ್ದೇನೆ. ಅರಣ್ಯ ಪಡೆಯನ್ನು ಜಾಸ್ತಿ ಮಾಡಬೇಕು. ಆಗ ಮಾತ್ರ ಸಂಘರ್ಷ ತಪ್ಪಿಸಲು ಸಾಧ್ಯ ಎಂದರು.

ಬರಗಾಲ ಸಂದರ್ಭದಲ್ಲಿ ಕುಡಿಯುವ ನೀರು, ಮೇವು ಸಿಗದ ಕಾರಣ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳ ಬೇಟೆ ಹೆಚ್ಚಾಗಿದೆ. ಇದನ್ನು ತಪ್ಪಿಸಲು ಅಧಿಕಾರಿಗಳು ಮುಂದಾಗಬೇಕು. ಜಿಲ್ಲೆಯಲ್ಲಿ ಸೂಕ್ತ ಮಳೆಯಾಗಿಲ್ಲದ ಕಾರಣ ಬಿತ್ತನೆಯಾಗಿಲ್ಲ. ಹನೂರು ತಾಲೂಕಿನಲ್ಲಿ ಜಾನುವಾರುಗಳ ಮೇಲೆ ಜನತೆ ಅವಲಂಬಿತರಾಗಿರುವುದರಿಂದ ಮೇವಿನ ಕೊರತೆ ಎದುರಾಗಿದೆ ಎಂದರು.

ಮಲೆ ಮಹದೇಶ್ವರ ಬೆಟ್ಟದ ಸಾಮೂಹಿಕ ವಿವಾಹ ಮುಂದೂಡಿಕೆ

ಚಾಮರಾಜನಗರ, ಆ.23– ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆ.28ರಂದು ನಿಗದಿಯಾಗಿದ್ದ ಉಚಿತ ಸಾಮೂಹಿಕ ವಿವಾಹವನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ.

ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉಚಿತ ಸಾಮೂಹಿಕ ವಿವಾಹಕ್ಕೆ ವಧು–ವರರ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ನಿಗದಿಪಡಿಸಿದ್ದು, ಈಗಾಗಲೇ 100ಕ್ಕೂ ಅಧಿಕ ಅರ್ಜಿಗಳನ್ನು ವಿತರಿಸಲಾಗಿತ್ತು. ಪ್ರಾಧಿಕಾರದ ಕಚೇರಿಯಲ್ಲಿ 60 ಅರ್ಜಿಗಳು ಸ್ವೀಕೃತವಾಗಿದೆ. ಉಳಿದ ಅರ್ಜಿದಾರರು ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲು ಒಂದು ವಾರ ಕಾಲಾವಕಾಶ ಕೋರಿದ ಹಿನ್ನೆಲೆ ಉಚಿತ ಸಾಮೂಹಿಕ ವಿವಾಹವನ್ನು ಆ.28ಕ್ಕೆ ನಿಗದಿಪಡಿಸಲಾಗಿತ್ತು. ಕಾರಣಾಂತರದಿಂದ ಆಗಸ್ಟ್ 28ಕ್ಕೆ ನಿಗದಿಯಾಗಿದ್ದ ಉಚಿತ ಸಾಮೂಹಿಕ ವಿವಾಹವನ್ನು ಮುಂದೂಡಲಾಗಿದೆ. ದಿನಾಂಕ ನಿಗದಿಪಡಿಸಿದ ನಂತರ ಅರ್ಜಿ ಸಲ್ಲಿಸಿರುವ ವಧು–ವರರಿಗೆ ತಿಳಿಸಲಾಗುವುದು. ಪ್ರಾಧಿಕಾರದೊಂದಿಗೆ ಸಹಕರಿಸಬೇಕೆಂದು ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರಾದ ಸರಸ್ವತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ನೆಕ್ಸಸ್ ಮಾಲ್ (Nexus Mall) ಮೈಸೂರಿನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಪಿಯುಸಿ ಮೇಲ್ಪಟ್ಟು
ಉತ್ತಮ ವೇತನ ಸೌಲಭ್ಯವಿರುತ್ತದೆ.
ವಯೋಮಿತಿ : 18–30 ವರ್ಷ
8431588337

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಲಾಲ್ ಬಹದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡ ನಗರದಲ್ಲಿ 20x30, 30x40 ಮನೆಗಳು ಮಾರಾಟಕ್ಕಿವೆ. ಲಾಲ್ ಬಹದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡ ನಗರ ಸಪ್ತ ಮಾತೃಕ ಲೇಔಟ್‌ನಲ್ಲಿ ಸೈಟು ಮಾರುವವರು, ಸಂಪರ್ಕಿಸಿ:
9741614466, 9741603322

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

R.V.CONSTRUCTIONS
Sanction Plans, Sanction Plans Upload (E-Submission)
Construction Plans (As per Vaastu), Estimations.
REASONABLE RATES.
D.Subbaiah Road, Mysuru-570004
0821-2002063
7975110915

AQUAGUARD & KENT SALES AND SERVICE
Service Charge : 300/-
9901200444

ಜೋಳದ ರೊಟ್ಟಿ, ರಾಗಿ ರೊಟ್ಟಿ, ಹೋಲ್ ಸೇಲ್ ಮತ್ತು ರಿಟೇಲ್ ದರದಲ್ಲಿ ಸಿಗುತ್ತದೆ.
ಹೆಬ್ಬಾಳು
8431416590

ಸೈಟು ಮಾರಾಟಕ್ಕಿದೆ
30x40
ಪೂರ್ವ ದಿಕ್ಕಿನ ನಿವೇಶನ, ಟಿ.ನರಸೀಪುರದಲ್ಲಿ (ಕೋರ್ಟ್ ಹಿಂಭಾಗ) ಸಂಪರ್ಕಿಸಿ
8971261355 | 9591810822

We are Hiring!
Open Positions:
Data Entry Operator
Interview Timings:
10:00am to 3:00pm, Vacancy: 25
Vital Records Pvt Ltd
42, JCK Industrial Park, Hebbal Industrial Area, Metagalli, Mysore
hr@centuryvitalrecords.com
0821-2332005

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
9620528490

COMMERCIAL SITE (60X36) 80 FEET ROAD
@ Bramins Layout (Near Srirampura Ring Road)
MUDA APPROVED Mysore-
Rs. 54 Lackhs
9538839926

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

JOB VACANCY
(Company appointed)
Security Guards, Assistant Security Officer, Supervisors for Mysore City, Madikeri, Nanjangud, Gundlupet, Hunsur, H.D. Kote.
Salary: 12000 to 16000.
04 Weekly Off, Bonus, Gratuity.
Mob: 8618291971

GSS
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP
• FULLY DEVELOPED
• UNDER DEVELOPED
• PLAN SANCTIONED
96868-25025

ಮುಡಾ ಸೈಟು ಮಾರಾಟಕ್ಕಿದೆ
ಟೀಚರ್ಸ್ ಲೇಔಟ್, ವಾಣಿಜ್ಯ ನಿವೇಶನ ಸಂಖ್ಯೆ : 17, 50x40 ಮತ್ತು ಅದಕ್ಕೆ ಹೊಂದಿಕೊಂಡಂತೆ ರೇವೆನ್ಯೂ ನಿವೇಶನ 50x35
ಡಾ. ರಾಜಕುಮಾರ್ ರೋಡ್, ಶುಭೋದಯ ಆಸ್ಪತ್ರೆ ಎದುರು
9972725694

HOUSE FOR SALE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road Behind Indian Oil Petrol Bunk
9964414484

30x30 ಅಳತೆಯ MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ 21 ಲಕ್ಷದ 50 ಸಾವಿರಗಳು ಯಶಸ್ವಿನಿ ಲೇಔಟ್ ಶ್ರೀನಗರದಿಂದ 1 ಕಿ.ಮೀ ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ 9 ಲಕ್ಷದ 50 ಸಾವಿರಗಳು ಇಲವಾಲ ಹತ್ತಿರ, ಮೈಸೂರು
9742198093

ಅಂಗಡಿ ಬಾಡಿಗೆಗೆ ಇದೆ
ಇರ್ವಿನ್ ರಸ್ತೆ, ಮೈಸೂರು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9353400182

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ
9663466548

WANTED TELECALLERS
Male No 12
Female No 15
Kannada.Tamil.Telugu
Language Required
Salary 15k
Meghana H R
7829803426

WANTED
H.R
Accountant,
Tele Callers,
Event Managers,
Tv Anchors,
Marketing Managers,
Pigmy Collection Boy
8050052444

100% TEAK WOOD FACTORY FINISH DOORS @ DEPOT RATES

10 YEARS WARRANTY
www.ssbuildmart.com
9901291267
9845426862

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
SAS ಕಂಪನಿಯಲ್ಲಿ Ekart ಡೆಲಿವರಿ ಜಾಬ್‌ಗೆ ತಕ್ಷಣ ಬೇಕಾಗಿದ್ದಾರೆ. ಫಿಕ್ಸೆಡ್ ಸಂಬಳ: 15000 ರಿಂದ 20000, ಆಕರ್ಷಕ ಇನ್‌ಸೆಂಟಿವ್, ಬೇಕಾದ ದಾಖಲಾತಿಗಳು: ಆಧಾರ್ ಮತ್ತು ಡಿ.ಎಲ್ / ಎಲ್‌ಎಲ್‌ಆರ್, ಸ್ಥಳ: ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ.
ಕೂಡಲೇ ಸಂಪರ್ಕಿಸಿ
6361823683 | 7795420892

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೋಳು ತಲೆಯ ಸಮಸ್ಯೆಯೇ?

ಶಸ್ತ್ರಚಿಕಿತ್ಸೆ ಇಲ್ಲದೆ ... ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ನೀವು ಒಬ್ಬ ಟೀಚರ್ ಆಗಲು ಬಯಸುತ್ತೀರಾ?
SSLC ಪಾಸ್ ಆಗಿದೆಯಾ, PUC, Degree ಪಾಸ್ ಅಥವಾ ಫೇಲ್ ಆಗಿದೆಯಾ ? ಚಿಂತೆ ಬೇಡ
NURSERY TEACHER TRAINING
ಪ್ರವೇಶ ಪಡೆದು ತರಬೇತಿಯೊಂದಿಗೆ ಅರ್ಹತೆ ಪಡೆದ ಶಿಕ್ಷಕಿಯಾಗಬಹುದು ಶಿಕ್ಷಕಿಯಾಗಿ ಗೌರವ ಕೀರ್ತಿ ಪಡೆಯಿರಿ ಮತ್ತು ಸಂಪಾದನೆಯನ್ನು ಮಾಡಿ. ವಿವರಗಳಿಗೆ JNANA GANGOTRI CONVENT RAJENDRA NAGARA, MYSORE-570007
9243580672

ಸುವರ್ಣ ಯಾತ್ರ
ಶ್ರಾವಣ ಮಾಸದ ಪ್ರಯುಕ್ತ 2 ಜ್ಯೋತಿರ್ಲಿಂಗ್ ಸೇರಿ ಕಾಶಿ ಪ್ರವಾಸ 7 ದಿನಗಳು 30/08/2023 (ಬಾಬಾ ವೈದ್ಯನಾಥ, ಗಂಯಾ, ಬುದ್ಧಗಂಯಾ, ಪ್ರಯಾಗ್ ರಾಜ್, ಅಯೋಧ್ಯ, ನೈಮಿಶಾರಣ್ಯ)
9008381022
9019462508

ಬೇಕಾಗಿದ್ದಾರೆ
ಹೆಲ್ಪರ್ ಬಾಯ್
ವಿದ್ಯಾರ್ಹತೆ:
SSLC FAIL/PASS
ಸಮಯ: 9.30 ರಿಂದ 6.00
9448283542

ಬಯೋಟೆಕ್ ಕೆಮಿಕಲ್ಸ್‌ರವರಿಂದ
ನಿಮ್ಮ ಮನೆ RCC ಬಿರುಕು ಬಿಟ್ಟಿದೆಯೇ? ಗೋಡೆಗಳು ಬಿರುಕು ಬಿಟ್ಟಿವೆಯೋ? ಬಾತ್ ರೂಂ, ಟಾಯ್ಲೆಟ್‌ಗಳಿಂದ ವಸ್ತಿ ಬರುತ್ತಿದ್ದರೆ, ಟ್ಯಾಂಕ್ & ಸಂಪುಗಳಲ್ಲಿ ನೀರು ನಿಲ್ಲದಿದ್ದರೆ, ಕೂಡಲೇ ಸಂಪರ್ಕಿಸಿ ಗ್ಯಾರೆಂಟಿಯೊಂದಿಗೆ ಸರಿಪಡಿಸಿಕೊಡುತ್ತೇವೆ.
9739333346

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

3 BHK HOUSE FOR SALE
3 BHK Duplex House, 3 Yrs Old N/E Corner,Park Facing, 27x40, MUDA App, Panchacharya layout, Vijayanagar 4th Stage, Mysuru Near SVEI School
Price - Rs 1.18 cr
8660105902

ಕೆಲಸಕ್ಕೆ ಬೇಕಾಗಿದ್ದಾರೆ
B.Com, M.Com, MBA, B.E
ಪದವೀಧರರು ತಕ್ಷಣ ಸಂಪರ್ಕಿಸಿ:
9606547371
9066402684

ಕಳೆದಿದೆ
ರಾಮಯ್ಯ ಬಿನ್ ಅಳಗೇರಿ, ನಂ.27, ಅಂಬೇಡ್ಕರ್ ಕಾಲೋನಿ, ಕೂರ್ಗಳ್ಳಿ, ಮೈಸೂರು–570018 ಆದ ನನಗೆ ಇಲವಾಲ ಮಂಡಲ ಪಂಚಾಯಿತಿಯವರು ಕೂರ್ಗಳ್ಳಿ ಗ್ರಾಮದ ನಿವೇಶನ ಸಂಖ್ಯೆ 36ಕ್ಕೆ ಸಂಬಂಧಿಸಿದ ಮೂಲ ಹಕ್ಕು ಪತ್ರ ನೀಡಿದ್ದು, "ಹಕ್ಕುಪತ್ರವು" ದಿನಾಂಕ 10.08.2023ರಂದು ಮೈಸೂರು ನಗರದ ನಗರ ಬಸ್ ನಿಲ್ದಾಣ ಇಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ:
9739468866

ಹೋಂ ನರ್ಸ್
ವೃದ್ಧರನ್ನು ಮತ್ತು ಹಾಸಿಗೆ ಹಿಡಿದ ರೋಗಿಗಳನ್ನು ಅವರ ಮನೆಯಲ್ಲಿಯೇ ಉಳಿದುಕೊಂಡು ಆರೈಕೆ ಮಾಡುವ ಅನುಭವವಿರುವ ಹೋಂ ನರ್ಸ್ ಲಭ್ಯವಿದ್ದಾರೆ.
8861042384

1) 20x30 ಸೈಟು, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ – 23 ಲಕ್ಷ.
2) 20x30 Ground, 1st floor ಮನೆ ದಟ್ಟಗಳ್ಳಿ – 65 ಲಕ್ಷ.
3) 20x30 ಡ್ಯೂಪ್ಲೆಕ್ಸ್ ಹೊಸ ಮನೆ 3 Bedroom, Italian Kitchen & Fully Furnished ದಟ್ಟಗಳ್ಳಿ –75 ಲಕ್ಷ.
ಮೈಸೂರಿನ ಎಲ್ಲಾ ಬಡಾವಣೆಗಳಲ್ಲಿ ಸೈಟು ಮತ್ತು ಹಳೆಮನೆ ಹೊಸ ಮನೆ, ಮಾರುವವರು, ಕೊಳ್ಳುವವರು
9945042875



8184000444

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

SITE FOR SALE
60x40 feet East facing at Ahad City, Mysuru.
6 km from satellite bus stand
Mahadevapura road
Beautiful layout, Gated community, UGD Electricity, water, multiple gardens.
Best price Rs/ 1600-00per sft.
Contact: 9901231117

MATCH MAKERS, BRIDE / GROOMS
ವಧು/ವರರ ಮದುವೆ ಆಯ್ಕೆಗೆ
ಎಲ್ಲಾ ಜಾತಿಯ Govt Job, Private Jobs/ Factory Jobs | ಸ್ವಂತ ಶ್ರೀಮಂತ / ಮಧ್ಯಮ ವರ್ಗದ ವಧು–ವರರ ಆಯ್ಕೆಗಾಗಿ ಇರುವ ಲಕಾಂತರದಲ್ಲಿ ತಮ್ಮ ಆಯ್ಕೆಗಾಗಿ ಭೇಟಿ ನೀಡಿ.
ಸ್ವತಂತ್ರವಾಗಿರುವ 180 ವಧುಗಳಿಗೆ ವರ ಬೇಕು, ಕುರುಬರು ವಧುಗೆ 38 ವರ್ಷ ವರಬೇಕು, ಮನೆ ಅಳಿಯ ವಧುಗೆ 35 ವರ್ಷ ವರಬೇಕು
7975728012

40x73 East Face Site @Rs.94 Lakhs
MUDA Approved Layout Next to Vijayanagar 4th Stage, 12 Kms from Mysore City Center
9538583377

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

NEW BUILDING FOR RENT/LEASE
At Alanahalli Layout/ Lalitha Mahal Nagar
2 BHK Flats (6 Units)
Suitable for Services Apartments, PG, Company Staff Accommodation
Call: 9148448159

WANTED
PART TIME LECTURER
Economics
Business Studies
9535161811

30x40 E/F
ಸೈಟು @ Rs.30 ಲಕ್ಷ
MUDAAPPROVED LAYOUT ತಕ್ಷಣ ನೋಂದಣಿ/ ಬ್ಯಾಂಕ್ ಲೋನ್ ಲಭ್ಯ
ಬನ್ನೂರ್ ರಸ್ತೆ, ಮೈಸೂರು ರಿಂಗ್ ರೋಡ್ ನಿಂದ 4 KMS
9538583377

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ದೋಸೆ ಹಾಕುವವರು ಪುರುಷರು ಬೇಕಾಗಿದ್ದಾರೆ.
ಸ್ಥಳ: ಸುಳ್ಯ
9902176566

ಹೊಸ ಬೆಳಕು ಹೊಸ ಬದುಕು
ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
9449408551

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಚಾಮುಂಡೇಶ್ವರಿ ಸರ್ವೀಸ್
ಸಂಪು ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
7483013036

ಅಡುಗೆ ಕೆಲಸಕ್ಕೆ ಹಾಗೂ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ (ಮಹಿಳೆಯರು)
45 ವರ್ಷ ವಯಸ್ಸಿನ ಒಳಗಿನವರು
ಊಟ, ಆಕರ್ಷಕ ಸಂಬಳ, ವಸತಿ ಉಚಿತ
ಸ್ಥಳ: ಶೆಟ್ಟಿನಾಯಕನ ಹಳ್ಳಿ
9880546818/9686156396
ಬಸ್ ನಂ: 250–251, 245
ಎಲ್ಲಾ ಗದ್ದಿಗೆಗೆ ಹೋಗುವ ಬಸ್‌ಗಳು

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ಡ್ರೈವರ್–10 ಜನ
ಸ್ಥಳ: ಮೈಸೂರು–ಬೆಂಗಳೂರು
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ (2 ವರ್ಷ Exp)
ಮಾರ್ಕೆಟಿಂಗ್ ಮ್ಯಾನೇಜರ್ (2 ವರ್ಷ Exp)
MOVE MY GOODS
9019029036

WANTED
SHOP HELPER
Male or Female
Qualification: Above SSLC
Location: Near Agrahara
Contact: 7204368222

CHANGE OF NAME
I, SIMRAN A. HEMDEV, D/o Mr. ASHWINI KUMAR P. HEMDEV, residing at No.101/A, 6th Main, Brindavan Extension 1st Stage, MYSORE-570020, KARNATAKA STATE, INDIA. do hereby solemnly affirm and state on oath that I have changed my name as A. YAASHNAA HEMDEV on my own free will and desire wide affidavit sworn in before notary L.H. Rajendran dated 21.08.2023. Hereinafterwards I use and sign my name as A. YAASHNAA HEMDEV in all my official and private matters in future.
Sd/-A. YAASHNAA HEMDEV

READYMADE SHOP CLOTH FOR SALE
All types of clothes with furnitures near SBI Bank, SBI main road, Hebbal 1st Stage-570016
Contact: 9482289026

DOCUMENT LOST
I, C. Mallesh, R/at 581, 1st Cross, Bamboo Bazar, Gul Pet, Kolar -563101 have lost Allottment Letter No. EWS 1489, Srirampura 1st Stage in CBS, Mysore. Finders please Contact: 9108215454

DOCUMENT LOST
I, Venkataramana .N, R/at 327, I Main Road, Bamboo Bazar, Gul Pet, Kolar -563101 have lost Allottment Letter No. EWS 1491, Srirampura 1st Stage in CBS, Mysore. Finders please Contact: 8970878195

SITE FOR SALE
30x40, Site No. 09, Sy No. 5/2, Srirampura. Final Price: Rs. 44 Lakhs
40x60, Site No. 315, ವಿಶ್ವಪ್ರಜ್ಞ ಗೃಹ ನಿರ್ಮಾಣ Near RT Nagar, Rs. 3500/- SFT Final
Owner Mahesh: 9448254453
Both North Face

ಬೇಕಾಗಿದ್ದಾರೆ
ಜಿಲ್ಲಾವಾರು, ತಾಲ್ಲೂಕುವಾರು, ಹೋಬಳಿವಾರು, ಗ್ರಾಮವಾರು
1. ಫೈನಾನ್ಷಿಯಲ್ ಅಡ್ವೈಸರ್‌ಗಳು (ಪುರುಷ)
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಗ್ರಿ
ವಯಸ್ಸು: 20 ರಿಂದ 70 ವರ್ಷಗಳು
(ಆಧಾರ್ ಕಾರ್ಡ್+ಪಾನ್‌ಕಾರ್ಡ್+ಬ್ಯಾಂಕ್‌ಪಾಸ್ ಬುಕ್ ಹಾಗೂ 3 ಫೋಟೊ ತರಬೇಕು). ಸಂಪರ್ಕಿಸಿ
9986329765 , 9538815333

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267
98454 26862

(ಉಚಿತ ಭವಿಷ್ಯ)
ಶ್ರೀ ಮಂಜುನಾಥ ಸ್ವಾಮಿ ಜ್ಯೋತಿಷ್ಯಂ
ಪಂಡಿತ್ ವಿಷ್ಣುಕಾಂತ್ ಜೋಶಿ
8549998630
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳಾದ ಸಾಲದ ಬಾಧೆ, ದಂಪತ್ಯ ಸಮಸ್ಯೆ ಕೋರ್ಟ್ ಕೇಸ್ ಸಮಸ್ಯೆ ಪ್ರೀತಿಯಲ್ಲಿ ನಂಬಿ ಮೋಸ ಇನ್ನು ಅನೇಕ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ತಿಳಿಸುತ್ತಾರೆ. ಫೋನಿನ ಮುಖಾಂತರ ಅಥವಾ ನೇರವಾಗಿ ಚಾಮರಾಜನಗರಕ್ಕೆ ಬಂದು ಭೇಟಿ ಮಾಡಿ.

ವಿಕೇಂಡ್ ಪ್ರವಾಸ
ದಿನಾಂಕ – 23 ಸೆಪ್ಟೆಂಬರ್ 2023.
02 ದಿನಗಳು, ವೀಕ್ಷಿಸುವ ಸ್ಥಳಗಳು, 1.ನಿರ್ವಾಣ ಬೀಚ್, 2. ಪ್ಯಾರಡೈಸ್ ಬೀಚ್, 3. ಮಿರ್ಜಾನ್ ಕೋಟೆ, 4.ಯಾಣ ಗುಹೆಗಳು, 5. ಮುರುಡೇಶ್ವರ ಊಟ, ತಿಂಡಿ, ಕಾಫಿ/ಟೀ, ಪ್ರತ್ಯೇಕ ಬ್ಯಾಂಬೂ ಹಟ್ ಮತ್ತು ಟೆಂಟ್‌ನಲ್ಲಿ ಸ್ಟೇ, ಈ ಎಲ್ಲಾ ಸವಲತ್ತುಗಳು ಸೇರಿ ಒಬ್ಬರಿಗೆ 5000 ರೂಪಾಯಿಗಳು ಮಾತ್ರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7022271023

ಬೇಕಾಗಿದ್ದಾರೆ
ಸರ್ಕಾರದಿಂದ ಮಾನ್ಯತೆ ಪಡೆದಿರುವ ವರಧಾನಿ ಹೋಮ್ ನರ್ಸಿಂಗ್ ಸಂಸ್ಥೆಗೆ 24 ಗಂಟೆ ಅಲ್ಲೇ ಇದ್ದು ಅಥವಾ 8 ಗಂಟೆ ಸಮಯ ವಯಸ್ಸಾದವರವನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಮಹಿಳೆಯರು ಹೋಮ್ ನರ್ಸ್ ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ
8123630683

SKANDA PROPERTIES
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದ ಪದಾರ್ಥಗಳಿಂದ Rs. 1699/-Sft ದರದಲ್ಲಿ ನಿರ್ಮಿಸಿಕೊಡಲಾಗುವುದು 1 year free maintenanceಮತ್ತು 8 ತಿಂಗಳಲ್ಲಿ ಮನೆಯನ್ನುHandover ಮಾಡಲಾಗುವುದು
9379888558/8310008208

ಬೇಕಾಗಿದ್ದಾರೆ
ಜೀನಿ ಕಂಪನಿಯಲ್ಲಿ ಮಾರ್ಕೆಟಿಂಗ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿಯುಸಿ/ ಯಾವುದೇ ಡಿಗ್ರಿ, ವಯೋಮಿತಿ: 20 ರಿಂದ 40. ಸಂಪರ್ಕಿಸಿ:
6364888393, 9731969772

ತಕ್ಷಣವೇ ಬೇಕಾಗಿದ್ದಾರೆ
ಪ್ರತಿಷ್ಠಿತ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಹುದ್ದೆ: 1.ಸೇಲ್ಸ್ ಮ್ಯಾನೇಜರ್ (ಪ್ರತಿ ತಾಲ್ಲೂಕು ಮತ್ತು ಜಿಲ್ಲೆ), 2.ಟೆಲಿಸೇಲ್ಸ್ ಎಕ್ಸಿಕ್ಯೂಟಿವ್ಸ್, ಅನುಭವ: Freshers & experieance, ಸಂಬಳ: ಆಕರ್ಷಕ ಸಂಬಳ ಜೊತೆಗೆ ಇನ್ಸೆಂಟಿವ್ ಟಾರ್ಗೆಟ್ ಇರುತ್ತದೆ.
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ to ಯಾವುದೇ ಡಿಗ್ರಿ
ಸಂಪರ್ಕಿಸಿ
8050923846, 08214255550

ಪ್ರಮಾಣಪತ್ರ
ರಾಣಿ ಟಿ.ಸಿ . W/o. ಮಧುಸೂದನ್ ಎಂ, # 209/3 NO-05, ಜನಹಿತ ರಸ್ತೆ, 2ನೇ ಹಂತ, ಬೋಗಾದಿ, ಮೈಸೂರು–570026 ಆದ ನಾನು ಪ್ರಮಾಣೀಕರಿಸುವುದೇನೆಂದರೆ ನನ್ನ ಆಧಾರ್ ಕಾರ್ಡ್ ಹಾಗೂ ... ರಾಣಿ ಟಿ.ಸಿ. ಹೆಸರು ... ಕೊಟ್ಯಾಕ್ ಮಹೀಂದ್ರ ಬ್ಯಾಂಕ್, ಸರಸ್ವತಿಪುರಂ ಶಾಖೆ, ಮೈಸೂರು ಬ್ಯಾಂಕಿನ ಪಾಸ್‌ಬುಕ್‌ನಲ್ಲಿ ನನ್ನ ಹೆಸರು ರಾಣಿ ... ತಪ್ಪಾಗಿ ... ರಾಣಿ, ರಾಣಿ ಟಿ.ಸಿ. ಎರಡೂ ಹೆಸರು ನನ್ನವೇ ಎಂದು ದಿನಾಂಕ: 21.08.2023ರಂದು ನೋಟರಿಯವರಾದ ಎಸ್. ಪವಿತ್ರ, ಮೈಸೂರು ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇನೆ.
ಸಹಿ/– ರಾಣಿ ಟಿ.ಸಿ

GOVT. APPROVED SITES FOR SALE
1) Vijayanagar 4th Stage
2) Near MIT Colege
Installment facility available
Call: 9983358399

WANTED
HOUSE FOR LEASE
3 BHK house or flat with car parking in Vijayanagar
Contact:6364322628

ಮನೆ ಬೋಗ್ಯಕ್ಕೆ ಬೇಕಾಗಿದೆ
ಮೈಸೂರಿನ ವಿಜಯನಗರ, ಹೂಟಗಳ್ಳಿ, ಹೆಬ್ಬಾಳ, ಮೇಟಗಳ್ಳಿ, ಶಾರದದೇವಿನಗರ, ರಾಮಕೃಷ್ಣನಗರ, ಜೆ.ಪಿ.ನಗರ, ಬೋಗಾದಿ ಹಾಗೂ ಸಿದ್ಧಾರ್ಥ ಲೇಔಟ್ ಇವುಗಳ ಸುತ್ತಮುತ್ತಲಿನಲ್ಲಿ ಮನೆಯನ್ನು ಬೋಗ್ಯಕ್ಕೆ ಕೊಡುವವರು ನಮ್ಮನ್ನು ಸಂಪರ್ಕಿಸಿ
9206470833 ಸುರೇಶ್

42X22 DIMENSION 2 BHK HOUSE AVAILABLE FOR LEASE
in Naidunagar, near to bus stand.
For more details contact:
9902311491

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಸೂಪರ್‌ವೈಸರ್ –2
ಹೌಸ್‌ಕೀಪರ್ (ಪುರುಷ/ಮಹಿಳೆ)–4
ಹೋಟೆಲ್ ಉದ್ಯಮದಲ್ಲಿ ಅನುಭವವಿರಬೇಕು
ಸಂಪರ್ಕಿಸಿ: ದಿ ಕೋರಮ್ ಹೋಟೆಲ್
2257/1, ವಿನೋಬಾ ರಸ್ತೆ, ಕಲಾಮಂದಿರದ ಹತ್ತಿರ, ಮೈಸೂರು
ಸಂಪರ್ಕಿಸಿ:
9620274629/ 9620274630


ಬೇಕಾಗಿದ್ದಾರೆ
ಟ್ಯಾಲಿ ಆಪರೇಟರ್–ಮಹಿಳೆ
ಸ್ನೇಹ ಎಂಟರ್‌ಪ್ರೈಸೆಸ್
ಗಾಯತ್ರಿ ಟಾಕೀಸ್ ಪಕ್ಕ
ಚಾಮರಾಜ ಡಬ್ಬಲ್ ರೋಡ್, ಮೈಸೂರು
8892641666

COMMERCIAL SPACE FOR RENT
1600 Sq ft. Kuvempu Nagar Nrupathunga Road, Beside SBI, Suitable for All kind of Show Room, Medical Store, Doctor Clinic, Provision Store, Hotel, Offices Etc., contact:
94480 47419 / 88613 77771

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕೆಆರ್ ಆಸ್ಪತ್ರೆ ಇಂದಿರಾ ಕ್ಯಾಂಟಿನ್‌ನಲ್ಲಿ ಅನ್ನ ಬೆಂದಿರಲಿಲ್ಲ

- ಅಧಿಕಾರಿಗಳ ಪರಿಶೀಲನಾ ಸಮಿತಿಯಿಂದ ಆಹಾರ ಗುಣಮಟ್ಟ; ಸ್ವಚ್ಛತೆ ಪರಿಶೀಲನೆ
- ಆಹಾರದ ಗುಣಮಟ್ಟದ ಬಗ್ಗೆ ಅಧಿಕಾರಿಗಳ ಅತೃಪ್ತಿ
- ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲು ನಿರ್ಧಾರ





ಮೈಸೂರು, ಆ. 23(ಆರ್‌ಕೆ)– ವಿವಿಧ ಇಲಾಖೆ ಅಧಿಕಾರಿಗಳನ್ನೊಳಗೊಂಡ ಆಹಾರ ಗುಣಮಟ್ಟ ಮೇಲ್ವಿಚಾರಣಾ ಸಮಿತಿ ಸದಸ್ಯರು ಮಂಗಳವಾರ ಮೈಸೂರಿನ ಕೆ.ಆರ್. ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸಾರ್ವಜನಿಕರಿಂದ ಯಾವುದೇ ದೂರು ಬಾರದಂತೆ ಇಂದಿರಾ ಕ್ಯಾಂಟಿನ್‌ಗಳಲ್ಲಿ ಆಹಾರ ಪೂರೈಸುವ ಮತ್ತು ಸ್ವಚ್ಛತೆ ನಿರ್ವಹಣೆ ಬಗ್ಗೆ ಖುದ್ದು ಭೇಟಿ ನೀಡಿ ಪರಿಶೀಲಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತರು, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ, ಪಾಲಿಕೆ ವಲಯ ಕಚೇರಿ ಸಹಾಯಕ ಆಯುಕ್ತರು, ಆರೋಗ್ಯಾಧಿಕಾರಿಗಳು ಸದಸ್ಯರಾಗಿದ್ದಾರೆ.

ಸಮಿತಿ ಸದಸ್ಯರು ಪ್ರತೀ 15 ದಿನಕ್ಕೊಮ್ಮೆ ಇಂದಿರಾ ಕ್ಯಾಂಟಿನ್‌ಗಳಿಗೆ ಭೇಟಿ ನೀಡಿ ತಿಂಡಿ, ಅಲ್ಲಿನ ಊಟ ಸವಿದು ಆಹಾರದ ಗುಣಮಟ್ಟ ಪರಿಶೀಲಿಸಿ ವರದಿ ನೀಡುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಗಳವಾರ ಮಧ್ಯಾಹ್ನ 1 ಗಂಟೆ ವೇಳೆಗೆ ಕೆ.ಆರ್. ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಿದ ಅಧಿಕಾರಿಗಳು, ಸಾರ್ವಜನಿಕರಿಗೆ ನೀಡುತ್ತಿರುವ ಊಟ ಪರಿಶೀಲಿಸಿದರು.

ಅನ್ನ ಸರಿಯಾದ ಪ್ರಮಾಣದಲ್ಲಿ ಬೆಂದಿರಲಿಲ್ಲ ಹಾಗೂ ಗುಣಮಟ್ಟ ತೃಪ್ತಿಕರವಾಗಿರಲಿಲ್ಲವಾದ್ದರಿಂದ ಕ್ಯಾಂಟಿನ್ ನಡೆಸುತ್ತಿರುವವರಿಗೆ, ಅನ್ನಕ್ಕೆ ಬಳಸುತ್ತಿರುವ ಅಕ್ಕಿ ಬದಲಿಸಬೇಕು, ಅನ್ನ ತಯಾರಿಸುವ ವಿಧಾನದಲ್ಲಿ ಸುಧಾರಣೆಯಾಗಬೇಕೆಂದು ಅಧಿಕಾರಿಗಳು ಸೂಚನೆ ನೀಡಿದರು.


ಊಟ–ತಿಂಡಿ ಪ್ರಮಾಣ, ಗುಣಮಟ್ಟ ಸರಿಯಾಗಿರಬೇಕು, ಪಾತ್ರೆ, ಆಹಾರ ವಿತರಿಸುವ ಕೌಂಟರ್ ಶುದ್ಧವಾಗಿರಬೇಕು, ಕುಡಿಯಲು ಶುದ್ಧ ನೀರು ಪೂರೈಸಿ, ಶೌಚಾಲಯವನ್ನು ಸೂಕ್ತ ರೀತಿಯಲ್ಲಿ ಸ್ವಚ್ಛಗೊಳಿಸಿ ನಿರ್ವಹಣೆ ಮಾಡಬೇಕೆಂದು ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ. ನಾಗರಾಜ್ ಮತ್ತು ವಲಯ ಕಚೇರಿ–6ರ ವಲಯಾಧಿಕಾರಿ ಎಂ.ಎಸ್. ಪ್ರತಿಭಾ ಸಲಹೆ ನೀಡಿದರು.

ಸರಿಯಾದ ಸಮಯಕ್ಕೆ ಆಯಾ ದಿನ ನಿಗದಿಯಾಗಿರುವ ವೇಳಾಪಟ್ಟಿ ಹಾಗೂ ಆಹಾರ ಪಟ್ಟಿಯನ್ವಯ ಬೆಳಗಿನ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ಜನರಿಗೆ ಪೂರೈಸಬೇಕು. ಗುಣಮಟ್ಟ ಮತ್ತು ಪ್ರಮಾಣದಲ್ಲಿ ವ್ಯತ್ಯಾಸವಾಗಬಾರದು, ಸಾರ್ವಜನಿಕರಿಂದ ದೂರು ಕೇಳಿಬಂದರೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಅವರು ಇಂದಿರಾ ಕ್ಯಾಂಟಿನ್ ಆಹಾರ ಪೂರೈಸುವವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಡಾ. ನಾಗರಾಜ್ ತಿಳಿಸಿದ್ದಾರೆ.

ಮಂಗಳವಾರ ತಾವು ಭೇಟಿ ನೀಡಿ ಪರಿಶೀಲಿಸಿದ ಇಂದಿರಾ ಕ್ಯಾಂಟಿನ್‌ನಲ್ಲಿ ಕಂಡುಬಂದ ಲೋಪದೋಷಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುತ್ತೇವೆ ಎಂದು ಅವರು ತಿಳಿಸಿದರು.

ಮೈಸೂರಲ್ಲಿ 11 ಕಡೆಗಳಲ್ಲಿ ಇಂದಿರಾ ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿದ್ದು, ತಾವು 15 ದಿನಗಳಿಗೊಮ್ಮೆ ಒಂದೊಂದು ಕ್ಯಾಂಟಿನ್‌ಗಳಿಗೆ ಭೇಟಿ ನೀಡಿ ಆಹಾರದ ಗುಣಮಟ್ಟ, ಶುಚಿತ್ವದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಚಂದ್ರಯಾನ–3 ಯಶಸ್ವಿ ತಂಡದಲ್ಲಿ ಮಂಡ್ಯದ ಯುವ ವಿಜ್ಞಾನಿ



ಮಂಡ್ಯ, ಆ.23– ಚಂದಿರನ ಅಂಗಳದಲ್ಲಿ ಕಾಲಿಟ್ಟ ಚಂದ್ರಯಾನ.3 ಯಶಸ್ವಿ ತಂಡದಲ್ಲಿ ನಾಗಮಂಗಲ ತಾಲ್ಲೂಕಿನ ಯುವ ವಿಜ್ಞಾನಿ ರವಿ ಟಿ.ಗೌಡ ಕರ್ತವ್ಯ ನಿರ್ವಹಿಸಿದ್ದು ಮಂಡ್ಯ ಜಿಲ್ಲೆಗೆ ಕೀರ್ತಿಯಾಗಿ ಹೊರಹೊಮ್ಮಿದೆ. ಎಂ.ಟೆಕ್ ಪದವೀಧರರಾದ ಅವರು ಇಸ್ರೋದಲ್ಲಿ 2011ರಿಂದ ಕೆಲಸ ಮಾಡುತ್ತಿದ್ದಾರೆ. ಚಂದ್ರಯಾನ–3 ಲ್ಯಾಂಡರ್ ವಿಶೇಷ ಪರೀಕ್ಷಾ ಕಾರ್ಯದಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ತಾಲ್ಲೂಕಿನ ಅಂಚೆಚಿಟ್ಟನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ಹುಲಿಕೆರೆ ಗ್ರಾಮದ ಆದಿಶಕ್ತಿ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ, ಕೆಆರ್.ಪೇಟೆ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ, ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ನಂತರ ಬೆಂಗಳೂರು ವಿವಿಯಲ್ಲಿ ಎಂ.ಟೆಕ್ ಶಿಕ್ಷಣ ಪೂರೈಸಿದ್ದಾರೆ.

ಚಂದ್ರಯಾನ .3 ಲ್ಯಾಂಡರ್ ಪರೀಕ್ಷಾ ಕಾರ್ಯ ಬೆಂಗಳೂರಿನಲ್ಲೇ ಹೆಚ್ಚು ನಡೆದಿದೆ. ದೇಶದ ಕೋಟ್ಯಂತರ ಪ್ರಜೆಗಳ ಪೂಜೆಯ ಫಲವಾಗಿ ಇಂದು ಲ್ಯಾಂಡರ್ ಚಂದ್ರನ ಅಂಗಳ ಸೇರಿದೆ. ಚಂದ್ರಯಾನ–3ನಲ್ಲಿ ಕೆಲಸ ಮಾಡಿದ್ದು ನನ್ನ ಪೂರ್ವ ಜನ್ಮದ ಪುಣ್ಯ' ಎಂದು ಅವರು ಮಾಧ್ಯಮಗಳಿಗೆ ತಿಳಿಸಿದರು.

ಆ.26, ಶಿಕ್ಷಕರ ಸೆಮಿನಾರ್

ಮೈಸೂರು, ಆ. 23– ಮೈಸೂರಿನ ಆರ್.ಎಸ್.ನಾಯ್ಡುನಗರದಲ್ಲಿರುವ ಪುಷ್ಪಾಶ್ರಮ ತತ್ತ್ವಶಾಸ್ತ್ರ ಮತ್ತು ಧರ್ಮ ಸಂಸ್ಥೆಯಲ್ಲಿ ಆ.26ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಶಿಕ್ಷಕರ ಸೆಮಿನಾರ್ ಅನ್ನು ಆಯೋಜಿಸಲಾಗಿದೆ. ಅಂತಾರಾಷ್ಟ್ರೀಯ ಖ್ಯಾತಿಯ ಡಾ. ಆಶಾ ಪಿ.ಪತ್ರೋಸ್, ಡಾ.ಎನ್.ಎನ್. ಪ್ರಹ್ಲಾದ ಮತ್ತು ಡಾ.ಕೆ.ಯಶೋಧರ ಅವರು ಮುಖ್ಯ ಭಾಷಣಕಾರರಾಗಿದ್ದಾರೆ. ಭಾಗವಹಿಸಲು ಆಸಕ್ತಿಯುಳ್ಳವರು ವಾಟ್ಸಾಪ್ 9880699068, 7338622073 ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಒಂದನೇ ಪುಟದಿಂದ

ಚಂದ್ರಯಾನ–3 ಯಶಸ್ವಿ

ವಿಕ್ರಮ್ ಲ್ಯಾಂಡರ್ ಚಂದ್ರನ ದಕ್ಷಿಣ ಧ್ರುವದಲ್ಲಿ ಮೊದಲ ಬಾರಿಗೆ ಲ್ಯಾಂಡಿಂಗ್ ಆಗುವ ಮೂಲಕ ದಾಖಲೆ ನಿರ್ಮಿಸುವುದರೊಂದಿಗೆ ಲ್ಯಾಂಡರ್ ಮತ್ತು ರೋವರ್ ಚಂದ್ರನ ದಿನದ (14 ಭೂಮಿಯ ದಿನಗಳು) ಮಿಷನ್ ಜೀವನವನ್ನು ಹೊಂದಿದ್ದು, ಈ ಸಮಯದಲ್ಲಿ ಅದು ಆನ್–ಸೈಟ್ ಪ್ರಯೋಗಗಳನ್ನು ನಡೆಸಲಿದೆ. ಇಂದು ಸಂಜೆ 5.40ರಿಂದ 6.04 ನಿಮಿಷದವರೆಗೆ ಚಂದ್ರಯಾನ–3 ವಿಕ್ರಂ ಲ್ಯಾಂಡರ್ ಸೇಫ್ ಲ್ಯಾಂಡಿಂಗ್‌ಗೆ ಇಸ್ರೋ ವಿಜ್ಞಾನಿಗಳು ಭಾರೀ ಯೋಜನೆ ಹಾಕಿಕೊಂಡಿದ್ದರು. ಅದರಂತೆ ಅದರ ವೇಗವನ್ನು ಕಡಿಮೆ ಮಾಡಲು 4 ಥ್ರಸ್ಟರ್ ಎಂಜಿನ್‌ಗಳ ರೆಟ್ರೋ ಫೈರಿಂಗ್‌ನೊಂದಿಗೆ ವಿಕ್ರಂ ಲ್ಯಾಂಡರ್‌ನ ಚಾಲಿತ ಬ್ರೇಕಿಂಗ್ ಆರಂಭವಾಯಿತು. ನಂತರ ಕೊನೆಯ 17 ನಿಮಿಷಗಳು ಇಸ್ರೋ ವಿಜ್ಞಾನಿಗಳಿಗೆ ಕಠಿಣ ಸವಾಲನ್ನೊಡ್ಡಿತ್ತು. ಆದರೆ ವಿಶೇಷ ಕಾಳಜಿ ಹಾಗೂ ನೈಪುಣ್ಯತೆಯಿಂದ ಎಲ್ಲಾ ಕಠಿಣ ಸವಾಲುಗಳನ್ನು ಇಸ್ರೋ ವಿಜ್ಞಾನಿಗಳು ಯಶಸ್ವಿಯಾಗಿ ನಿಭಾಯಿಸಿ ಗುರಿ ತಲುಪಿದ್ದಾರೆ. ಈ ಮೊದಲು ಚಂದ್ರನಲ್ಲಿ ಭಾರತಕ್ಕೂ ಮುನ್ನ ರಷ್ಯಾ, ಚೀನಾ ಮತ್ತು ಅಮೇರಿಕಾ ಯಶಸ್ವಿಯಾಗಿ ರೋವರ್ ಅನ್ನು ಇಳಿಸಿದ್ದವು. ಭಾರತ ಈ ಸಾಧನೆ ಮಾಡಿದ ನಾಲ್ಕನೇ ರಾಷ್ಟ್ರವಾಗಿದೆ. ಮೇಲಾಗಿ ಚಂದ್ರನ ದಕ್ಷಿಣ ಧ್ರುವದಲ್ಲಿ ಸೇಫ್ ಲ್ಯಾಂಡಿಂಗ್ ಮಾಡಿದ ಮೊದಲ ರಾಷ್ಟ್ರವಾಗಿದೆ. ಇಸ್ರೋ ವಿಜ್ಞಾನಿಗಳ ಈ ಸಾಧನೆಯನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ.

ಚಂದಿರನಲ್ಲಿ ನಡೆದಾಡುವ ಸಮಯ ಬಂದಿದೆ

ಸುರಿಮಳೆಗರೆದರು. ವರ್ಚುವಲ್ ಆಗಿ ಮಾತನಾಡಿ ವಿಜ್ಞಾನಿಗಳ ಸಾಧನೆಯನ್ನು ಮುಕ್ತಕಂಠದಿಂದ ಹೊಗಳಿದರು. ವಿಕ್ರಮ್ ಚಂದಿರನ ಮೇಲೆ ಹೆಜ್ಜೆ ಇಟ್ಟ ಕ್ಷಣ ಐತಿಹಾಸಿಕವಾದುದು. ಅದರ ಹೆಜ್ಜೆಯ ಸಪ್ಪಳವು ಭಾರತದ ಅಭಿವೃದ್ಧಿಗೆ ಕಹಳೆ ಮೊಳಗಿಸಿದೆ ಎಂದು ಅಭಿಪ್ರಾಯಪಟ್ಟರು. ಇಂದಿನ ಚಾರಿತ್ರಿಕ ದಿನವನ್ನು ಎಂದಿಗೂ ಮರೆಯಲಾಗದು. ಭಾರತವು ಚಂದಿರನ ದಕ್ಷಿಣ ಧ್ರುವಕ್ಕೆ ಬಾಹ್ಯಾಕಾಶ ನೌಕೆ ಕಳುಹಿಸಿದ ವಿಶ್ವದ ಮೊದಲ ರಾಷ್ಟ್ರವಾಗಿದೆ. ಬೇರೆ ಯಾವುದೇ ರಾಷ್ಟ್ರಕ್ಕೂ ಇದುವರೆಗೆ ಈ ಸಾಧನೆ ಮಾಡಲಾಗಿಲ್ಲ ಎಂದು ಹೇಳಿದರು. ಭಾರತವು ಏಕಾಂಗಿಯಾಗಿ ಈ ಚಂದ್ರಯಾನದ ಯಶಸ್ಸು ಸಾಧಿಸಿಲ್ಲ. ಇಡೀ ವಿಶ್ವಕ್ಕೆ ಒಂದೇ ಭೂಮಿ; ಒಂದೇ ಕುಟುಂಬ; ಒಂದೇ ಭವಿಷ್ಯ ಎಂಬುದು ಭಾರತದ ತತ್ವ ಇದು ಮಾನವ ಕೇಂದ್ರಿತ ಯೋಜನೆ. ಹಾಗಾಗಿ, ಇದರ ಸಂಪೂರ್ಣ ಯಶಸ್ಸು ಇಡೀ ಮನುಕುಲಕ್ಕೆ ಸಲ್ಲುತ್ತದೆ ಎಂದು ವ್ಯಾಖ್ಯಾನಿಸಿದರು. ಭಾರತ ಈಗ ಜಿ20 ಶೃಂಗಸಭೆಯ ಆತಿಥ್ಯ ಹೊತ್ತಿದೆ. ಇದರ ಹೊಸ್ತಿನಲ್ಲಿಯೇ ಈ ಸಾಧನೆ ಮಾಡಿದೆ. ನವ ಭಾರತಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಹೊಸ ಇತಿಹಾಸ ಸೃಷ್ಟಿಸಿದ್ದೇವೆ ಎಂದರು. ನಾನು ದೈಹಿಕವಾಗಿಯಷ್ಟೇ ಬ್ರಿಕ್ಸ್ ಸಭೆಯಲ್ಲಿ ಪಾಲ್ಗೊಂಡಿದ್ದೇನೆ. ನನ್ನ ಹೃದಯ ಮತ್ತು ಆತ್ಮ ಅಲ್ಲಿದೆ (ಭಾರತ) ಎಂದು ಹೇಳಿದರು.

ಚಂದಾಮಾಮಾನ ಪದ್ಯ ಬದಲಾಗಲಿದೆ ನಾವು ದೇಶವನ್ನು ಭಾರತ ಮಾತೆಯೆಂದೂ ಚಂದ್ರನನ್ನು ಚಂದಾಮಾಮಾ ಎಂದೂ ಕರೆಯುತ್ತಿದ್ದೆವು. ಇನ್ನುಮೇಲೆ ಮಕ್ಕಳು ಕಲಿಯಬೇಕಾಗಿರುವ ಪದ್ಯಗಳು ಬದಲಾಗಲಿವೆ. ನಾವೆಲ್ಲ ಚಂದ್ರ ಬಹುದೂರ ಇದ್ದಾನೆ (ಚಂದಮಾಮಾ ಬಡೇ ದೂರ್ ಕೆ ಹೈ) ಅಂತಿದ್ವಿ. ಈಗಿನ ಮಕ್ಕಳು ಚಂದ್ರ ಮಾಮಾನತ್ತ ಪ್ರವಾಸಕ್ಕೆ ಹೋಗುತ್ತೇವೆ (ಚಂದಾಮಾಮಾ ಏಕ್ ಟೂರ್ ಕೆ ಹೈ) ಎಂದು ಕಲಿಯುತ್ತಾರೆ ಎಂದು ಹೇಳಿದರು. ಸೌರ ಮಂಡಲದ ಸೀಮೆಗಳನ್ನು ಮೀರಿ ಅಧ್ಯಯನ ನಡೆಸಲಾಗುವುದು. ಬ್ರಹ್ಮಾಂಡದ ಎಲ್ಲ ರಹಸ್ಯಗಳನ್ನು ಭೇದಿಸಲಾಗುವುದು. ಶೀಘ್ರವೇ ಸೂರ್ಯನ ವಿಸ್ತೃತ ಅಧ್ಯಯನಕ್ಕಾಗಿ ಆದಿತ್ಯ ಎಲ್‌ಒನ್ ಯೋಜನೆ ಹಾಗೂ ಶುಕ್ರನ ಅಧ್ಯಯನಕ್ಕೂ ಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು. ದೇಶದ ಅಭ್ಯುದಯಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನವೇ ಬುನಾದಿ. ಇನ್ನುಮುಂದೆ ದೇಶದ ಕಥನಗಳೇ ಬದಲಾಗುತ್ತವೆ. ಮೊದಲೆಲ್ಲ ಸಂಕಲ್ಪಗಳ ಸಿದ್ಧಿಯ ಮಾರ್ಗ ತೋರುತ್ತಿದ್ದೆವು. ಸೋಲಿನಿಂದ ಪಾಠ ಕಲಿತು ಗೆಲುವನ್ನು ಸಾಧಿಸುವ ಪಾಠಕ್ಕೆ ಇದು ಉದಾಹರಣೆಯಾಗಿದೆ. ಇಸ್ರೊದ ಭವಿಷ್ಯದ ಯೋಜನೆಗಳಿಗೆ ಶುಭವಾಗಲಿದೆ ಎಂದರು.

ಅ.1ರಿಂದ ಆಸ್ತಿ ಮಾರ್ಗಸೂಚಿ ದರ ಹೆಚ್ಚಳ

ಮೈಸೂರು, ಆ. 23– ಬರುವ ಆಕ್ಟೋಬರ್ 1ರಿಂದ ರಾಜ್ಯದಲ್ಲಿನ ನಿವೇಶನ, ಕಟ್ಟಡ ಹಾಗೂ ಭೂಮಿ ಸೇರಿದಂತೆ ಸ್ಥಿರಾಸ್ತಿಗಳ ಮಾರ್ಗಸೂಚಿ ದರ (ಗೈಡ್‌ಲೈನ್ ವ್ಯಾಲ್ಯೂ) ಪರಿಷ್ಕರಣೆ ಆಗುತ್ತಿದೆ. ಆ ಮೂಲಕ ಮುದ್ರಾಂಕ ಶುಲ್ಕವು ಹೆಚ್ಚಳವಾಗಲಿದೆ. ಈ ಸಂಬಂಧ ಅಧಿಕಾರಿಗಳನ್ನೊಳಗೊಂಡಂತಹ ಉಪ ಸಮಿತಿಗಳನ್ನು ರಚಿಸಲಾಗಿದ್ದು, ಯಾವ ಪ್ರಮಾಣದಲ್ಲಿ ಆಸ್ತಿ ಮೌಲ್ಯ ಪರಿಷ್ಕರಿಸಬೇಕೆಂಬ ಪ್ರಾಥಮಿಕ ಚರ್ಚೆ ಈಗ ಆರಂಭವಾಗಿದೆ.

ಈಗಾಗಲೇ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಅಧಿಕಾರಿಗಳ ಸಭೆ ನಡೆಸಿ ಕೆಲವು ಸಲಹೆ–ಸೂಚನೆಗಳನ್ನು ನೀಡಿದ್ದಾರೆ. ಈ ಹಿಂದಿನ ಲೆಕ್ಕಾಚಾರಗಳನ್ನು ನೋಡಿದರೆ ಆಸ್ತಿಗಳ ಮಾರ್ಗಸೂಚಿ ದರ ಕನಿಷ್ಠ ಶೇ. 20ರಿಂದ ಗರಿಷ್ಠ ಶೇ. 30ರವರೆಗೆ ಏರಿಕೆಯಾಗುವ ಸಂಭವವಿದೆ ಎಂದು ಅಧಿಕಾರಿ ಮೂಲಗಳು ತಿಳಿಸಿವೆ.

ಸಹಜವಾಗಿ ಕೆಲ ಪ್ರಮುಖ ಉದ್ದೇಶಗಳಲ್ಲಿ ಆಸ್ತಿ ಮೌಲ್ಯ ದರ ಶೇ. 70ರಿಂದ 80ರವರೆಗೆ ಹೆಚ್ಚಳವಾಗಬಹುದು ಎಂದು ಹೇಳಲಾಗುತ್ತಿದ್ದು, ಅಕ್ಟೋಬರ್ 1ರಂದು ರಾಜ್ಯಾದ್ಯಂತ ಆಸ್ತಿ ಮೌಲ್ಯ ಪರಿಷ್ಕೃತ ದರಗಳು ಜಾರಿಗೆ ಬರುವುದು ಖಚಿತ ಎಂದು ಹೇಳಲಾಗುತ್ತಿದೆ.

ಹರ್ಷ ಧ್ವನಿ ಭಕ್ತಿಗಾಯನ ಕಾರ್ಯಕ್ರಮ



ಮೈಸೂರು, ಆ. 23– ಉಡುಪಿಯ ಪೇಜಾವರ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀ ಪಾದಂಗಳರವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಖ್ಯಾತ ಗಾಯಕರಾದ ಶ್ರೀ ಹರ್ಷ ಅವರಿಂದ ಹರ್ಷ ಧ್ವನಿ ಭಕ್ತಿಗಾಯನ ಕಾರ್ಯಕ್ರಮವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಆಗಸ್ಟ್ 24 ಗುರುವಾರ ಸಂಜೆ 7 ಗಂಟೆಗೆ ಆಯೋಜಿಸಲಾಗಿದೆ ಎಂದು ಚಾತುರ್ಮಾಸ್ಯ ಸಮಿತಿಯ ಕಾರ್ಯಾಧ್ಯಕ್ಷ ರವಿಶಾಸ್ತ್ರಿ ತಿಳಿಸಿದ್ದಾರೆ.

ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘಕ್ಕೆ ನಾರಾಯಣ ಹೆಗ್ಡೆ ಅಧ್ಯಕ್ಷ



ಮೈಸೂರು, ಆ. 23(ಆರ್‌ಕೆ)– ಮೈಸೂರು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ನಾರಾಯಣ ಹೆಗ್ಡೆ ಹಾಗೂ ಉಪಾಧ್ಯಕ್ಷರಾಗಿ ಆನಂದ ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಸಂಘದ ಕಚೇರಿಯಲ್ಲಿ ಇಂದು ಚುನಾವಣೆ ನಿಗದಿಯಾಗಿತ್ತಾದರೂ, ನಾರಾಯಣ ಹೆಗ್ಡೆ ಮತ್ತು ಆನಂದ ಶೆಟ್ಟಿ ಅವರನ್ನು ಹೊರತುಪಡಿಸಿ ಬೇರೆ ಯಾವ ನಿರ್ದೇಶಕರೂ ನಾಮಪತ್ರ ಸಲ್ಲಿಸದ ಕಾರಣ, ಚುನಾವಣಾಧಿಕಾರಿ ಮನು ಮಂಜುಳಾ ಅವರು ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಪ್ರಕಟಿಸಿದರು.

ಸಂಘದ ನಿರ್ದೇಶಕರಾಗಿ ಸಿ. ನಾರಾಯಣಗೌಡ, ಸುಬ್ರಹ್ಮಣ್ಯ ಆರ್. ತಂತ್ರಿ, ವಿ.ಎಸ್. ಶಾಸ್ತ್ರಿ, ಪಿ.ಎನ್. ಕುಂದರ್, ಎಂ.ಎಸ್. ಜಯಪ್ರಕಾಶ್, ಕೆ.ಸಿ. ವಿಶ್ವನಾಥ ಭಟ್, ಹೇಮಂತಕುಮಾರ್, ಎಂ.ಆರ್. ಪುರಾಣಿಕ್, ಸುಮಿತ್ರಾ ತಂತ್ರಿ ಹಾಗೂ ಸುಲೋಚನ ಸಹ ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಪಘಾತದಲ್ಲಿ ಗಾಯಗೊಂಡಿದ್ದ ಯುವಕನ ಅಂಗಾಂಗ ದಾನ

ಮೈಸೂರು, ಆ.23(ಎಸ್‌ಪಿಎನ್)– ರಸ್ತೆ ಅಪಘಾತದಲ್ಲಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡಿದ್ದ ಯುವಕನ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಆತನ ಕುಟುಂಬಸ್ಥರು ನೋವಿನಲ್ಲೂ ಮಾನವೀಯತೆ ಮೆರೆದಿದ್ದಾರೆ.



ಮಳವಳ್ಳಿ ತಾಲೂಕು ಹಲಗೂರು ಗ್ರಾಮದ ನಿವಾಸಿಯಾದ ಎ.ಎನ್.ಅಭಿಷೇಕ್ (29) ಅವರು ಟಿ.ಕೆ.ಗ್ರಾಮದ ಬಳಿ ಆ.18ರಂದು ಬೈಕ್‌ನಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದರು.

ತಕ್ಷಣವೇ ಅವರನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಸಿಟಿ ಸ್ಕ್ಯಾನ್ ನಡೆಸಿದ್ದ ವೈದ್ಯರು ಮೆದುಳಿಗೆ ಪೆಟ್ಟಾಗಿರುವುದನ್ನು ಗುರುತಿಸಿ ಐಸಿಯುನಲ್ಲಿ ಚಿಕಿತ್ಸೆ ನೀಡುತ್ತಿದ್ದರು. ಆಗಸ್ಟ್ 22ರಂದು ಆತನ ಮೆದುಳು ನಿಷ್ಕ್ರಿಯಗೊಂಡಿರುವುದನ್ನು ವೈದ್ಯರು ಘೋಷಿಸಿದರು.

ನಂತರ ಕುಟುಂಬಸ್ಥರ ಅನುಮತಿ ಪಡೆದು 1994ರ ಮಾನವ ಅಂಗಾಂಗಗಳ ಕಸಿ ಕಾಯಿದೆ ಅನುಸಾರ ಆಸ್ಪತ್ರೆ ವೈದ್ಯರ ತಂಡ ಪರೀಕ್ಷೆ ನಡೆಸಿ, ಅಂಗಾಂಗ ದಾನದ ಶಿಷ್ಟಾಚಾರದಂತೆ ಜೀವ ಸಾರ್ಥಕತೆ ಸಂಸ್ಥೆಯ ಅಧಿಕಾರಿಗಳು ಅಂಗಾಂಗಗಳನ್ನು ಸ್ವೀಕರಿಸಿದ್ದಾರೆ. ಅಭಿಷೇಕ್ ದೇಹದಿಂದ ಕಸಿ ಮಾಡಲಾದ ಯಕೃತ್ ಅನ್ನು ಅಪೋಲೋ ಬಿಜಿಎಸ್ ಆಸ್ಪತ್ರೆಗೆ, ಎರಡು ಕಿಡ್ನಿಗಳನ್ನು ನಗರದ ಖಾಸಗಿ ಆಸ್ಪತ್ರೆಗೆ, ಹೃದಯವನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ, ಕಾರ್ನಿಯಾಗಳನ್ನು ನಗರದ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅಪೋಲೋ ಬಿಜಿಎಸ್ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆ; 11, 12ನೇ ತರಗತಿಗೆ ಎರಡು ಭಾಷೆಗಳ ಅಧ್ಯಯನ

ನವದೆಹಲಿ: 10ನೇ ತರಗತಿ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವ ಆಯ್ಕೆಯೊಂದಿಗೆ ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಶಿಕ್ಷಣ ಸಚಿವಾಲಯದ ಹೊಸ ಪಠ್ಯಕ್ರಮದ ಚೌಕಟ್ಟಿನ ಪ್ರಕಾರ, 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು ಒಂದು ಭಾಷೆಯ ಬದಲಿಗೆ ಎರಡು ಭಾಷೆಗಳನ್ನು ಅಧ್ಯಯನ ಮಾಡಬೇಕು ಮತ್ತು ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಶಿಕ್ಷಣ ಸಚಿವಾಲಯದ ಅಧಿಕಾರಿಗಳ ಪ್ರಕಾರ, 2024 ರ ಶೈಕ್ಷಣಿಕ ವರ್ಷಕ್ಕೆ ಹೊಸ ಶಿಕ್ಷಣ ನೀತಿ (ಎನ್‌ಇಪಿ)ಯ ಪ್ರಕಾರ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ.

11 ಮತ್ತು 12 ನೇ ತರಗತಿಗಳಲ್ಲಿ, ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ ಮತ್ತು ಅವುಗಳಲ್ಲಿ ಒಂದು ಭಾರತೀಯ ಭಾಷೆಯಾಗಿರಬೇಕು ಎಂದು ಅಂತಿಮ ಎನ್‌ಸಿಎಫ್ (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು) ವರದಿ ಹೇಳಿದೆ.

ಪ್ರಸ್ತುತ ಇರುವ ಬೋರ್ಡ್ ಪರೀಕ್ಷೆಗಳನ್ನು 'ಸುಲಭ' ಮಾಡಲು ಹಾಗೂ ಈ ಪರೀಕ್ಷೆಯು ತಿಂಗಳ ತರಬೇತಿ ಮತ್ತು ಕಂಠಪಾಠದ ಬದಲಿಗೆ ಸಾಮರ್ಥ್ಯಗಳ ಬಗ್ಗೆ ತಿಳುವಳಿಕೆ ಮತ್ತು ಸಾಧನೆಯನ್ನು ನಿರ್ಣಯಿಸುತ್ತದೆ ಎಂದು ವರದಿ ಹೇಳಿದೆ ವಿದ್ಯಾರ್ಥಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಕಷ್ಟು ಸಮಯ ಮತ್ತು ಅವಕಾಶವನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ವರ್ಷಕ್ಕೆ ಕನಿಷ್ಠ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳು ನಂತರ ಅವರು ಪೂರ್ಣಗೊಳಿಸಿದ ವಿಷಯಗಳಲ್ಲಿ ಬೋರ್ಡ್ ಪರೀಕ್ಷೆಗೆ ಹಾಜರಾಗಬಹುದು ಮತ್ತು ಸಿದ್ಧರಾಗಬಹುದು. ಅತ್ಯುತ್ತಮ ಸ್ಕೋರ್ ಅನ್ನು ಉಳಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಾಗುವುದು ಎಂದು ಅದು ಹೇಳಿದೆ.

ಮೈಸೂರು–ಬೆಂಗಳೂರು–ಚೆನ್ನೈ ರೈಲು ಪ್ರಯಾಣಿಕರಿಗೆ ಶುಭ ಸುದ್ದಿ

ಗುರುವಾರ ಹೊರತುಪಡಿಸಿ ವಾರದ 6 ದಿನವೂ ಸೇವೆ

- ಬುಧವಾರ ಹೊರತುಪಡಿಸಿ ಎಂದಿನಂತೆ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆ ಲಭ್ಯ
- 2023ರ ಡಿಸೆಂಬರ್ 20ರಿಂದ ಹೊಸ ವೇಳಾಪಟ್ಟಿ ಜಾರಿ



ಮೈಸೂರು, ಆ.23(ಆರ್‌ಕೆ)–2023ರ ಡಿಸೆಂಬರ್ 20ರಿಂದ ಮೈಸೂರು–ಬೆಂಗಳೂರು–ಚೆನ್ನೈ ಶತಾಬ್ಧಿ ಎಕ್ಸ್‌ಪ್ರೆಸ್ (ಸಂಖ್ಯೆ 12007/12008) ಗುರುವಾರ ಹೊರತುಪಡಿಸಿ ವಾರದ 6 ದಿನವೂ ಸಂಚರಿಸಲಿದೆ.


ಈ ಕುರಿತು ಪ್ರಕಟಣೆ ನೀಡಿರುವ ಮೈಸೂರು ವಿಭಾಗದ ಹಿರಿಯ ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ಅವರು, ಈ ಹಿಂದೆ ಬುಧವಾರದಂದು ಮೈಸೂರು–ಚೆನ್ನೈ ನಡುವೆ ಶತಾಬ್ಧಿ ಎಕ್ಸ್‌ಪ್ರೆಸ್ ರೈಲು ಸೇವೆ ಲಭ್ಯವಿರಲಿಲ್ಲ. ಈಗಿನ ವೇಳಾಪಟ್ಟಿಯನ್ವಯ ಗುರುವಾರ ಹೊರತುಪಡಿಸಿ ಉಳಿದ ವಾರದ ಎಲ್ಲಾ ದಿನಗಳಲ್ಲೂ ಶತಾಬ್ಧಿ ಎಕ್ಸ್‌ಪ್ರೆಸ್‌ನಲ್ಲಿ ಸಾರ್ವಜನಿಕರು ಪ್ರಯಾಣಿಸಬಹುದಾಗಿದೆ ಎಂದು ತಿಳಿಸಿದ್ದಾರೆ. ಈ ಪರಿಷ್ಕೃತ ವೇಳಾಪಟ್ಟಿಯಿಂದಾಗಿ ಮೈಸೂರು–ಬೆಂಗಳೂರು–ಚೆನ್ನೈ ನಗರಗಳ ನಡುವೆ ಸಂಚರಿಸುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಅಲ್ಲದೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಸೇವೆಯು ಬುಧವಾರ ಹೊರತುಪಡಿಸಿ ಉಳಿದ ವಾರದ ಎಲ್ಲಾ 6 ದಿನಗಳಲ್ಲೂ ಸಂಚರಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ವಂದೇ ಭಾರತ್ ಎಕ್ಸ್‌ಪ್ರೆಸ್, ಮತ್ತೊಂದು ವೇಗವಾಗಿ ಚಲಿಸುವ ಐಷಾರಾಮಿ ರೈಲು. ಈ ಎರಡೂ ರೈಲುಗಳ ವೇಳಾಪಟ್ಟಿಗನುಗುಣವಾಗಿ ಪ್ರಯಾಣಿಕರು ಸೇವೆಗಳನ್ನು ಬಳಸಿಕೊಳ್ಳಬಹುದು. ಶತಾಬ್ಧಿ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಪರಿಷ್ಕೃತ ವೇಳಾಪಟ್ಟಿಯು 2023ರ ಡಿಸೆಂಬರ್ 20ರಿಂದ ಜಾರಿಗೆ ಬರಲಿದೆ ಎಂದು ಲೋಹಿತೇಶ್ವರ ಅವರು ತಿಳಿಸಿದ್ದಾರೆ.

ಮಲೆಮಹದೇಶ್ವರ ರಸ್ತೆಯ ಅವೈಜ್ಞಾನಿಕ ರೋಡ್ ಹಂಪ್ಸ್ ತೆರವು



ಮೊದಲು ಹೀಗಿತ್ತು ಅವೈಜ್ಞಾನಿಕ ರೋಡ್ ಹಂಪ್ಸ್



ರೋಡ್ ಹಂಪ್ಸ್ ತೆರವುಗೊಳಿಸಿರುವುದು

ಮಿತ್ರನ ಫಲಶ್ರುತಿ

ಮೈಸೂರು, ಆ.23(ಆರ್‌ಕೆ)– ಅಪಘಾತ, ಅನಾಹುತಗಳಿಗೆ ಕಾರಣವಾಗಿದ್ದ ಮೈಸೂರಿನ ನಜರ್‌ಬಾದ್ ಬಳಿಯ ಮಲೈಮಹದೇಶ್ವರ ರಸ್ತೆಯಲ್ಲಿ ಅಳವಡಿಸಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್ ಅನ್ನು ಇಂದು ತೆರವುಗೊಳಿಸಲಾಗಿದೆ.

ಸಂಚಾರ ಪೊಲೀಸರು ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಮಲೈಮಹದೇಶ್ವರ ರಸ್ತೆಯ ಅಪಾರ್ಟ್‌ಮೆಂಟ್ ಎದುರು ರಸ್ತೆ ಡುಬ್ಬ ಅಳವಡಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯು ರಾತ್ರೋರಾತ್ರಿ ಆ ಸ್ಥಳದಲ್ಲಿ ಎತ್ತರದ, ಅವೈಜ್ಞಾನಿಕ ರಬ್ಬರ್ ರೋಡ್ ಹಂಪ್ಸ್ ಅನ್ನು ಅಳವಡಿಸಿತ್ತು. ಇಂಜಿನಿಯರ್‌ಗಳು ನಿಂತು ವಾಹನಗಳು ಸರಾಗವಾಗಿ ಹಾದು ಹೋಗುವಂತೆ ವೈಜ್ಞಾನಿಕವಾಗಿ ರಸ್ತೆ ಡುಬ್ಬ ಅಳವಡಿಸಬೇಕಿತ್ತು. ಸುರಕ್ಷತೆಗಾಗಿ ಅಲ್ಲಿ ಬಿಳಿ ಪಟ್ಟೆಯನ್ನಾಗಲೀ, ರಿಫ್ಲೆಕ್ಟರ್‌ಗಳನ್ನಾಗಲೀ ಹಾಕಬೇಕಿತ್ತು ಇದಾವುದನ್ನೂ ಮಾಡದೇ ಇರುವುದರಿಂದ ಈ ರೋಡ್ ಹಂಪ್ಸ್ ಅನಾಹುತಕ್ಕೆ ಆಸ್ಪದ ಮಾಡಿಕೊಟ್ಟಂತಿತ್ತು. ಈ ಮಧ್ಯೆ 'ಮೈಸೂರು ಮಿತ್ರ' ವರದಿಗಾರ ಬಿ.ಜೆ. ಮೋಹನ್ ಕಾಯಕ, ಈ ಹಂಪ್ಸ್ ಬಳಿ ಸ್ಕೂಟರ್‌ನಿಂದ ಬಿದ್ದು, ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಅಲ್ಲದೇ ಹಲವರು ದ್ವಿಚಕ್ರ ವಾಹನದಲ್ಲಿ ಆಯತಪ್ಪಿ ಬಿದ್ದು ಗಾಯಗೊಂಡಿದ್ದರು. ಈ ಕುರಿತು 'ಮೈಸೂರು ಮಿತ್ರ'ನಲ್ಲಿ ಚಿತ್ರ ಸಮೇತ ವರದಿ ಪ್ರಕಟವಾದ್ದರಿಂದ ಎಚ್ಚೆತ್ತ ಮೈಸೂರು ಮಹಾನಗರ ಪಾಲಿಕೆ ಇಂಜಿನಿಯರ್‌ಗಳು, ಇಂದು ಈ ಅವೈಜ್ಞಾನಿಕ ರಬ್ಬರ್ ರಸ್ತೆ ಡುಬ್ಬವನ್ನು ತೆರವುಗೊಳಿಸಿದ್ದಾರೆ. ಈ ರೋಡ್ ಹಂಪ್ಸ್‌ನಿಂದ ತಮಗೆ ಉಂಟಾದ ತೊಂದರೆ ಬಗ್ಗೆ ಗಾಯಾಳು ಮೋಹನ್ ಕಾಯಕ ಅವರು ಆಗಸ್ಟ್ 22ರಂದು ನಜರ್‌ಬಾದ್ ಠಾಣೆಗೆ ದೂರು ನೀಡಿದ್ದು, ಪಾಲಿಕೆ ಇಂಜಿನಿಯರ್ ಹಾಗೂ ಗುತ್ತಿಗೆದಾರನ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದರು.

ಪಲ್ಸರ್ ಬೈಕ್‌ಗೆ ಲಾರಿ ಡಿಕ್ಕಿ: ಇಬ್ಬರು ಸಾವು, ಮತ್ತೊಬ್ಬನಿಗೆ ಗಾಯ

ಚಾಮರಾಜನಗರ ರಸ್ತೆ ಬದನವಾಳು ಬಳಿ ದುರಂತ

ನಂಜನಗೂಡು, ಆ.23– ಲಾರಿಯೊಂದು ಪಲ್ಸರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿ, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ಚಾಮರಾಜನಗರ ಮುಖ್ಯ ರಸ್ತೆಯ ತಾಲೂಕಿನ ಬದನವಾಳು ಗ್ರಾಮದ ಬಳಿ ನಡೆದಿದೆ.

ಚಾಮರಾಜನಗರದ ಪೌರಕಾರ್ಮಿಕ ಕಾಲೋನಿಯ ನಿವಾಸಿಗಳಾದ ವಿಜಯ್(21), ಮಾದೇಶ(21) ಸಾವನ್ನಪ್ಪಿರುವ ದುರ್ದೈವಿಗಳು. ಮತ್ತೊಬ್ಬ ವಿಶ್ವ (20) ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಕೆಲಸದ ನಿಮಿತ್ತ ವಿಜಯ್, ಮಾದೇಶ ಮತ್ತು ವಿಶ್ವ ಒಂದೇ ಬೈಕ್‌ನಲ್ಲಿ ಮೈಸೂರಿಗೆ ತೆರಳಿದ್ದರು ಎನ್ನಲಾಗಿದ್ದು, ಕೆಲಸ ಮುಗಿಸಿಕೊಂಡು ವಾಪಸ್ ಚಾಮರಾಜನಗರಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಚಾಮರಾಜನಗರ ಕಡೆಯಿಂದ ಬಂದ ಲಾರಿ, ಪಲ್ಸರ್ ಬೈಕಿಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಾದ ವಿಜಯ್ ಸ್ಥಳದಲ್ಲೇ ಮೃತಪಟ್ಟರೆ, ಮಾದೇಶ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಮತ್ತೊಬ್ಬ ವಿಶ್ವ ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದ್ದು, ಗಾಯಾಳು ವಿಶ್ವ ತಲೆ ಮತ್ತು ಕಾಲಿನ ಭಾಗಕ್ಕೆ ಗಂಭೀರವಾಗಿ ಗಾಯವಾಗಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾನೆ ಎಂದು ಕವಲಂದೆ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಇಶ್ರತ್ ಬೇಗಂ ತಿಳಿಸಿದ್ದಾರೆ.

ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರು ಕಳ್ಳರ ಬಂಧನ: 10 ಲಕ್ಷ ರೂ. ಮೌಲ್ಯದ ದ್ವಿಚಕ್ರ ವಾಹನಗಳ ವಶ



ತಿ.ನರಸೀಪುರ, ಆ.23–ಪಟ್ಟಣ ಸೇರಿದಂತೆ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಗಳಿಬ್ಬರನ್ನು ಪಟ್ಟಣ ಪೊಲೀಸರು ಬಂಧಿಸಿ, 10 ಲಕ್ಷ ರೂ. ಮೌಲ್ಯದ 16 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಬನ್ನೂರು ಹೋಬಳಿ ರಂಗನಾಥಪುರ ಗ್ರಾಮದ ವಿಜಯ್ ಅಲಿಯಾಸ್ ಕೊಳ್ಳೇಗಾಲ(20) ಹಾಗೂ ಪ್ರದೀಪ ಅಲಿಯಾಸ್ ಚಿನ್ನು(21) ಎಂಬುವರೇ ಬಂಧಿತ ದ್ವಿಚಕ್ರ ವಾಹನ ಕಳ್ಳರು.

ಬಂಧಿತ ಕಳ್ಳತನ ಆರೋಪಿಗಳು ತಿ.ನರಸೀಪುರ ಪಟ್ಟಣ ಸೇರಿದಂತೆ ಬನ್ನೂರು, ಕಿರುಗಾವಲು, ಸಂತೇಮರಳ್ಳಿ ವ್ಯಾಪ್ತಿಯಲ್ಲಿ 16ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿದ್ದರು. ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜು, ಪಟ್ಟಣ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಜೆ.ಎನ್.ಆನಂದ್ ಕುಮಾರ್ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಪಿಎಸ್ಐ ಅಶೋಕ್ ಕುಮಾರ್, ಪಿಎಸ್ಐ ಜಗದೀಶ್ ದೂಳ್‌ಶೆಟ್ಟಿ ಹಾಗೂ ಸಿಬ್ಬಂದಿಗಳಾದ ಲತೀಫ್, ಭಾಸ್ಕರ್, ಆನಂದ್, ಕಾರ್ಯಾಚರಣೆಯ ಮೂಲಕ ಆರೋಪಿಗಳನ್ನು ದಸ್ತಗಿರಿ ಮಾಡಿ ಬಂಧಿತರಿಂದ 10 ಲಕ್ಷರೂ. ಮೌಲ್ಯದ 16 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಟೆಯಲ್ಲಿ ಕಳ್ಳತನ ತಡೆಯಲು ಪೊಲೀಸರೊಂದಿಗೆ ಸಹಕರಿಸಿ

ಜನ ಜಾಗೃತಿ ಮೂಲಕ ಸಾರ್ವಜನಿಕರಲ್ಲಿ ಪೊಲೀಸರ ಮನವಿ

- ನಗದು, ಒಡವೆ ಬ್ಯಾಂಕ್ ಲಾಕರ್‌ನಲ್ಲಿಡಿ
- ಊರಿಗೆ ಹೋಗುವ ಮುನ್ನ ಠಾಣೆಗೆ ಮಾಹಿತಿ ನೀಡಿ
- ಅಪರಿಚಿತರಿಗೆ, ಹೊರ ರಾಜ್ಯದವರಿಗೆ ಮನೆ ನೀಡುವಾಗ ಎಚ್ಚರ



ಹೆಚ್.ಡಿ.ಕೋಟೆ, ಆ.23– ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಿ, ಅದನ್ನು ತಡೆಯಲು ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಮನವಿ ಮಾಡಿದರು.

ಇತ್ತೀಚೆಗೆ ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠರ ಮಾರ್ಗದರ್ಶನದಲ್ಲಿ ಪಟ್ಟಣ ಪೊಲೀಸ್ ಠಾಣೆ ವತಿಯಿಂದ ಸಾರ್ವಜನಿಕರಿಗೆ ಧ್ವನಿವರ್ಧಕ ಮೂಲಕ ಜಾಗೃತಿ ಆಂದೋಲನಕ್ಕೆ ಚಾಲನೆ ನೀಡಿ, ಮಾತನಾಡಿದರು.

ಸಾರ್ವಜನಿಕರು ಮನೆಯಿಂದ ಹೊರಗಡೆ ಹೋಗುವ ಸಂದರ್ಭದಲ್ಲಿ ನಗದು, ಆಭರಣ ಮತ್ತು ವಸ್ತುಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇಡುವುದು. ನಂತರ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದು. ನಿಮ್ಮ ಬಡಾವಣೆ, ವಾರ್ಡು ಹಾಗೂ ಗ್ರಾಮಗಳಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದ ಕೂಡಲೆ ಸ್ಥಳೀಯ ಠಾಣೆ ಬೀಟ್ ಪೊಲೀಸ್ ಅಥವಾ 112ಕ್ಕೆ ಕರೆ ಮಾಡಬೇಕು ಎಂದು ಮನವಿ ಮಾಡಿದರು.

ಚಿನ್ನದ ಪಾಲೀಶ್ ಮಾಡುವ ನೆಪದಲ್ಲಿ ಬರುವವರ ಮೇಲೆ ನಿಗಾ ವಹಿಸುವುದು. ಬೆಡ್‌ಶೀಟ್ ಮಾರುವವರು, ಕೂದಲು ತೆಗೆದುಕೊಳ್ಳುವವರು ಹಾಗೂ ಇತರೆ ಅಪರಿಚಿತರು ಮನೆ ಹತ್ತಿರ ಬಂದಾಗ ಯಾವುದೇ ಮಾಹಿತಿ ನೀಡಬಾರದು.

ಮನೆಯ ಮಾಲೀಕರು ಅಪರಿಚಿತರಿಗೆ ಹಾಗೂ ಹೊರ ರಾಜ್ಯದವರಿಗೆ ಮನೆಯನ್ನು ಬಾಡಿಗೆಯನ್ನು ಕೊಡುವಾಗ ಪೋಟೋ, ಆಧಾರ್ ಕಾರ್ಡ್ ಹಾಗೂ ಸೂಕ್ತ ಮಾಹಿತಿ ಪಡೆದು ಸದರಿ ಮಾಹಿತಿಯನ್ನು ನೀಡುವುದು. ಅಪರಿಚಿತರು ಕರೆ ಮಾಡಿ ಓ.ಟಿ.ಪಿಯನ್ನು ಕೇಳಿದಾಗ ಓ.ಟಿ.ಪಿಯನ್ನು ನೀಡಬೇಡಿ.

ಆನ್‌ಲೈನ್ ಮೂಲಕ ಹಣದ ವಂಚನೆಯಾದಲ್ಲಿ ಕೂಡಲೆ 1930ಗೆ ಕರೆ ಮಾಡುವುದು. ನಿಮ್ಮ ಮನೆಯ ಭದ್ರತೆಗಾಗಿ ಮನೆಯ ಮುಂದಿನ ಜಾಗ ಹಾಗೂ ರಸ್ತೆ ಕಾಣುವಂತೆ ಸಿ.ಸಿ.ಟಿ.ವಿ ಅಳವಡಿಸಿಕೊಳ್ಳಬೇಕು ಎಂದರು.

ದೇವಸ್ಥಾನದ ಮುಖ್ಯಸ್ಥರುಗಳು ದೇವಸ್ಥಾನದ ಭದ್ರತೆಗಾಗಿ ಬೆಲೆಬಾಳುವ ವಸ್ತುಗಳನ್ನು ಬ್ಯಾಂಕಿನ ಲಾಕರ್‌ನಲ್ಲಿ ಇಡುವುದು, ಹಾಗೂ ಸಿ.ಸಿ.ಟಿ.ವಿ ಅಳವಡಿಸಿಕೊಳ್ಳುವುದು. ನಿಮ್ಮ ಮೋಟಾರ್ ಬೈಕ್‌ಗಳನ್ನು ಮನೆಯ ಹೊರಗಡೆ ನಿಲ್ಲಿಸದೆ, ಮನೆಯ ಒಳಗಡೆ ಹ್ಯಾಂಡಲ್ ಲಾಕ್ ಅಥವಾ ವೀಲ್ ಲಾಕ್ ಹಾಕಿ ನಿಲ್ಲಿಸಿಕೊಳ್ಳುವುದು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಆಟೋ ಮೂಲಕ ಧ್ವನಿವರ್ಧಕದೊಂದಿಗೆ ಸಿಬ್ಬಂದಿಗಳ ಜೊತೆ ಪಟ್ಟಣದ ವಿವಿಧ ವೃತ್ತಗಳಲ್ಲಿ ಹಾಗೂ ಬಡಾವಣೆಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಕರಪತ್ರ ಹಂಚಿ ಜಾಗೃತಿ ಮೂಡಿಸಿದರು.

ಇದೇ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಬಿ.ವಿ ಪ್ರಕಾಶ್, ಸುರೇಶ್ ನಾಯಕ, ರಾಮ ಪ್ರಸಾದ್, ಎಸ್ಐ ಸುಭಾನ್, ಸಿಬ್ಬಂದಿಗಳಾದ ಯೋಗೇಶ್, ಸೌಜನ್ಯ, ಮೋಹನ್ ಇದ್ದರು.

ಕೂಣಸೂರು ನಿವೇಶನ ವಿವಾದ ಸುಖಾಂತ್ಯ



ಬೆಟ್ಟದಪುರ,ಆ.23– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಕೂಣಸೂರು ಗ್ರಾಮದಲ್ಲಿ ಮೇದರ ಸಮಾಜ ಹಾಗೂ ಕುಂಬಾರ ಶೆಟ್ಟಿ ಸಮಾಜದ ನಡುವೆ ಇದ್ದ ಗ್ರಾಮದ ಮಧ್ಯ ಭಾಗದ ನಿವೇಶನದ ವಿವಾದವನ್ನು ಪೊಲೀಸರು ಹಾಗೂ ಗ್ರಾಮದ ಮುಖಂಡರು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಂಡಿದ್ದಾರೆ.

ಕೂಣಸೂರು ಗ್ರಾಮದ ಒಂದು ರಸ್ತೆಯಲ್ಲಿ ಕುಂಬಾರರು, ಮೇದರು ಹಾಗೂ ನಾಯಕ ಮಡಿವಾಳ ಸಮಾಜದವರು ವಾಸಿಸುತ್ತಿದ್ದರು. ಎಲ್ಲರಿಗೂ ಒಂದೊಂದು ಜಾಗವನ್ನು ಗುರುತಿಸಿಕೊಂಡು ಅವರ ಸಮುದಾಯ ಭವನಗಳನ್ನು ನಿರ್ಮಿಸಿಕೊಂಡಿದ್ದರೆ, ಗ್ರಾಮದ ಕುಂಬಾರ ಶೆಟ್ಟಿ ಜನಾಂಗದವರು ನಿರ್ಮಿಸಿಕೊಂಡಿರುವ ದೇವಾಲಯದ ಪಕ್ಕದಲ್ಲಿ ಗ್ರಾಮ ಪಂಚಾಯತಿಗೆ ಸೇರಿದ 37X 22 ಅಳತೆಯ ನಿವೇಶನ ಖಾಲಿ ಜಾಗದಲ್ಲಿ ಮೇದರ ಸಮಾಜ ಮತ್ತು ಕುಂಬಾರ ಸಮಾಜ ನಮಗೆ ಸೇರಬೇಕೆಂದು ಹಲವಾರು ವರ್ಷದಿಂದ ಗ್ರಾಮದಲ್ಲಿ ಜಾಗಕ್ಕಾಗಿ ಮುಸುಕಿನ ಗುದ್ದಾಟ ನಡೆಯುತ್ತಿತ್ತು.

ಇದರಿಂದ ಇತ್ತೀಚಿನ ದಿನಗಳಲ್ಲಿ ಭಾರಿ ವಿವಾದವೇ ಎದ್ದಿತ್ತು. ಗ್ರಾಪಂ ಅಧ್ಯಕ್ಷ ಪಿ. ದೇವರಾಜ್ ಹಾಗೂ ಕಾರ್ಯದರ್ಶಿ ದೇವರಾಜೇಗೌಡ ಈ ಜಾಗವನ್ನು ನಮಗೆ ಸೇರಿದ್ದು ಎಂದು ಇತ್ತೀಚೆಗೆ ನಾಮಫಲಕ ಹಾಕಿದ್ದರು. ಇದರಿಂದ ಇಂದು ಎರಡು ಸಮಾಜದವರು ಒಂದೆಡೆ ಸೇರಿ ಹಾಗೂ ಬೆಟ್ಟದಪುರದ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಕಾಶ್, ಪಿಎಸ್ಐ ಪ್ರಕಾಶ್ ಎಂ.ಎತ್ತಿನಮನಿ, ಕುಂಬಾರಶೆಟ್ಟಿ ಜಿಲ್ಲಾ ಕಾರ್ಯದರ್ಶಿ ಸೋಮಶೇಖರ್, ತಾಲೂಕು ಅಧ್ಯಕ್ಷ ಶಿವರಾಜ್, ಗ್ರಾಪಂ ಸದಸ್ಯ ಪ್ರಭು, ಗ್ರಾಪಂ ಮಾಜಿ ಉಪಾಧ್ಯಕ್ಷ ನಾಗರಾಜು, ಮೇದರ ಸಮಾಜದ ಮುಖಂಡರಾದ ಪಾಲಾಕ್ಷ, ಶಿವರಾಮು, ಮಂಜುನಾಥ, ರಾಜೇಶ್ ಹಾಗೂ ದಲಿತ ಮುಖಂಡ ಮಾಜಿ ಗ್ರಾಪಂ ಸದಸ್ಯ ಮೂರ್ತಿ ಅವರ ನೇತೃತ್ವದಲ್ಲಿ ಎರಡು ಸಮಾಜದ ಮುಖಂಡರನ್ನು ಕರೆಸಿ ಗ್ರಾಮಸ್ಥರವಾದ ವಿವಾದದ ಬಳಿಕ ಒಂದು ತೀರ್ಮಾನಕ್ಕೆ ಬರಲಾಯಿತು. ಕುಂಬಾರಶೆಟ್ಟಿ ಜನಾಂಗದವರಿಗೆ ರಾಮಮಂದಿರ ಹಾಗೂ ಮನಿಯಮ್ಮ ದೇವಾಲಯವನ್ನು ಅವರ ಜನಾಂಗಕ್ಕೆ ಬಿಟ್ಟುಕೊಟ್ಟಿದ್ದು, ಉಳಿದ ಖಾಲಿ ಜಾಗವನ್ನು ಮೇದರ ಸಮಾಜದವರು ಗುಡಿ ಕೈಗಾರಿಕೆ ಮಾಡಿಕೊಡಲು 32X22 ಅಳತೆಯ ನಿವೇಶನವನ್ನು ಮೇದರ ಜನಾಂಗಕ್ಕೆ ಬಿಟ್ಟುಕೊಡಲು ಎರಡು ಸಮಾಜದವರು ಒಪ್ಪಿಗೆ ಸೂಚಿಸಿದರು ಇದರಿಂದ ಭೂ ವಿವಾದ ಸುಖಾಂತ ಕಂಡಂತಾಗಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ ನೀಡುವಂತೆ ಎಂಎಲ್‌ಸಿ ವಿಶ್ವನಾಥ್‌ಗೆ ಮನವಿ



ಹುಣಸೂರು,ಆ.23– ತಾಲೂಕಿನ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಅನುದಾನ ನೀಡಬೇಕೆಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರಿಗೆ ತವಕಲ್ ಮಸ್ತಾನ್ ಕಬ್ರಸ್ತಾನ್ ಕಮಿಟಿ ವತಿಯಿಂದ ಮನವಿ ಪತ್ರ ಸಲ್ಲಿಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಮನವಿ ಸ್ವೀಕರಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಶ್ವನಾಥ್, ನಾನು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹಾಗೂ ಶಾದಿ ಮಹಲ್, ಮಸೀದಿ, ಮದರಸಗಳಿಗೆ ಅನುದಾನ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಸಚಿವರಾದ ಜಮೀರ್ ಅಹಮದ್ ಖಾನ್ ಅವರಿಗೆ ನಮ್ಮ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹೆಚ್ಚು ಅನುದಾನ ನೀಡಬೇಕೆಂದು ನಾನು ಕೂಡ ಮನವಿ ಸಲ್ಲಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ಇನಾಯತ್ ಉಲ್ಲಾಖಾನ್, ಉಪಾಧ್ಯಕ್ಷ ಫರೂಖ್ ಖಾನ್, ಕಾರ್ಯದರ್ಶಿ ಸೈಯದ್ ಅಹಮದ್ ಷಾ, ಸದಸ್ಯರಾದ ಬಷೀರ್ ಅಹಮದ್, ಅಫ್ರೋಜ್ ಅಹಮದ್, ಅಬ್ದುಲ್ ಶುಕೂರ್, ಜವಾದ್ ಅಹಮದ್‌ಷರೀಫ್, ಮಕ್ಬೂಲ್ ಪಾಷಾ, ಮಹಮ್ಮದ್ ಇರ್ಫಾನ್‌ಖಾನ್, ಶಫೀವುಲ್ಲಾ, ಶಹಜ್ಞಮಾ ಕುರುಬರ ಅಭಿವೃದಿ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ವಕೀಲರಾದ ಶಿವಕುಮಾರ್ ಇನ್ನಿತರರು ಹಾಜರಿದ್ದರು.

7ನೇ ವಾರ್ಡಿನಲ್ಲಿ ಸ್ವಚ್ಛತೆಯ ಸಂಕಲ್ಪ



ತಿ.ನರಸೀಪುರ, ಆ.23– ಪುರಸಭೆಯ ಏಳನೇ ವಾರ್ಡಿನಲ್ಲಿ ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಮೂಲಕ ವಾರ್ಡನ್ನ ಮಾದರಿಯನ್ನಾಗಿ ಮಾಡುವ ಸಂಕಲ್ಪ ಮಾಡಿಕೊಂಡಿದ್ದೇನೆ ಎಂದು ಪುರಸಭಾ ಸದಸ್ಯ ಸಿ.ಪ್ರಕಾಶ್ ಹೇಳಿದರು.

ತಮ್ಮ ವಾರ್ಡಿನಲ್ಲಿ ಕಳೆದ ಹಲವಾರು ವರ್ಷದಿಂದ ಚರಂಡಿಗಳು ಕಟ್ಟಿಕೊಂಡಿದ್ದು, ಪುರಸಭೆಯ ಆರೋಗ್ಯ ಇಲಾಖೆ ಸ್ವಚ್ಛತೆ ಕಾರ್ಯ ನಡೆಸುತ್ತಿರುವುದನ್ನು ಪರಿಶೀಲಿಸಿ ಮಾತನಾಡಿದ ಅವರು, ನಮ್ಮ ವಾರ್ಡಿನಲ್ಲಿ ಮೂಲಸೌಕರ್ಯ ಕಲ್ಪಿಸುವುದರೊಂದಿಗೆ ಬೀದಿದೀಪ ಸ್ವಚ್ಛತೆ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ನಮ್ಮ ವಾರ್ಡಿನಲ್ಲಿ ಸರ್ಕಾರದಿಂದ ಬಂದಿರುವ ಅನುದಾನವನ್ನು ಸಮರ್ಪಕವಾಗಿ ಬಡವರಿಗೆ ತಲುಪಿಸುವ ಮೂಲಕ ಸ್ಪಂದಿಸಿದ್ದೇನೆ. ಯಾವುದೇ ಸಮಸ್ಯೆ ಇದ್ದರೂ ಹಂತ ಹಂತವಾಗಿ ಕ್ರಮ ಕೈಗೊಳ್ಳುತ್ತೇನೆ ಎಂದರು. ನೂತನ ಆರೋಗ್ಯಾಧಿಕಾರಿ ಮಧುರಾಜ್ ಮಾತನಾಡಿ, ಪುರಸಭೆ 23 ವಾರ್ಡಿನಲ್ಲಿ ಸಹ ಅಭಿವೃದ್ಧಿ ಮತ್ತು ಸ್ವಚ್ಛತೆಯನ್ನು ಕಾಪಾಡಲು ಬಂದಿದ್ದೇನೆ. ಸದಸ್ಯರು ಮತ್ತು ಸಾರ್ವಜನಿಕರೊಂದಿಗೆ ಮೂಲಸೌಕರ್ಯವನ್ನು ನೀಡಿ ಸ್ವಚ್ಛತೆಯನ್ನು ಮಾಡುತ್ತೇನೆ ಎಂದರು.

ಮಕ್ಕಳ ಬುದ್ಧಿಶಕ್ತಿ ವಿಕಸನಕ್ಕೆ ಕ್ರೀಡೆ ಸಹಕಾರಿ



ಸರಗೂರು, ಆ.23– ಮಗುವಿನ ಬುದ್ಧಿಶಕ್ತಿ ವಿಕಸನಗೊಳ್ಳಲು ಕ್ರೀಡೆ ತುಂಬಾ ಸಹಕಾರಿಯಾಗಲಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠ ವಿಷಯ ಪರಿವೀಕ್ಷಕ ನಾಗರಾಜು ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಪ್ರೌಢಶಾಲಾ ಆವರಣದಲ್ಲಿ ಮಂಗಳವಾರ ಸರಗೂರು ವಲಯ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ಮಗು ಮಾನಸಿಕ, ದೈಹಿಕವಾಗಿ ಸದೃಢವಾಗಲು ಕ್ರೀಡೆ ಉತ್ತಮ ವೇದಿಕೆಯಾಗಲಿದ್ದು, ಓದಿಗೂ ಉತ್ತೇಜನ ನೀಡಲಿದೆ. ಶಿಕ್ಷಕರು, ಪೋಷಕರು ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸುವ ಮೂಲಕ ಉನ್ನತ ಮಟ್ಟಕ್ಕೆ ತಲುಪಲು ಪ್ರೋತ್ಸಾಹ ನೀಡಬೇಕು ಎಂದು ಕಿವಿಮಾತು ಹೇಳಿದರು.

ಪಪಂ ಅಧ್ಯಕ್ಷೆ ರಾಧಿಕಾ ಧ್ವಜಾರೋಹಣ ನೆರವೇರಿಸಿದರು. ಸದಸ್ಯ ಶ್ರೀನಿವಾಸ್, ಕ್ರೀಡಾ ಜ್ಯೋತಿ ಸ್ವೀಕರಿಸಿದರು. ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ಕ್ರೀಡಾ ವಂದನೆ ಸ್ವೀಕರಿಸಿದರು. ಸದಸ್ಯರಾದ ಚೈತ್ರಾಸ್ವಾಮಿ, ಸಣ್ಣತಾಯಮ್ಮ, ಪ್ರೌಢಶಾಲಾ ಮುಖ್ಯಶಿಕ್ಷಕ ಗಂಗಾಧರ್, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕ ಅಜುಂ ಪಾಷಾ, ಪ್ರಾಂಶುಪಾಲ್ ಮಹ ದೇವಸ್ವಾಮಿ, ಶಿಕ್ಷಕರಾದ ಸಿದ್ದಲಿಂಗಸ್ವಾಮಿ, ದೈಹಿಕ ಶಿಕ್ಷಕ ಮನೋಜ್, ಕೃಷ್ಣಮೂರ್ತಿ, ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷ ಜಿ. ನಾಗೇಶ್, ತಾಲೂಕು ದೈಹಿಕ ಪರಿವೀಕ್ಷಕ ರಾಮಪ್ರಸಾದ್, ಸಿದ್ದರಾಜು, ಎ.ಎಸ್.ಮಹದೇವ್, ಸೋಮಸುಂದರ್, ವಿ.ಜಿ.ಮಂಜುನಾಥ್, ಮಹದೇವಯ್ಯ, ಬೋಗನಂಜಯ್ಯ, ಮಹೇಶ್, ರಾಜು, ಸಣ್ಣಸೋಮಯ್ಯ, ಅಂತೋನಿ ಸ್ವಾಮಿ, ಎಂ.ನಾಗರಾಜು, ಯಶವಂತ್, ಜಯರಾಮ್, ಪ್ರಸನ್ನ ಕುಮಾರ್, ಶಂತವ್ವ ಹಂಪಣ್ಣವರ್, ಹೆಚ್.ಬಿ.ಜ್ಯೋತಿ, ಚನ್ನನಾಯಕ, ಮಂಜುಮಾತ್, ಗೋಪಾಲಕೃಷ್ಣ, ಲೋಕೇಶ್, ಕೆಂಪರಾಜು, ಶಾಲಾ ಮಕ್ಕಳು ಶಿಕ್ಷಕರು ಹಾಜರಿದ್ದರು.

ಗಾವಡಗೆರೆ ಹೋಬಳಿ ಪ್ರೌಢಶಾಲೆಗಳ ವಲಯ ಮಟ್ಟದ ಕ್ರೀಡಾಕೂಟ

ಹರವೆಯ ಶ್ರೀ ಬಸವೇಶ್ವರ ಪ್ರೌಢಶಾಲೆಗೆ ಸಮಗ್ರ ಪ್ರಶಸ್ತಿ



ಹಿರೀಕ್ಯಾತನಹಳ್ಳಿ, ಆ.23– ಹುಣಸೂರು ತಾಲೂಕಿನ ಹರವೆ ಗ್ರಾಮದ ಶ್ರೀ ಬಸವೇಶ್ವರ ಪ್ರೌಢಶಾಲೆ ವಿದ್ಯಾರ್ಥಿಗಳು ಗಾವಡಗೆರೆ ಹೋಬಳಿಯ ಪ್ರೌಢಶಾಲೆಗಳ ವಲಯ ಮಟ್ಟದ ಕ್ರೀಡಾಕೂಟದಲ್ಲಿ 99 ಅಂಕ ಗಳಿಸುವುದರೊಂದಿಗೆ ಶಾಲಾ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಸಂಸ್ಥೆಯ 10 ನೇ ತರಗತಿ ವಿದ್ಯಾರ್ಥಿನಿ ಜೀವಿತ ಕೆ.ಆರ್. ಉದ್ದ ಜಿಗಿತ, 100 ಮೀ ಓಟ, 800 ಮೀ ಓಟದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದರೆ, ಬಾಲಕಿಯರ ವಿಭಾಗದಲ್ಲಿ ಖೋ ಖೋ ಪ್ರಥಮ, ಥ್ರೋಬಾಲ್ ದ್ವಿತೀಯ, 300 ಮೀ ಓಟ ದ್ವಿತೀಯ, 1500 ಮೀಟರ್ ಓಟ ದ್ವಿತೀಯ, 400 ಮೀ ಓಟ ಪ್ರಥಮ, 100 ಮೀ ಓಟ ಪ್ರಥಮ, 800 ಮೀಟರ್ ಓಟದಲ್ಲಿ ತೃತೀಯ ಸ್ಥಾನ, 4X100 ರಿಲೇ ಓಟ ದ್ವಿತೀಯ ಗುಂಡು ಎಸೆತ ಪ್ರಥಮ, ಚಕ್ರ ಎಸೆತ ದ್ವಿತೀಯ, ಬರ್ಜಿ ಎಸೆತದಲ್ಲಿ ದ್ವಿತೀಯ, ಉದ್ದ ಜಿಗಿತದಲ್ಲಿ ಪ್ರಥಮ, ಎತ್ತರ ಜಿಗಿತದಲ್ಲಿ ದ್ವಿತೀಯ, ತ್ರಿವಿಧ ಜಿಗಿತ ದ್ವಿತೀಯ ಬಹುಮಾನ ಪಡೆದುಕೊಂಡಿದ್ದಾರೆ.

ಬಾಲಕರ ವಿಭಾಗದಲ್ಲಿ ಥ್ರೋಬಾಲ್ ದ್ವಿತೀಯ, 4X100 ರಿಲೇ ಓಟ ದ್ವಿತೀಯ, 3000 ಮೀಟರ್ ಓಟ ಪ್ರಥಮ, 1500 ಮೀ ಪ್ರಥಮ, 200 ಮೀ ದ್ವಿತೀಯ, 400 ಮೀ ದ್ವಿತೀಯ, 800 ಮೀ ಪ್ರಥಮ, ಚಕ್ರ ಎಸೆತ ಪ್ರಥಮ, ಗುಂಡು ಎಸೆತದಲ್ಲಿ ದ್ವಿತೀಯ, ಬರ್ಜಿ ಎಸೆತ ದ್ವಿತೀಯ, ತ್ರಿವಿಧ ಜಿಗಿತದಲ್ಲಿ ಪ್ರಥಮ, ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನಗಳನ್ನು ಪಡೆಯುವುದರೊಂದಿಗೆ ಶಾಲೆಗೆ ಕೀರ್ತಿ ತಂದು ತಾಲೂಕು ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ರಾಧ ಮಹದೇವ್ ಅಭಿನಂದಿಸಿದ್ದಾರೆ. ಶಾಲೆಯ ಕ್ರೀಡಾ ತರಬೇತುದಾರರಾದ ವಿಜಯಕುಮಾರ್, ಶಿವಣ್ಣ, ಮುಖ್ಯ ಶಿಕ್ಷಕ ಶೇಖರ್, ಸಹ ಶಿಕ್ಷಕರು ಹಾಗೂ ಸಂಸ್ಥೆಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರುಗಳನ್ನು ಕೂಡ ಅಭಿನಂದಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಬೇಬಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಗದರ್ –2 (ಹಿಂ)	4 ಪ್ರದರ್ಶನಗಳು
ಸಂಗಂ	
ಕ್ಷೇತ್ರಪತಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಳಾಶಂಕರ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ರಾ.10.10ಕ್ಕೆ, ಜೈಲರ್ (ತ): ಮ.1ಕ್ಕೆ, ಬ್ಯಾಂಗ್ (ಕ): ಸಂ.4.30ಕ್ಕೆ ಓಎಂಜಿ 2 (ಹಿಂ): ರಾ.7.10ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.10.15ಕ್ಕೆ, ರಾ.7.25ಕ್ಕೆ, ಜೈಲರ್ (ಕ): ಮ.12.55ಕ್ಕೆ, ಗದರ್ 2 (ಹಿಂ): ಸಂ.4.05ಕ್ಕೆ, ಮಿಸ್ಟರ್ ಪ್ರಗ್ನೆಂಟ್ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಕ್ಷೇತ್ರಪತಿ (ಕ): ಬೆ.10.40ಕ್ಕೆ, ಆಚಾರ್ & ಕೋ (ಕ): ಮ.1.45ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಸಂ.4ಕ್ಕೆ, ಬ್ಲೂ ಬೀಟಲ್ (ಇಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.9.50ಕ್ಕೆ, ಮ.3.50ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗ್ರಾಮೀಣ ಭಾಗದ ಜನರಿಗೆ ಆರೋಗ್ಯ, ನೇತ್ರ ತಪಾಸಣೆಯಿಂದ ಅನುಕೂಲ



ಮಲ್ಕುಂಡಿ,ಆ.23– ಗ್ರಾಮೀಣ ಭಾಗದ ಜನತೆಗೆ ಆರೋಗ್ಯ ಹಾಗೂ ನೇತ್ರ ತಪಾಸಣೆ ಶಿಬಿರ ಬಹುಮುಖ್ಯವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಅಭಿಪ್ರಾಯಪಟ್ಟಿದ್ದಾರೆ.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹೊರಗಿನ ಸುಂದರ ಜಗತ್ತಿನ ಆಂತರಿಕ ವಿಶ್ಲೇಷಣೆಗೆ ಅನಂದಿಸುವುದಕ್ಕಾಗಿ ಕಣ್ಣಿನ ಅವಶ್ಯಕತೆ ಹೆಚ್ಚಾಗಿದೆ ಎಂದರು.

ಕಣ್ಣು ಹೇಗೆ ಅತಿ ಸುಂದರವಾದದ್ದನ್ನು ಗ್ರಹಿಸಿ ಮೆದುಳಿಗೆ ಸಂವಹಿಸುತ್ತದೆಯೊ ಹಾಗೆ ನಮ್ಮ ದೇಹದ ಅಂಗಾಂಗಗಳು ಕಾರ್ಯ ನಿರ್ವಹಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಚಿಕ್ಕ ಮಕ್ಕಳಿಗೂ ದೃಷ್ಟಿ ದೋಷದ ಸಮಸ್ಯೆ ಹಾಗೂ ಹೃದಯಾಘಾತ ಆಗುವುದು ಹೆಚ್ಚಾಗಿದೆ. ಆದ್ದರಿಂದ ಗ್ರಾಮೀಣ ಭಾಗದಲ್ಲಿ ಪ್ರತಿ ಗ್ರಾಮದಲ್ಲೂ ಉಚಿತ ತಪಾಸಣೆ ಶಿಬಿರ ಮಾಡಿ ಗ್ರಾಮೀಣ ಜನತೆಗೆ ಅನುಕೂಲ ಮಾಡಬೇಕಾಗಿದೆ ಎಂದು ತಿಳಿಸಿದರು.

ಬ್ಲಾಕ್ ಅಧ್ಯಕ್ಷರುಗಳಾದ ಕುರಹಟ್ಟಿ ಕೆ ಜಿ ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಸಿ.ಎಂ.ಶಂಕರ್, ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹೆಚ್.ಎಸ್. ಮಹದೇವಸ್ವಾಮಿ, ಗ್ರಾಪಂ ಸದಸ್ಯ ಗೋವಿಂದರಾಜು, ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷ ದಿನೇಶ್, ಮುಖಂಡರುಗಳಾದ ಸುಬ್ರಹ್ಮಣ್ಯ, ಸಾಧೀಕ್, ಮುಖ್ಯ ಶಿಕ್ಷಕ ಮಹದೇವಸ್ವಾಮಿ ಸೇರಿದಂತೆ ಪ್ರಮುಖರು ಹಾಜರಿದ್ದರು.

ಕಲ್ಮಳ್ಳಿ ಸಿದ್ದಪ್ಪ ನಿಧನ



ಸುತ್ತೂರು, ಆ.23– ನಂಜನಗೂಡು ತಾಲೂಕು ಕಲ್ಮಳ್ಳಿ ಗ್ರಾಮದ ಸಿದ್ದಪ್ಪ (78) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕಲ್ಮಳ್ಳಿ ಗ್ರಾಮದಲ್ಲಿ ನೆರವೇರಿತು.

ಜಿಲ್ಲಾ ಪೊಲೀಸರಿಂದ ಐವರ ಸೆರೆ; 22 ಬೈಕುಗಳ ವಶ

ಮೈಸೂರು, ಆ.23(ಆರ್‌ಕೆ)–ಐವರು ಖದೀಮರನ್ನು ಬಂಧಿಸಿರುವ ನಂಜನಗೂಡು ಮತ್ತು ತಿ.ನರಸೀಪುರ ಠಾಣೆ ಪೊಲೀಸರು, 22 ಬೈಕುಗಳನ್ನು ವಶಪಡಿಸಿಕೊಂಡಿದ್ದಾರೆ. ಆಗಸ್ಟ್ 18ರಂದು ನಂಜನಗೂಡು ಪಟ್ಟಣ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ ಕಳವು ಮಾಡಿದ್ದ 8 ಬೈಕುಗಳನ್ನು ವಶಪಡಿಸಿಕೊಂಡಿದ್ದು, ತಿ.ನರಸೀಪುರ ಠಾಣೆ ಪೊಲೀಸರು ಆಗಸ್ಟ್ 20ರಂದು ಇಬ್ಬರನ್ನು ಬಂಧಿಸಿ 14 ಬೈಕುಗಳನ್ನು ವಶಕ್ಕೆ ಪಡೆದಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಠಾಣೆ ವ್ಯಾಪ್ತಿಯ ಎನ್.ಬೇಗೂರು ಗ್ರಾಮದಲ್ಲಿ ಮನೆ ಹಿಂದಿನ ಹಿತ್ತಲಿನಲ್ಲಿ ಅಕ್ರಮವಾಗಿ ಬೆಳೆದಿದ್ದ ಗಾಂಜಾ ಪತ್ತೆ ಮಾಡಿರುವ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಓರ್ವನನ್ನು ಬಂಧಿಸಿದ್ದಾರೆ ಎಂದು ಎಸ್ಪಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

PUBLIC NOTICE

This is to inform the public in general that our client **Mr. ANANDA** S/o. Chalavaraju, is purchasing the Schedule property from Mr. Mohammed Siddique S/o. Late Mr. Khanumaiyan Saheb.

If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within 15 days from the notification with supporting documents, Due failing which my client will take it for granted that there are no claims/charges/objections whatsoever from whomsoever. Any claims/ objections received after stipulation period of 15 days will be dated have no claim and the same will be ignored.

SCHEDULE PROPERTY

The Property bearing **No. 2112 situated at Turab All Street, Mandl Mohalla, Mysore** and Measuring **East to West 34.00 Feet and North to South 39.00 Feet of site** and constructed RCC roof House thereon.

Issued by:
Roshan Hussain
Asadulla Khan
Saifuddin
Advocates Sadiq-Ul-Ameen Complex, Mahadev Pura Main Road, Udayagiri, Mysore

Sd/- **Asadulla Khan,** B.Sc., LL.B
Advocate & Notary, Shop No. 13,
Siddiq-ul-Ameen Masjid Complex
Mahadevapura Main Road,
Udayagiri, Mysore-19

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯಜಮಾನ್ ಸಿದ್ದೇಗೌಡರು
ನಿಧನ: 24-08-2021

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಯಶೋಧಮ್ಮ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.
ಹಳ್ಳಿಕೆರೆಹುಂಡಿ ಗ್ರಾಮ

FOR SALE

25 years old Teak Trees for sale near Maddur

interested may contact:
+91 93534 04668

ಇಂದಿನಿಂದ ಹೆಬ್ಬಾಳಿನಲ್ಲಿ ನ್ಯೂ ಚೆನ್ನೈ ಶಾಪಿಂಗ್ ಸೀರೆಗಳು ಮತ್ತು ರೆಡಿಮೇಡ್ ಗಾರ್ಮೆಂಟ್ಸ್ ಮೆಗಾ ಸೇಲ್

ಫ್ರಾಕ್, ಮಿಡ್ಡಿ, ವೆಸ್ಟನ್ ಡ್ರೆಸ್, ಚೂಡಿದಾರ್, ಲಾಂಗ್ ಫ್ರಾಕ್, ಕುರ್ತ, ಟಾಪ್ಸ್, ಲಾಂಗ್ ಟಾಪ್, ವೆಸ್ಟನ್ ಟಾಪ್ಸ್, ಲಾಂಗ್ ಟಾಪ್, ನೈಟಿಸ್, ಲೆಗ್ಗಿನ್ಸ್ ಜೆಗ್ಗಿನ್ಸ್, ಪಟಿಯಾಲ ಪ್ಯಾಂಟ್, ಪ್ಲಾಜಾ ಪ್ಯಾಂಟ್, 3/4 ಪ್ಯಾಂಟ್, ಫ್ಯಾನ್ಸಿ ಸೀರೆಗಳು, ಸಾಫ್ಟ್ ಸಿಲ್ಕ್ ಸೀರೆಗಳು, ವರ್ಕ್ ಸೀರೆಗಳು, ಕಾಟನ್ ಸೀರೆಗಳು, ಬಾಬಾ ಸೂಟ್, ಪ್ಯಾಂಟ್ ಶರ್ಟ್ಸ್, ಕಾಟನ್ ಪ್ಯಾಂಟ್, ಜೀನ್ಸ್ ಪ್ಯಾಂಟ್, ಟೀ-ಶರ್ಟ್ಸ್, ಟ್ರ್ಯಾಕ್ ಪ್ಯಾಂಟ್‌ಇನ್ನೂ ಮುಂತಾದ ಕುಟುಂಬ ಸದಸ್ಯರ ಎಲ್ಲಾ ಬಟ್ಟೆಗಳು **ಹೆಬ್ಬಾಳಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್‌ನಲ್ಲಿ** (CITB ಛತ್ರ) **ಮಾರಾಟ**

ಮಾರಾಟ 24.08.2023 ರಿಂದ 31.08.2023 ವರೆಗೆ



ಮೆಗಾ ಡಿಸ್ಕೌಂಟ್ ಸೇಲ್

ರೂ. 199
ಮಕ್ಕಳಿಂದ ದೊಡ್ಡವರ ವರೆಗೆ ಯಾವುದೇ ಬಟ್ಟೆ ಕೊಂಡರೂ

ಕುಟುಂಬದ ಎಲ್ಲರಿಗೂ ಬಟ್ಟೆಗಳು ಒಂದೇ ಸ್ಥಳದಲ್ಲಿ

CAR PARKING AVAILABLE

₹199/- ₹199/- ಮೆಗಾ ಸೇಲ್ ₹199/- ₹199/-

Sunday also shop open

ಸ್ಥಳ : ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ (CITB ಛತ್ರ) ಹೆಬ್ಬಾಳು 2ನೇ ಹಂತ, ಹೆಬ್ಬಾಳು, ಮೈಸೂರು
ಸಮಯ : ಬೆಳಗ್ಗೆ 10 ರಿಂದ ರಾತ್ರಿ 9-30 ರವರೆಗೆ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು ಹಾಸನ ಜಿಲ್ಲೆ–573102

ಫೋ.ನಂ.220350 E-mail: townpanchayath.arakalagud62@gmail.com
ನಂ/ಅ.ಪ.ಪಂ/ಕಿ.ಅ/ಟೆಂಡರ್/ 02/2023–24 ದಿನಾಂಕ:22–08–2023

ಟೆಂಡರ್ ಪ್ರಕಟಣೆ

ಅರಕಲಗೂಡು ಪಟ್ಟಣ ಪಂಚಾಯಿತಿಯ ಸ್ಥಳೀಯ ಅನುದಾನದಡಿ ಈ ಕೆಳಕಂಡ ಕೆಲಸಕ್ಕೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ವಾರ್ಷಿಕ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು ಟೆಂಡರ್‌ನ್ನು ದಿನಾಂಕ: 08/09/2023 ರ ಅಪರಾಹ್ನ 5.30 ಗಂಟೆಯೊಳಗೆ ಇ–ಪ್ರಕ್ಯೂರ್‌ಮೆಂಟ್ (https://eproc.karnataka.gov.in/eprocurement/login.seam) ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಸದರಿ ಟೆಂಡರ್‌ನ್ನು ದಿನಾಂಕ: 11/09/2023 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಪಟ್ಟಣ ಪಂಚಾಯಿತಿಯ ಕಾಮಗಾರಿ ಶಾಖೆ/ಕಿರಿಯ ಅಭಿಯಂತರರು, ಪಟ್ಟಣ ಪಂಚಾಯಿತಿ, ಅರಕಲಗೂಡು ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು (ದೂರವಾಣಿ: 08175–220252) ಕೆಲಸದ ವಿವರ ಈ ಕೆಳಕಂಡಂತಿದೆ. ಕ್ರಸಂ 1) DMA/2023-24/SE0672 ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ): 2519590.97 ಇ.ಎಂ.ಡಿ ರೂ. 63000.00 ಕೆಲಸದ ಕಾಲಾವಧಿ: 12 ತಿಂಗಳು.

ಸಹಿ/–ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು
ವಾಸಾಸಂಇ/ಹಿಸನಿ/ಹಾಸನ/231/ಕೆಎಸ್‌ಎಂಸಿಎ/235/2023–24

ಇದು ಸರಿಯಾದ ಸಮಯ



ನಿಮ್ಮ ತಾರಸಿ ಸೋರುತ್ತಿದೆಯೇ?

ತಾರಸಿ, ಬಚ್ಚಲುಮನೆ, ಶೌಚಾಲಯಗಳು, ಬಿರಿಕು ಬಿಟ್ಟ ಚಪ್ಪಡಿಗಳು, ನೀರಿನ ಟ್ಯಾಂಕ್‌ಗಳು, ನೀರಿನ ಸಂಪ್‌ಗಳು, ಈಜು ಕೊಳಗಳು
ಇವುಗಳ ದುರಸ್ಥಿಗಾಗಿ ಸಂಪರ್ಕಿಸಿ :
ಆಶೀರ್ವಾದ್ ವಾಟರ್ ಪ್ರೂಫಿಂಗ್ ಕಂಪೆನಿ
96111 86750

ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ – 571105

E-mail: itstaff_ulb_hunsur@yahoo.co.in Ph: 252048
ಸಂ: ಹುನಕಾ/ಘವನಿ/ನಗರಸಭಾ ನಿಧಿ&ಶೇ24.10/2023–24 ದಿ: 21.08.2023

ಇ ಟೆಂಡರ್ ಪ್ರಕಟಣೆ/ಟೆಂಡರ್ ಪ್ರಕಟಣೆ

ಹುಣಸೂರು ನಗರಸಭೆಯ ಪೌರಕಾರ್ಮಿಕರ ಕಲ್ಯಾಣ ಹಾಗು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 1) ಪೌರ ಕಾರ್ಮಿಕರ ಆರೋಗ್ಯ ತಪಾಸಣೆ (ಅಂದಾಜು–ರೂ.3.00 ಲಕ್ಷ, ಇಎಂಡಿ ರೂ 7500.00) 2) ಪೌರಕಾರ್ಮಿಕರಿಗೆ ಸಾಧನ ಸಲಕರಣೆ ಸರಬರಾಜು (ಅಂದಾಜು–ರೂ.2.50ಲಕ್ಷ, ಇಎಂಡಿ ರೂ 6,250.00) 3) ಪೌರಕಾರ್ಮಿಕರಿಗೆ ಸುರಕ್ಷಾ ಧಿರಿಸು ಸರಬರಾಜು (ಅಂದಾಜು–ರೂ.1.82 ಲಕ್ಷ, ಇಎಂಡಿ ರೂ.4550.00 4) ಸ್ವಚ್ಛತೆಗಾಗಿ ರಸಾಯನಿಕಗಳ ಸರಬರಾಜು (ಅಂದಾಜು– ರೂ.3.00 ಲಕ್ಷ, ಇಎಂಡಿ ರೂ.7500.00) 5) ಘನತ್ಯಾಜ್ಯ ವಸ್ತು ಸಾಗಣೆ ಟ್ರಾಕ್ಟರ್ & ಟ್ರೈಲರ್ ವಾಹನಗಳಿಗೆ ಟೈರ್ ಮತ್ತು ಟ್ಯೂಬ್ ಸರಬರಾಜು (ಅಂದಾಜು–ರೂ.3.50 ಲಕ್ಷ, ಇಎಂಡಿ ರೂ.8750.00) 6) ಘನತ್ಯಾಜ್ಯ ವಸ್ತು ಸಾಗಣೆ ಅಟೋ ಟಿಪ್ಪರ್‌ಗಳ ಬಾಡಿ & ಬ್ಯಾಕ್ ಡೋರ್ ದುರಸ್ಥಿ (ಅಂದಾಜು–ರೂ.2.50 ಲಕ್ಷ, ಇಎಂಡಿ ರೂ.6250.00) 7) ನಗರಸಭಾ ವ್ಯಾಪ್ತಿಯ ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ (ABC program) (ಅಂದಾಜು–ರೂ.3.00 ಲಕ್ಷ, ಇಎಂಡಿ ರೂ.7500.00) ಮಾಡಲು ಟೆಂಡರ್ ಕರೆಯಲಾಗಿರುತ್ತದೆ. ಆಸಕ್ತಿಯುಳ್ಳ ವ್ಯಕ್ತಿ/ಸಂಸ್ಥೆಗಳು ಕ್ರ ಸಂ (1) ರಿಂದ (6) ರವರೆಗೆ ಟೆಂಡರ್ ದಸ್ತಾವೇಜನ್ನು ರೂ 500+ ತೆರಿಗೆ ಪಾವತಿಸಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕ್ರಸಂ(7)ಕ್ಕೆ ಪೋರ್ಟಲ್: http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಸ್ತಾವೇಜು ಪಡೆಯಲು ಕಡೆಯ ದಿ: 07.09.2023 ಆಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ದಿ: 08.09.2023ರ ಸಂಜೆ 5.30 ರೊಳಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 11.09.2023 ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಕಛೇರಿಯ ಆರೋಗ್ಯ ವಿಭಾಗದಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು, ನಗರಸಭೆ, ಹುಣಸೂರು
ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ಹುಣಸೂರು
DIPR/DDMYS/KSMCA/232/2023-24

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು-571105

ಸಂಖ್ಯೆ/ಬಿ3/ಉಗ್ರಾಣ/ಸಿಆರ್-26/2023-24 ದೂರವಾಣಿ : 08222-252041
EMail:dirnagarahole@aranya.gov.in ದಿನಾಂಕ: 19/08/2023

ಮರು ಟೆಂಡರ್ ಅಧಿಸೂಚನೆ

ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023-24ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪ್ರವಾಸೋದ್ಯಮ ಚಟುವಟಿಕೆ / ಪ್ರಚಾರ ಸಾಮಾಗ್ರಿಗಳು / ನೆನಪಿನ ಕಾಣಿಕೆ ಸಾಮಾಗ್ರಿಗಳ ಸರಬರಾಜು ಸಂಬಂಧ ಅಧಿಕೃತ ವಿನ್ಯಾಸಗಾರರು, ಉತ್ಪಾದಕರು ಮತ್ತು ಮಾರಟಾಗಾರರಿಂದ ರೂ. 20 ರಿಂದ 30 ಲಕ್ಷಗಳವರೆಗಿನ ಮೊತ್ತಕ್ಕೆ ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ (http://kppp.karnataka.gov.in) ಮೂಲಕ ದಿನಾಂಕ: 28/08/2023ರಂದು ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ದಿನಾಂಕದಂದು ಯಾರು ಭಾಗವಹಿಸದೇ ಇದ್ದಲ್ಲಿ ದಿನಾಂಕ: 02/09/2023 ರಂದು ಮರು ಟೆಂಡರ್ ನಡೆಸಲಾಗುವುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ರೀಕಾಲ್ ಮಾಡಲಾಗುವುದು. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ನಲ್ಲಿ ಭಾಗವಹಿಸುವವರು ಈ ಕೆಳಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು.

LOANS

- Startup for new business
- Industrial start ups
- Industrial Purchasing Loans
- Machinery & Equipment Purchasing Loans
- MSME Loans
- Hotel Purchasing & Exisiting Hotels. 5 Lacs and above

Contact: 8296400433

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವಕ-8/102/2022-23 ದಿನಾಂಕ: 30.11.2022

ಪತ್ರಿಕಾ ಪ್ರಕಟಣೆ

ಶ್ರೀ ಎಸ್.ಅಬ್ದುಲ್ ಅಜೀಜ್ ಎಂಬುವರಿಗೆ ಕ್ಯಾತಮಾರನಹಳ್ಳಿ 4ನೇ ಹಂತ ಬಡಾವಣೆಯಲ್ಲಿ ಎಂಐಜಿ-1 ವರ್ಗದ ಮನೆ ಸಂಖ್ಯೆ.780 ಅಳತೆ 5.70 x 13.00 ಮೀಟರ್ ಮನೆಯು ದಿನಾಂಕ: 11.03.1991 ರಂದು ಪ್ರಾಧಿಕಾರದಿಂದ ಮಂಜೂರಾಗಿದ್ದು, ಗುತ್ತಿಗೆ ಕರಾರು ಪತ್ರವನ್ನು ಪಡೆದು ದಿನಾಂಕ:03.08.1993 ರಂದು ನೊಂದಾಯಿಸಿ, ದಿನಾಂಕ: 13.08.1993 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ಹಾಗೂ ದಿ:18.04.2012 ರಂದು ಕ್ಲಿಯರೇನ್ಸ್ ಪತ್ರ ಪಡೆದಿರುತ್ತಾರೆ.

ನಂತರ ಮಂಜೂರಾತಿದಾರರಾದ ಶ್ರೀ ಎಸ್.ಅಬ್ದುಲ್ ಅಜೀಜ್ ರವರು ತಮ್ಮ ಪ್ರತಿನಿಧಿ ಶ್ರೀ ಮೊಹಮ್ಮದ್ ಹನೀಫ್ ರವರಿಗೆ ಉಪ ನೊಂದಣಾಧಿಕಾರಿ ಮೈಸೂರು ದಕ್ಷಿಣ ರವರ ಕಛೇರಿಯಲ್ಲಿ Iನೇ ಪುಸ್ತಕದ 75ನೇ ಸಂಪುಟದಲ್ಲಿ 167-168 ನೇ ಪುಟದಲ್ಲಿ 624ನೇ ನಂಬರಾಗಿ ದಿನಾಂಕ: 14.08.1996 ರಂದು ನೊಂದಾಯಿತ ಜಿ.ಪಿ.ಎ ನೀಡಿರುತ್ತಾರೆ.

ಜಿ.ಪಿ.ಎ ದಾರರಾದ ಶ್ರೀ ಮೊಹಮ್ಮದ್ ಹನೀಫ್ ರವರು ಮನೆ ಸಂಖ್ಯೆ 780 ಅನ್ನು ಶ್ರೀಮತಿ ಖತಿಜಾ ಬೀ ರವರಿಗೆ ಉಪ ನೊಂದಣಾಧಿಕಾರಿ ಮೈಸೂರು ಉತ್ತರ ರವರ ಕಛೇರಿಯಲ್ಲಿ ಖನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್-11340-2012-13 ಸಿ.ಡಿ.ನಂಬರ ಎಂವೈಎನ್ ಡಿ332 ದಿನಾಂಕ:20.07.2012 ರಂದು ಶುದ್ಧಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ.

ನಂತರ ಕ್ರಯದಾರರಾದ ಶ್ರೀಮತಿ ಖತಿಜಾ ಬೀ ರವರು ಮನೆ ಸಂಖ್ಯೆ.780 ನ್ನು ತಮ್ಮ ಮಗಳಾದ ಶ್ರೀಮತಿ ಮುಫೀದ ರವರಿಗೆ ಉಪ ನೊಂದಣಾಧಿಕಾರಿ ಮೈಸೂರು ಪೂರ್ವ ರವರ ಕಛೇರಿಯಲ್ಲಿ Iನೇ ಪುಸ್ತಕದ ದಸ್ತಾವೇಜು ನಂಬರ ಎಂವೈಇ-03798-2021-22 ಆಗಿ ಸಿ.ಡಿ.ನಂಬರ ಎಂವೈ ಇಡಿ765 ನೇ ದ್ದರಲ್ಲಿ ದಿನಾಂಕ:21.08.2021 ರಂದು ನೊಂದಾಯಿತ ದಾನಪತ್ರ ಮಾಡಿರುತ್ತಾರೆ.

ದಾನಪತ್ರ ಪಡೆದ ಶ್ರೀಮತಿ ಮುಫೀದ ಕೋಂ ಶ್ರೀ ಅನೀಸ್ ಖಾನ್ ರವರು ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಅರ್ಜಿಸಲ್ಲಿಸಿರುವುದರಿಂದ ಸದರಿಯವರ ಹೆಸರಿಗೆ ನಿಯಮಾನುಸಾರ ದಂಡ ಶುಲ್ಕ ಪಾವತಿಸಿಕೊಂಡು ವರ್ಗಾವಣೆ ಮಾಡಿ ಕ್ರಯಪತ್ರ ನೀಡಬೇಕಾಗಿದ್ದು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು, ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್ ವಲಯ ಕಛೇರಿ – 8
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

